
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 49 | ನವೆಂಬರ್ 29–ಡಿಸೆಂಬರ್ 5, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಪ್ರೊ. ಟಿ.ವಿ.ಎಂ. ಲಾಲ್‌ಸಲಾಂ



ಐತಿಹಾಸಿಕ ರೈತ ಹೋರಾಟ

ವ್ಯಾಪಕ ಪರಿಣಾಮಗಳನ್ನು ಬೀರುವ ವಿಜಯ

- ದುರಹಂಕಾರಕ್ಕೆ ಸೋಲು
- ಜನ ಹೋರಾಟದ ರಾಜಕೀಯದ ಶಕ್ತಿ
- ವರ್ಷವಾಯಿತು – ಹೋರಾಟ ಮುಂದುವರೆಯುತ್ತಿದೆ.

ಶಾಸಕರ ನಿಧಿಯೆಷ್ಟು? ಶಾಸಕರು ಬಳಸಿದ್ದೆಷ್ಟು?







ಸರ್ಕಾರ ಸಂಸತ್ತಿನಲ್ಲಿ ಕಾಯ್ದೆಗಳನ್ನು ಹಿಂಪಡೆಯುವ ವರೆಗೆ ಹೋರಾಟ ನಿಲ್ಲದು
ಲಕ್ನೌ ರೈತ ಮಹಾಪಂಚಾಯತ್ ಘೋಷಣೆ

ಕೇಂದ್ರ ಸರಕಾರದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕೆಂದು ಸುಮಾರು ಒಂದು ವರ್ಷದಿಂದ ಪ್ರತಿಭಟಿಸುತ್ತಿರುವ ರೈತರು, ಅದನ್ನು ಹಿಂತೆಗೆದುಕೊಳ್ಳುವ ಪ್ರಧಾನಿ ಮೋದಿ ಘೋಷಣೆಯ ಬಳಿಕವೂ ಹೋರಾಟ ನಿಲ್ಲುವುದಿಲ್ಲಎಂದು ನವಂಬರ್ 22ರಂದು ಲಕ್ನೌನಲ್ಲಿ ನಡೆದ ರೈತರ ಮಹಾಪಂಚಾಯತ್ ಸಾರಿ ಹೇಳಿದೆ. ಸಂಸತ್ತಿನಲ್ಲಿ ಈ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ವರೆಗೂ ಚಳುವಳಿಯನ್ನು ನಿಲ್ಲಿಸಿ ಮನೆಗೆ ಹೋಗುವ ಪ್ರಶ್ನೆಯೇ ಇಲ್ಲ. ಅಲ್ಲದೆ ಈ ಹೋರಾಟದ ಇನ್ನೂ ಎರಡು ಪ್ರಮುಖ ಆಗ್ರಹಗಳಿವೆ– ಕನಿಷ್ಟ ಬೆಂಬಲ ಬೆಲೆಗಳನ್ನು ಖಾತ್ರಿಪಡಿಸುವ ಕಾಯ್ದೆ ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಹಿಂತೆಗೆದುಕೊಳ್ಳುವುದು.

ಈ ಕುರಿತಂತೆ ಈಗಾಗಲೇ ಸಂಯುಕ್ತ ಕಿಸಾನ್ ಮೋರ್ಚಾ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಆರು ಆಗ್ರಹಗಳನ್ನು ಮುಂದಿಡಲಾಗಿದೆ.

ಲಕ್ನೋದ ಇಕೋ ಗಾರ್ಡನ್‌ನಲ್ಲಿ ನಡೆದ ಈ ಕಿಸಾನ್ ಮಹಾಪಂಚಾಯತ್‌ನಲ್ಲಿ ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್‌ನ ಹಲವಾರು ಜಿಲ್ಲೆಗಳಿಂದ ಸಾವಿರಾರು ರೈತರು ಆಗಮಿಸಿದ್ದರು. ಕೆಂಪು, ಹಸಿರು, ಹಳದಿ ಬಾವುಟಗಳ ನಡುವೆ 'ರೈತ ಐಕ್ಯತೆ ಚಿರಾಯುವಾಗಲಿ', 'ಸರ್ವಾಧಿಕಾರಶಾಹಿ ನಡೆಯದು', 'ಅಜಯ್ ಮಿಶ್ರಗೆ ಜೈಲು' ಮುಂತಾದ ಘೋಷಣೆಗಳು ಮೊಳಗಿದವು.

ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ನೇತೃತ್ವದಲ್ಲಿ ಈ ಬೃಹತ್ ಕಿಸಾನ್ ಮಹಾಪಂಚಾಯತ್‌ನಲ್ಲಿ ಹಲವು ಮುಖಂಡರು ಮಾತನಾಡಿದರು. ಲಖಿಂಪುರ ಖೇರಿಯುಲ್ಲಿ ನಡೆದ ಹಿಂಸಾಚಾರ ಘಟನೆಯಲ್ಲಿ ಪ್ರಾಣ ತೆತ್ತ ರೈತ ಪ್ರತಿಭಟನಾಕಾರರ ಕುಟುಂಬದವರೂ ವೇದಿಕೆಯಲ್ಲಿದ್ದರು. ರೈತ ಮುಖಂಡ ಜೋಗಿಂದರ್ ಸಿಂಗ್ "ಪ್ರಧಾನಿ ಮಾಡಿದ ಘೋಷಣೆಯನ್ನು ನಾವು ನಂಬುವುದಿಲ್ಲ. ಸರ್ಕಾರ ಶ್ವೇತಪತ್ರ ಹೊರಡಿಸಿದ ನಂತರವೇ ನಮ್ಮ ಹೋರಾಟವನ್ನು ಹಿಂಪಡೆಯಲಾಗುತ್ತದೆ ಎಂದು ಘೋಷಿಸುತ್ತೇವೆ" ಎಂದು ಹೇಳಿದರು.

ಉತ್ತರಪ್ರದೇಶದಲ್ಲಿ ರೈತರ ಪ್ರತಿಭಟನೆಯ ಪ್ರಮುಖ ಮುಖಂಡರಾದ ರಾಕೇಶ್ ಟಿಕಾಯತ್ ಮತ್ತು ಬಲ್ಬೀರ್ ಸಿಂಗ್ ರಾಜೇವಾಲಾ ಸೇರಿದಂತೆ ಭಾರತ್ ಕಿಸಾನ್ ಯೂನಿಯನ್ (ಬಿಕೆಯು) ನಾಯಕರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನಿ ಅಹಂಕಾರದ ರೋಗದಿಂದ ಬಳಲುತ್ತಿದ್ದಾರೆ. ಬಂಗಾಳದ ಜನರು ಅವರಿಗೆ ಸಣ್ಣ ಚುಚ್ಚುಮದ್ದನ್ನು ನೀಡಿದರು, ಅದು ಸ್ವಲ್ಪ ಪರಿಣಾಮಕಾರಿ ಎಂದು ಸಾಬೀತಾಯಿತು. ಆದರೆ ಅವರಿಗೆ ದೊಡ್ಡ ಪ್ರಮಾಣದ ಅಗತ್ಯವಿದೆ ಮತ್ತು ಅದು ಉತ್ತರ ಪ್ರದೇಶದ ಚುನಾವಣೆಯಾಗಿದೆ' ಎಂದು ಈ ಮುಖಂಡರುಗಳು ಹೇಳಿದರು.

ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲಲ್ ಮಾತನಾಡುತ್ತ ಪ್ರಧಾನ ಮಂತ್ರಿ ನರೇಂದ್ರ ಮೋದಿ ಒಬ್ಬ ದುಹಂಕಾರೀ ಸರಾವಾಧಿಕಾರಿ, ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ ಎಂದರು. ಈ ಕಾಯ್ದೆಗಳನ್ನು ಪಾಸು ಮಾಡಿಸಿಕೊಳ್ಳುವಾಗ ರೈತರನ್ನಷ್ಟೇ ಅಲ್ಲ, ಸಂಸತ್ತನ್ನೂ ವಿಶ್ವಾಸಕ್ಕೆ ತಗೊಳ್ಳಲಿಲ್ಲ. ಇದನ್ನು ಹಿಂತೆಗೆದುಕೊಳ್ಳುವಾಗಲೂ ತಮ್ಮ ಸಂಪುಟವನ್ನೂ ಕೇಳಿಲ್ಲ. ಈ ಚಳುವಳಿಗೆ ಕಾರ್ಮಿಕರ ಬೆಂಬಲವಿದೆ, ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳ ಬೆಂಬಲವಿದೆ. ಇದನ್ನು ಸೋಲಿಸುವುದು ಸಾಧ್ಯವಿಲ್ಲ ಎಂದು ಹೇಳಿದ ಅವರು ಈ ಚಳುವಳಿಯ ಸಹನಶೀಲ ಮತ್ತು ಶಾಂತಿಯುತ ಸ್ವರೂಪವೇ ಅದರ ವಿಜಯವನ್ನು ಖಾತ್ರಿಪಡಿಸುತ್ತದೆ ಎಂದರು.

ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಡಾ.ಅಶೋಕ ಧವಳೆ ಕೂಡ ಮಹಾಪಂಚಾಯತನ್ನು ಉದ್ದೇಶಿಸಿ ಮಾತನಾಡುತ್ತ, ಮುಂಬರುವ ದಿನಗಳಲ್ಲಿ ಮಿಷನ್ ಉತ್ತರಪ್ರದೇಶ–ಉತ್ತ್ರಾಖಂಡ ವೇಗ ಪಡೆಯುತ್ತದೆ, ರೈತರು ತನ್ನ ಹೋರಾಟದ ಮೂಲಕ ಮೋದಿ–ಷಾ ಮಾತ್ರವಲ್ಲ ಅಂಬಾನಿ–ಅದಾನಿಯನ್ನೂ ಸೋಲಿಸಿದ್ದಾರೆ ಎಂದರು.

ಈ ಚಳುವಳಿಯ ಇನ್ನೊಬ್ಬ ಪ್ರಮುಖ ಮುಖಂಡರಾದ ಯೋಗೇಂದ್ರ ಯಾದವ್ ಮಾತಾಡುತ್ತ ವ ನಿಲ್ಲುವಿದಲ್ಲರಿಗೆ ಬೇಕಾದ ಉಡುಗೊರೆಯನ್ನು ಕೊಡಬೇಕು ಎಂದರು.

ಚಳುವಳಿಕಾರರಿಗೆ ಧೈರ್ಯವಿದ್ದರೆ ಲಕ್ನೌಗೆ ಬರಲಿ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಈ ಹಿಂದೆ ಬೆದರಿಕೆ ಹಾಕಿದ್ದರು. ಅವರ ಸವಾಲನ್ನು ಸ್ವೀಕರಿಸಿ ರೈತರು ಲಕ್ನೌಗೆ ಬರುತ್ತಿದ್ದಾಗ ಅವರು ಗೋರಖ್‌ಪುರಕ್ಕೆ ಹೊರಟರು ಎಂಬ ಮಾತೂ ಮಹಾಪಂಚಾಯತಿನಲ್ಲಿ ಕೇಳಬಂತು.

ಮುಂಬರುವ ವಾರಗಳಲ್ಲಿ ಪ್ರಧಾನ ಮಂತ್ರಿಗಳ ಚುನಾವಣಾ ಕ್ಷೇತ್ರ ವಾರಾಣಸಿಯಲ್ಲಿ ಇನ್ನೊಂದು ಮಹಾಪಂಚಾಯತ್ ನಡಯಲಿದೆ ಎಂದು ಇಲ್ಲಿ ಪ್ರಕಡಿಸಲಾಯಿತು.

ರೈತ ಹೋರಾಟಗಾರರು ಮನೆಗೆ ಮರಳಬೇಕಾದರೆ 6 ಆಗ್ರಹಗಳನ್ನು ಈಡೇರಿಸಿ–ಪ್ರಧಾನಿಗೆ ಎಸ್‌ಕೆಎಂ ಬಹಿರಂಗ ಪತ್ರ

ತಮ್ಮ ಬೆಂಬಲಿಗರನ್ನೂ ಚಕಿತಗೊಳಿಸುವ ರೀತಿಯಲ್ಲಿ ವಿವಾದಿತ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವ ನಿರ್ಧಾರವನ್ನು ಪ್ರಧಾನ ಮಂತ್ರಿಗಳು ಪ್ರಕಟಿಸಿದ ನಂತರವೂ ವಿಚಲಿತರಾಗದ ರೈತ ಮುಖಂಡರು ನವಂಬರ್ 21 ರಂದು ಪ್ರಧಾನ ಮಂತ್ರಿಗಳಿಗೆ ಒಂದು ಬಹಿರಂಗ ಪತ್ರ ಬರೆದಿದ್ದಾರೆ. ರೈತರು ಈಗ ತಮ್ಮ ಮನೆಗಳಿಗೆ ಮರಳಬೇಕು ಎಂಬ ಪ್ರಧಾನಿಗಳ ಕೋರಿಕೆಯನ್ನು ಮನ್ನಿಸಲು ಆರು ಶರತ್ತುಗಳನ್ನು ಈ ಪತ್ರದಲ್ಲಿ ಹಾಕಿದ್ದಾರೆ.

ದೆಹಲಿಯ ಸಿಂಘು ಗಡಿಯಲ್ಲಿನ ಪ್ರತಿಭಟನಾ ಸ್ಥಳದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಪ್ರಕಟಿಸಲಾಯಿತು.

ಕೇಂದ್ರ ಸರ್ಕಾರವು ಎಲ್ಲಾ ಮೂರು ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳುವವರೆಗೆ ಮತ್ತು ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಖಾತ್ರಿಪಡಿಸುವವರೆಗೆ ಹೋರಾಟ ಮುಂದು ವರಿಯುತ್ತದೆ ಎಂದಿರುವ ರೈತ ಸಂಘಟನೆಗಳು ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ತಿಳಿಸಿದರು.

"ಪ್ರಧಾನಿಗಳಿಂದ ದೇಶಕ್ಕೆ ಸಂದೇಶ ಮತ್ತು ರೈತರಿಂದ ಪ್ರಧಾನ ಮಂತ್ರಿಗಳಿಗೆ ಸಂದೇಶ" ಎಂಬ ಶಿರೋನಾಮೆಯ ಈ ಬಹಿರಂಗ ಪತ್ರ "11 ಸುತ್ತುಗಳ ಮಾತುಕತೆಗಳ ನಂತರ , ತಾವು ಒಂದು ದ್ವಿಪಕ್ಷೀಯ ಇತ್ಯರ್ಥದ ಬದಲು ಏಕಪಕ್ಷೀಯ ಘೋಷಣೆಯ ದಾರಿ ಹಿಡಿದಿದ್ದೀರಿ" ಎಂದು ಖೇದ ವ್ಯಕ್ತಪಡಿಸುತ್ತ, ಈ ಕಾಯ್ದೆಗಳನ್ನು ಅಧಿಕೃತವಾಗಿ ಹಿಂತೆಗೆದುಕೊಳ್ಳುವ ವರೆಗೆ ತಮ್ಮ ಹೋರಾಟ ನಿಲ್ಲುವುದಿಲ್ಲ, ಎಂಎಸ್‌ಪಿ ಖಾತರಿ ಸೇರಿದಂತೆ ಆರು ಬೇಡಿಕೆಗಳನ್ನು ಈಡೇರಿಸುವವರೆಗೂ ತಮ್ಮ ಹೋರಾಟವನ್ನು ಕೈಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಅಲ್ಲದೆ, ಈ ಹಿಂದೆ ನಿರ್ಧರಿಸಿದ ವೇಳಾಪಟ್ಟಿಯಂತೆ ವಿವಿಧ ಪ್ರತಿಭಟನೆಗಳನ್ನು ಮುಂದುವರಿಸಲಿವೆ. ತದನಂತರ ನವೆಂಬರ್ 27 ರಂದು ಪ್ರಮುಖ ಸಭೆ ನಡೆಸಲಾಗುವುದು ಎಂದು ರೈತ ಮುಕಮಡರು ಹೇಳಿದ್ದಾರೆ.

ಆರು ಬೇಡಿಕೆಗಳು ಹೀಗಿವೆ:

1. ಎಲ್ಲಾ ಕೃಷಿ ಉತ್ಪನ್ನಗಳಿಗೆ "ಸಮಗ್ರ ಉತ್ಪಾದನಾ ವೆಚ್ಚ"ದ ಆಧಾರದ ಮೇಲೆ ಕನಿಷ್ಠ ಬೆಂಬಲ ಬೆಲೆ(ಸಿ2+50%) ಎಲ್ಲಾ ರೈತರ ಶಾಸನಬದ್ಧ ಹಕ್ಕು ಆಗಬೇಕು. ಇದರಿಂದ ದೇಶದ ಪ್ರತಿಯೊಬ್ಬ ರೈತರ ಬೆಳೆಗೆ ಸರ್ಕಾರ ಘೋಷಿಸಿದ ಕನಿಷ್ಠ ಬೆಂಬಲ ಬೆಲೆಯನ್ನಾದರೂ ಖಾತ್ರಿಪಡಿಸಿಕೊಳ್ಳಬಹುದು
2. ವಿದ್ಯುತ್ ತಿದ್ದುಪಡಿ ಮಸೂದೆ 2020/2021ನ್ನು ಹಿಂಪಡೆಯಬೇಕು.
3. ವಾಯು ಗುಣಮಟ್ಟ ನಿರ್ವಹಣಾ ಆಯೋಗ ಕಾಯ್ದೆ, 2021ರಲ್ಲಿನ ರೈತರನ್ನು ದಂಡಿಸುವ ಅಂಶಗಳನ್ನು ತೆಗೆಯಬೇಕು.
4. ದೆಹಲಿ, ಹರಿಯಾಣ, ಚಂಡೀಗಢ, ಉತ್ತರ ಪ್ರದೇಶ ಮತ್ತು ಇತರ ಹಲವಾರು ರಾಜ್ಯಗಳಲ್ಲಿ ಈ ಚಳವಳಿಯ ಸಂದರ್ಭದಲ್ಲಿ (ಜೂನ್ 2020 ರಿಂದ ಇಲ್ಲಿಯವರೆಗೆ) ಪ್ರತಿಭಟನಾಕಾರ ರೈತರ ವಿರುದ್ಧ ಹಾಕಿರುವ ಸಾವಿರಾರು ಪ್ರಕರಣಗಳನ್ನು ಹಿಂಪಡೆಯಬೇಕು.
5. ಲಖಿಂಪುರ ಖೇರಿ ಹತ್ಯೆ ಪ್ರಕರಣದ ಅತ್ಯಂತ ಪ್ರಮುಖ ಆರೋಪಿ ಮತ್ತು ಸೆಕ್ಷನ್ 120 ಬಿ ಆರೋಪಿಯಾಗಿರುವ ಅಜಯ್ ಮಿಶ್ರಾ ಟೆನಿ ಅವರನ್ನು ವಜಾಗೊಳಿಸಬೇಕು ಮತ್ತು ಬಂಧಿಸಬೇಕು.
6. ಈ ಕೃಷಿ ಕಾಯ್ದೆ ವಿರುದ್ಧದ ಹೋರಾಟದಲ್ಲಿ ಇದುವರೆಗೆ ಸುಮಾರು 700 ರೈತರು ತಮ್ಮ ಪ್ರಾಣವನ್ನೇ ಅರ್ಪಿಸಿದ್ದಾರೆ. ಅವರ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ವಸತಿ ಬೆಂಬಲ ನೀಡಬೇಕು. ಹುತಾತ್ಮ ರೈತರ ಸ್ಮರಣಾರ್ಥ ಹುತಾತ್ಮರ ಸ್ಮಾರಕ ನಿರ್ಮಿಸಲು ಸಿಂಘು ಗಡಿಯಲ್ಲಿ ಭೂಮಿ ನೀಡಬೇಕು.

"ಈಗ ಮನೆಗೆ ಹಿಂತಿರುಗಬೇಕು ಎಂದು ರೈತರಿಗೆ ನೀವು ಮನವಿ ಮಾಡಿದ್ದೀರಿ. ನಾವೂ ಬೀದಿಗಳಲ್ಲಿ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ ಎಂದು ನಿಮಗೆ ಭರವಸೆ ನೀಡಬಯಸುತ್ತೇವೆ. ಈ ಇತರ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬೇಗ ಪರಿಹರಿಸಿದ ನಂತರ, ನಾವು ನಮ್ಮ ಮನೆಗಳು, ಕುಟುಂಬಗಳು ಮತ್ತು ಕೃಷಿಗೆ ಮರಳಬೇಕೆಂದು ಬಯುಸುತ್ತೇವೆ. ನಿಮುಗೂ ಅದೇ ಬೇಕಾದರೆ, ಮೇಲಿನ ಆರು ವಿಷಯಗಳ ಕುರಿತು ಸರ್ಕಾರವು ಕೂಡಲೇ ಸಂಯುಕ್ತ ಕಿಸಾನ್ ಮೋರ್ಚಾದೊಂದಿಗೆ ಮಾತುಕತೆಯನ್ನು ಪುನರಾರಂಭಿಸಬೇಕು" ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

ನವೆಂಬರ್ 24 ರಂದು ಸರ್ ಛೋಟು ರಾಮ್ ಜನ್ಮದಿನದಂದು ಕಿಸಾನ್ ಮಜ್ದೂರ್ ಸಂಘರ್ಷ್ ದಿವಸ್ ಆಚರಣೆ ನಡೆಯುತ್ತದೆ, ಈ ಹೋರಾಟ ಒಂದು ವರ್ಷ ಪೂರೈಸುವ ದಿನ ನವಂಬರ್ 26 ರಂದು ಪಂಜಾಬ್ ಮತ್ತು ಹರಿಯಾಣದಿಂದ ಮೊದಲ ಹಂತದಲ್ಲಿ ಸಿಂಘು ಗಡಿಗೆ ಆಗಮಿಸಲಿರುವ ರೈತರು ಟ್ರಾಕ್ಟರ್ ರ್‍ಯಾಲಿ ಮೂಲಕ ವರ್ಷಾಚರಣೆ ಮತ್ತು ಸಂಸತ್ತಿನ ಚಳೀಗಾಲದ ಅಧಿವೇಶನ ಆರಂಭವಾಗುವ ನವೆಂಬರ್ 29 ರಿಂದ ದೆಹಲಿಯಲ್ಲಿ ಸಂಸತ್ತಿನ ವರೆಗೆ ಪ್ರತಿದಿನ 500 ರೈತರಿಂದ ಟ್ರ್ಯಾಕ್ಟರ್ ರ್‍ಯಾಲಿ ನಡೆಯುತ್ತದೆ ಎಂದು ರೈತ ಮುಖಂಡರು ಹೇಳಿದ್ದಾರೆ.

ಐತಿಹಾಸಿಕ ರೈತ ಹೋರಾಟ

ಶ್ರೀರಂಗಪಟ್ಟಣದ ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದ ರೈತರು

ಮಂಡ್ಯ: ಕೇಂದ್ರದ ಕರಾಳ ಕೃಷಿ ಕಾಯ್ದೆಗಳ ವಾಪಸ್ಸಾತಿಯೊಂದಿಗೆ ರಾಜ್ಯದ ಬಿಜೆಪಿ ಸರ್ಕಾರ ಜಾರಿಗೊಳಿಸಲು ಹೊರಟಿರುವ ಎಪಿಎಂಸಿ ಮತ್ತು ಭುಸುಧಾರಣ ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ವಾಪಸ್ಸು ಪಡೆಬೇಕೆಂದು ಸಂಯುಕ್ತ ಹೋರಾಟ ಕರ್ನಾಟಕ ನೇತೃತ್ವದಲ್ಲಿ ಇಂದು ರಾಜ್ಯದ ವಿವಿದೆಡೆ ರಾಷ್ಟ್ರೀಯ ಹೆದ್ದಾರಿಗಳನ್ನು ತಡೆಯುವ ಮೂಲಕ ಪ್ರತಿಭಟನೆ ನಡೆಸಿದರು.

ಕೇಂದ್ರ ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರ್ಕಾರದ ಮೂರು ಪ್ರಮುಖ ಕೃಷಿ ಕಾಯ್ದೆಗಳು ದೇಶದ ರೈತರ ಪಾಲಿಗೆ ಮರಣ ಶಾಸನವಾಗಿದೆ. ಅವುಗಳನ್ನು ಹಿಂಪಡೆಯಬೇಕೆಂದು ಆಗ್ರಹಿಸಿ 2020ರ ನವೆಂಬರ್ 26ರಿಂದ ರೈತರು ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ, ದೇಶದ ರಾಜಧಾನಿ ದೆಹಲಿಯ ಗಡಿ ಪ್ರದೇಶಗಳಲ್ಲಿ ಪ್ರತಿಭಟನಾನಿರತರಾಗಿರುವ ರೈತರು ಕಳೆದ ಒಂದು ವರ್ಷದಿಂದ ಬೀಡು ಬಿಟ್ಟಿದ್ದಾರೆ. ?ಕರಾಳ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು–ಅಲ್ಲಿಯವರೆಗೂ ತಾವು ಹೋರಾಟವನ್ನು ಹಿಂಪಡೆಯುವುದಿಲ್ಲ? ಎಂದು ಪಟ್ಟು ಹಿಡಿರುವ ಸಾವಿರಾರು ಸಂಖ್ಯೆಯ ರೈತರು ರೈತ ಆಂದೋಲವನ್ನು ಆರಂಭಿಸಿದರು.

ಇಂದು ರೈತ ಹೋರಾಟಕ್ಕೆ ಒಂದು ವರ್ಷದ ಹಿನ್ನೆಲೆಯಲ್ಲಿ ದೇಶದ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳನ್ನು ತಡೆಯಬೇಕೆಂದು ಕರೆ ನೀಡಿದ ಸಂಯುಕ್ತ ಕಿಸಾನ್ ಮೋರ್ಚಾ ರೈತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದವು.

ಕೆಲ ದಿನಗಳ ಹಿಂದೆ ಕೃಷಿ ಕಾಯ್ದೆಗಳನ್ನು ವಾಪಸ್ಸು ಪಡೆಯುವುದಾಗಿ ಘೋಷಣೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಮತ್ತು ನಂತರ ನಡೆದ ಕೇಂದ್ರ ಸಚಿವ ಸಂಪುಟ ಸಮಿತಿಯು ಕಾಯ್ದೆ ವಾಪಸ್ಸಾತಿಗೆ ಅನುಮೋದನೆ ನೀಡಿತು. ಆಳುವ ಸರ್ಕಾರದ ಪ್ರತಿನಿಧಿಗಳ ಇಂತಹ ಬಾಯಿಮಾತಿಗೆ ನಂಬಿಕೆ ಇಲ್ಲದ ರೈತ ಹೋರಾಟಗಾರರು ಸಂಸತ್ತಿನ ಅಧಿವೇಶನದಲ್ಲಿ ಕೃಷಿ ಕಾಯ್ದೆಗಳು ವಾಪಸ್ಸು ಪಡೆಯಲಾಗಿದೆ ಎಂದು ಘೋಷಣೆ ಮಾಡುವವರೆಗೂ ತಾವು ಹೋರಾಟ ಮುಂದುವರೆಸುವುದಾಗಿ ಕರೆ ನೀಡಿದರು.

ಅದೇ ರೀತಿಯಲ್ಲಿ ಕೃಷಿ ಕಾಯ್ದೆಗಳನ್ನು ವಾಪಸ್ಸಾತಿಯೊಂದಿಗೆ ಸರ್ಕಾರವು ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಖಾತರಿಪಡಿಸಲು ಕಾನೂನನ್ನು ತರಬೇಕು ಮತ್ತು ಹೋರಾಟದ ಸಮಯದಲ್ಲಿ ಪ್ರಾಣ ಕಳೆದುಕೊಂಡ 700 ರೈತರನ್ನು ಹುತಾತ್ಮರೆಂದು ಘೋಷಿಸಬೇಕು. ಲಖಿಂಪುರ ಖೇರಿಯಲ್ಲಿ ಸಂಭವಿಸಿದ

ರೈತರ ಹೋರಾಟಕ್ಕೆ ಬೆಂಬಲವಾಗಿ 185 ದಿನ 5100ಕಿ.ಮೀ. ಪಾದಯಾತ್ರೆ ಕರ್ನಾಟಕದ ಯುವ ಇಂಜಿನಿಯರ್‌ಗೆ ಕಿಸಾನ್ ಸಭಾ ಅಭಿನಂದನೆ

7 ತಿಂಗಳ ಹಿಂದೆ, ದಿಲ್ಲಿ ಗಡಿಗಳಲ್ಲಿ ಹೋರಾಟ ನಡೆಸುತ್ತಿರುವ ರೈತರಿಗೆ ಬೆಂಬಲವಾಗಿ ಯುವ ಇಂಜಿನಿಯರ್ ಕೆ.ನಾಗರಾಜ್ ತನ್ನ ಕೆಲಸವನ್ನು ಬದಿಗಿಟ್ಟು ಕರ್ನಾಟಕದಿಂದ ದಿಲ್ಲಿಯತ್ತ ಪಾದಯಾತ್ರೆ ಆರಂಭಿಸಿದರು. 185 ದಿನ 5100ಕಿ.ಮಿ. ನಡೆದು ಅವರು ದಿಲ್ಲಿ ತಲುಪಿದ್ದು ನವಂಬರ್ 19ರಂದು– ಪ್ರಧಾನ ಮಂತ್ರಿಗಳು ರೈತರ ಹೋರಾಟಕ್ಕೆ ಶರಣಾಗಿ ಮೂರೂ ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ತನ್ನ ಸರಕಾರದ ನಿರ್ಧಾರವನ್ನು ಪ್ರಕಟಿಸಿದ ದಿನವೇ.

ಪಾದಯಾತ್ರೆ ನಡೆಸುತ್ತ ದಾರಿಯಲ್ಲಿ ಅವರು ಅಸಂಖ್ಯ ಸಭೆಗಳಲ್ಲಿ ಭಾಗವಹಿಸಿದರು. ಹಲವು ರೈತ ಮತ್ತು ಕಾರ್ಮಿಕ ಸಂಘಟನೆಗಳು ಇದರಲ್ಲಿ ಅವರಿಗೆ ಬೆಂಬಲ ನೀಡಿ ನೆರವಾದವು. ನಡುವೆ ಅವರ ತಾಯಿ ತೀರಿಕೊಂಡರು. ಅವರ ಅಂತಿಮ ಸಂಸ್ಕಾರಕ್ಕೆ ಮನೆಗೆ ಹೋದ ನಾಗರಾಜ್, ಮತ್ತೆ ತಾನು ಊರಿಗೆ ಮರಳಿದ ಜಾಗದಿಂದಲೇ ದಿಲ್ಲಿಯತ್ತ ಪಾದಯಾತ್ರೆ ಮುಂದುವರೆಸಿದರು.

ಅವರು ದಿಲ್ಲಿ ತಲುಪಿದಾಗ ನವಂಬರ್ 21ರಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಡಾ. ಅಶೋಕ ಧವಳೆ, ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಹರ್‍ಯಾಣ ರಾಜ್ಯ ಕಾರ್ಯದರ್ಶಿ ಸುಮಿತ್ ಮತ್ತು ಉಪಾಧ್ಯಕ್ಷ ಇಂದರ್ಜಿತ್ ಸಿಂಗ್ ಸಿಂಘು ಗಡಿಯಲ್ಲಿ ಭೇಟಿಯಾಗಿ ಅವರನ್ನು ಅಭಿನಂದಿಸಿದರು ಮತ್ತು ಅವರ ಊಟ–ವಸತಿಗೆ ವ್ಯವಸ್ಥೆ ಕಲ್ಪಿಸಿಕೊಟ್ಟರು.





ಜನಪರ ಹೋರಾಟಗಾರ, ನಿವೃತ್ತ ಉಪನ್ಯಾಸಕ ಪ್ರೊ. ಟಿ. ವೆಂಕಟೇಶ ಮೂರ್ತಿ ನಿಧನ

ಸಮುದಾಯ ಸಂಘಟನೆಯ ನಾಯಕ, ನಿವೃತ್ತ ಉಪನ್ಯಾಸಕ ಪ್ರೊ.ಟಿ.ವೆಂಕಟೇಶ ಮೂರ್ತಿ ಅವರು ಇಂದು ಬೆಳಿಗ್ಗೆ ನಿಧನರಾಗಿದ್ದಾರೆ. ಅವರ ನಿಧನಕ್ಕೆ ಸಮುದಾಯ ಸಂಘಟನೆ ಸೇರಿದಂತೆ, ಜನಪರ ಚಳುವಳಿಯ ನಾಯಕರು, ಸಾಹಿತಿಗಳು, ಚಿಂತಕರು ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಆಚಾರ್ಯ ಪಾಠ ಶಾಲಾ (ಎಪಿಎಸ್) ಕಾಲೇಜಿನಲ್ಲಿ ದೀರ್ಘ ಕಾಲ ಪಾಠ ಮಾಡಿದ್ದ ಟಿ.ವೆಂಕಟೇಶ ಮೂರ್ತಿಯವರು ಕಾಲೇಜು ಶಿಕ್ಷಕರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದವರು. ಬೆಂಗಳೂರು ವಿಶ್ವವಿದ್ಯಾಲಯ ಅಧ್ಯಾಪಕರ ಸಂಘದ ಮುಖಂಡರಾಗಿ ಬಹಳಷ್ಟು ಕೆಲಸ ಮಾಡಿದವರು. BUCTA, FUCTAK ಮತ್ತು AIFUCTO ನ ಶಿಕ್ಷಕರ ಸಂಘಟನೆಯ ನಾಯಕರಾಗಿ ಕೆಲಸ ಮಾಡಿ ಶಿಕ್ಷಕ, ಉಪನ್ಯಾಸಕರ ಸಮಸ್ಯೆಗಳಿಗೆ ಪರಿಹಾರ ಕೊಡಿಸುವಲ್ಲಿ ಪ್ರಮುಖ ಪಾತ್ರವಹಿಸಿದವರು. ಎಪಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಟಿ. ವೆಂಕಟೇಶ ಮೂರ್ತಿಯವರು, ಬೆಂ.ವಿ.ವಿ.ಯ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಸಮುದಾಯ ಸಂಘಟನೆಯ ಬೆಂಗಳೂರು ಮತ್ತು ರಾಜ್ಯ ಮುಖಂಡರಾಗಿದ್ದರು. ಜನಪರ ಚಳುವಳಿಗೆ ಮಾರ್ಗದರ್ಶಕರಾಗಿದ್ದ ಇವರು ಎಪಿಎಸ್ ಕಾಲೇಜ್ ಹಾಗೂ ಬೆಂಗಳೂರಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಕಟ್ಟಲು ಪ್ರೋತ್ಸಹವನ್ನು ನೀಡುತ್ತಾ ಬಂದಿದ್ದರು. ಎಸ್.ಎಫ್.ಐ. ಸ್ಥಾಪನಾ ಸಭೆಗೆ ಹಾಜರಾಗಿದ್ದ ಟಿವಿಎಂ, ಜೆಎನ್‌ಯು ಎಸ್‌ಎಫ್‌ಐ ಘಟಕದಲ್ಲೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದ್ದಾರೆ.

ಮಾನವೀಯತೆಗೆ ಸ್ಪಂದಿಸುತ್ತಿದ್ದ ವೆಂಕಟೇಶ ಮೂರ್ತಿಯವರು ದೇಹದಾನದ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಹಂಸಲೇಖ ರವರೇ–ಡಿಎಹೆಚ್‌ಎಸ್ ನಿಮ್ಮೊಂದಿಗಿದೆ, ನೀವು ಕ್ಷಮೆ ಕೇಳುವಂತ ತಪ್ಪು ಮಾಡಿಲ್ಲ

ಕಳೆದ ಕೆಲವು ದಿನಗಳ ಹಿಂದೆ, ಕರ್ನಾಟಕ ಚಲನಚಿತ್ರ ರಂಗದ ಪ್ರಸಿದ್ದ ಸಂಗೀತ ನಿರ್ದೇಶಕರು ಹಾಗೂ ಸಂಗೀತ ಲೋಕದ ನಾದ ಬ್ರಹ್ಮ ರೆಂದೆ ಪ್ರಖ್ಯಾತರಾದ ಹಂಸಲೇಖರವರು, ಮೈಸೂರಿನ ಮಾನಸ ಗಂಗೋತ್ರಿಯಲ್ಲಿನ ಸಮಾರಂಭವೊಂದರಲ್ಲಿ ಮಾಡಿದ ಭಾಷಣವನ್ನು ನಮ್ಮ ಹಿಂದುತ್ವಪರ–ಮಾಧ್ಯಮಗಳು ವಿವಾದ ಸೃಷ್ಟಿಸಿ ಹಲ್ಲೆಗೆಳೆದಿದ್ದಾರೆ. ಒತ್ತಡಕ್ಕೆ ಮಣಿದ ಹಂಸಲೇಖರವರು ತಪ್ಪಾಗಿದೆ ಕ್ಷಮಿಸಿ ಎಂದಿದ್ದಾರೆ.

ದಲಿತ ಹಕ್ಕುಗಳ ಸಮಿತಿ (ಡಿಎಹೆಚ್‌ಎಸ್) ಯು, ಮಾಧ್ಯಮಗಳು ತಮ್ಮ ವಾಹಿನಿಗಳಲ್ಲಿ ಮತ್ತು ಹಿಂದುತ್ವ ವಾದಿಗಳು ಸಾಮಾಜಿಕ ಜಾಲ ತಾಣಗಳಲ್ಲಿ ಸೃಷ್ಟಿಸಿರುವ ಈ ವಿವಾದವನ್ನು, ಉಗ್ರವಾಗಿ ಖಂಡಿದೆ.

ಹಂಸಲೇಖ ರವರೇ ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳು, ನಮ್ಮ ಸಮಾಜದಲ್ಲಿ ಶತ ಶತಮಾನಗಳಿಂದಲೂ ಬಲಿತ ಮೇಲು ಜಾತಿಯ ಜನರು ಅದರಲ್ಲೂ, ಪ್ರಮುಖವಾಗಿ ಬ್ರಾಹ್ಮಣ್ಯಶಾಹಿಯನ್ನು ಜೀವಂತವಾಗಿ ಪ್ರೋತ್ಸಾಹಿಸಿಕೊಂಡು ಬಂದಿರುವ, ವೈದಿಕ ಸಂಪ್ರದಾಯದ, ಮೂಲ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ಅಮಾನವೀಯ ಆಚರಣೆಗಳ ಬಗ್ಗೆ ಬೆಳಕು ಚೆಲ್ಲಿ ವಾಸ್ತವ ಸತ್ಯ ವನ್ನು ನಿಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದೀರಿ. ವಿನಃ, ಕ್ಷಮೆ ಕೇಳುವ ಯಾವ ತಪ್ಪು ನೀವು ಮಾಡಿಲ್ಲ. ಹಾಗಾಗಿ ಕ್ಷಮೆ ಕೇಳುವ ಅಗತ್ಯವಿರಲಿಲ್ಲ. ನೀವು ಕ್ಷಮೆ ಕೇಳಿದ್ದು ನಮಗೆ ಬೇಸರ ತಂದಿದೆ. ಪ್ರಜ್ಞಾವಂತ ಸಮಾಜಕ್ಕೆ ಒಳ್ಳೆಯದಲ್ಲ.

ಡಿಎಹೆಚ್‌ಎಸ್ ನಿಮ್ಮ ಅಭಿಪ್ರಾಯವನ್ನು ಅಕ್ಷರಶಃ ಬೆಂಬಲಿಸುತ್ತದೆ. ಹಾಗೂ ಈ ವಿಚಾರದಲ್ಲಿ ನಿಮ್ಮೊಂದಿಗೆ ನಿಲ್ಲುತ್ತದೆ.

ಹಾಗಾದರೆ, ಅಂದು ಹಂಸಲೇಖ ರವರು ಮಾಡಿದ ತಪ್ಪಾದರು ಏನು? ಭಾರತ ದೇಶದಲ್ಲಿ ಆಳವಾಗಿ ಬೇರೂರಿರುವ ವೈದಿಕ ಸಂಸ್ಕೃತಿಯೇ ಶ್ರೇಷ್ಠ ಎಂದು ಕೊಚ್ಚಿಕೊಳ್ಳುವ ಬಲಿತ–ಮೇಲ್ ಜಾತಿಯ ಜನರು ಜೀವಂತವಾಗಿ ಆಚರಿಸಿಕೊಂಡು ಬಂದಿರುವ ಜಾತಿ ಅಸ್ಪೃಶ್ಯತೆಯ ವಾಸ್ತವತೆಯನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ.

ಸರಳವಾಗಿ, ಉದಾಹರಣೆಗಾಗಿ ಮಾಧ್ವ ಬ್ರಾಹ್ಮಣರಾದ ಪೇಜಾವರರು, ದಲಿತ ಕೇರಿಗಳಿಗೆ ಹೋಗುವುದು ಯಾವ ದೊಡ್ಡ ವಿಷಯವೆಂದಿದ್ದಾರೆ. ಮುಂದುವರಿಸುತ್ತಾ, ಅವರು ದಲಿತರ ಮನೆಗೆ ಹೋದ ತಕ್ಷಣ ಅವರ ಆಹಾರವಾದ ಕೋಳಿ ಮಾಂಸ ತಿನ್ನಲು ಸಾಧ್ಯವೇ? ಅಥವಾ ಕುರಿ ರಕ್ತದಲ್ಲಿ ಬೇಯಿಸಿದ್ದನ್ನು ತಿನ್ನಲು ಸಾಧ್ಯವೇ? ದಲಿತರನ್ನು ತಮ್ಮ ಮನೆಗಳಿಗೆ, ಕರೆದು ಕೊಂಡು ಹೋಗಿ, ಅವರ ಜೊತೆ ಸಹ ಭೋಜನ ಮಾಡಿ, ಅವರು ಉಂಡು ಬಿಟ್ಟ ತಟ್ಟೆ ಮತ್ತು ಲೋಟಗಳನ್ನು ತಾವು ತೊಳೆಯಬೇಕು ಎಂದು ಮಾರ್ಮಿಕವಾಗಿ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ಇದು ಒಬ್ಬ ವ್ಯಕ್ತಿಯ ವಿರುದ್ದವಲ್ಲ. ಸಮಾಜ ಬದಲಾಗಬೇಕೆಂಬ ಆಶಯದಿಂದ.

ಭಾರತ ಆಧುನಿಕ ವೈಜ್ಞಾನಿಕ ಜಗತ್ತು ಎಂದು ಒಂದು ಕಡೆ ಕೊಚ್ಚಿ ಕೊಂಡು, ಮತ್ತೊಂದು ಕಡೆ ಜಾತಿ ವ್ಯವಸ್ಥೆಯ ಪ್ರೋತ್ಸಾಹಿಸುವ ಬಲಿತ ಮೇಲ್ ಜಾತಿಯ ಜನರ ಕುರಿತಂತೆ, ತಮ್ಮ ಸ್ವತಂತ್ರ ಅಭಿಪ್ರಾಯವನ್ನು ಹಂಸಲೇಖರವರು ವ್ಯಕ್ತಪಡಿಸಿದ್ದಾರೆ. ಇದು ನಮ್ಮ ಸಂವಿಧಾನ ಪ್ರತಿಯೊಬ್ಬರಿಗೂ ನೀಡಿರುವ ಪ್ರಜಾಪ್ರಭುತ್ವದ ಅಭಿವ್ಯಕ್ತಿ ಹಕ್ಕು. ಅದಕ್ಕಾಗಿ ಹಂಸಲೇಖ ರನ್ನು ನಾವು ಅಭಿನಂದಿಸುತೇವೆ.

ಈ ರೀತಿ ಯಾರು ಬೇಕಾದರೂ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಗಳಿವೆ. ಇದನ್ನು ತಪ್ಪು ಎಂದು ಹೇಳುವುದು ಸಂಕುಚಿತ ಭಾವನೆ.

ವೈದಿಕ ಸಂಸ್ಕೃತಿಯ ಪ್ರತಿಪಾದಕರು, ಕ್ಷಮೆಕೇಳಲು ಒತ್ತಡ ಹೇರಿದ್ದು, ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವಮಾನ ಮಾಡಿದಂತೆ. ನೈತಿಕತೆಯಿಲ್ಲದ ಜನರು ಮಾತ್ರ ಇಂತಹ ಕೆಲಸ ಮಾಡುತ್ತಾರೆ. ಇವರನ್ನು ಸಮರ್ಥಿಸಿಕೊಳ್ಳುವ ಮಾಧ್ಯಮಗಳು ಕೂಡಾ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿ ಪೆಟ್ಟು ಕೊಟ್ಟಂತಾಗಿದೆ.

ಆದರೆ ಹಂಸಲೇಖರವರು, ಸಹಜವಾಗಿಯೇ ನುಡಿದ ಸತ್ಯವನ್ನು ಅರಗಿಸಿಕೊಳ್ಳಲು ಅಸಾಧ್ಯವಾದ ಚಡ್ಡಿಗಳು, ಜನಿವಾರಿಗಳು ಇವರನ್ನು ಬೆಂಬಲಿಸುವ ನಮ್ಮ ಟೀವಿ ಮತ್ತು ಸಾಮಾಜಿಕ ಜಾಲ ತಾಣ ಮಾಧ್ಯಮಗಳು ವಿವಾದವನ್ನು ಸೃಷ್ಟಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಗಿಸಿ, ಅವರಲ್ಲಿ ಕ್ಷಮೆಯಾಚಿಸುವಂತೆ ಮಾಡಿದ್ದಾರೆ.

ದಲಿತ ಯುವಕರು ಮೀಸೆ ಬಿಟ್ಟರೆ ಅವರನ್ನು ಕೊಲ್ಲುತ್ತಾರೆ; ದಲಿತರಿಗೆ ಹುಚ್ಚೆ ಕುಡಿಸುತ್ತಾರೆ; ದೇವಾಲಯದಲ್ಲಿ ಮೇಲ್ ಜಾತಿಯ ಪಕ್ಕ ಹುಳಿತ ಎಂಬ ಕಾರಣಕ್ಕೆ ಕೊಲ್ಲುತ್ತಾರೆ; ದಲಿತ ಹೆಣ್ಣು ಪೋಲಿಸ್ ವಸ್ತ್ರದಲ್ಲಿ ಉಡುಪಿ ಕೃಷ್ಣ ದೇವಾಲಯ ದಲ್ಲಿ ಊಟದ ಪಂಕ್ತಿಯಲ್ಲಿ ಕುಳಿತು ಊಟ ಮಾಡುವಾಗ ಅಸ್ಪೃಶ್ಯರೆಂದು, ಪಂಕ್ತಿಯಿಂದ ಎಳೆದು ಆಚೆ ಹಾಕುತ್ತಾರೆ,; ದಲಿತ ಸಂಶೋದಕ ವಿದ್ಯಾರ್ಥಿ ರೋಹಿತ್ ವೆಮುಲ್ಲಾ ರ ಆತ್ಮಹತ್ಯೆಗೆ ಕಾರಣರಾದವರನ್ನು; ಮತ್ತು ಹತ್ರಾಸ್ ಪ್ರಕರಣದಲ್ಲಿ ದಲಿತ ಯುವತಿಯ ಮಾರಣಾಂತಿಕ ಹತ್ಯೆಗೆ ಕಾರಣರಾದವರನ್ನು; ಹೀಗೆ ಪ್ರತಿ ನಿಮಿಷ ಕ್ಕು, ಅಸ್ಪೃಶ್ಯತೆಯ ಹೆಸರಿನಲ್ಲಿ ಬಲಿತೆಗೆದುಕೊಳ್ಳುವ, ಇದನ್ನು ಪ್ರೋತ್ಸಾಹಿಸುವ, ಈ ವೈದಿಕ ಸಂಸ್ಕೃತಿಯ ಪ್ರತಿಪಾದಕರ ಬಗ್ಗೆ, ಇದೇ ಮಾದ್ಯಮಗಳು ಮತ್ತು ಜನರು, ಕ್ಷಮೆ ಕೇಳಿ ಎಂದು ಒತ್ತಾಯಿಸುವುದಿಲ್ಲ ಏಕೆ?

ದಲಿತರನ್ನು ಮನುಷ್ಯರೆಂದು, ಭಾವಿಸದ ಈ ವೈದಿಕ ಸಂಸ್ಕೃತಿಯ ಪ್ರತಿಪಾದಕರು ಎಂದಿಗೂ, ಈ ದೇಶದ ಸಂವಿಧಾನದ ಆಶಯಗಳನ್ನು ಒಪ್ಪುವುದಿಲ್ಲ. ಏಕೆದಂರೆ, ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಒಬ್ಬ ದಲಿತನೆಂಬುದು ಇವರ ಮನಸ್ಸುಗಳಲ್ಲಿ ನಾಟಿಕೊಂಡಿದೆ. ಅಂಬೇಡ್ಕರ್ ರವರು ನಮ್ಮ ರಾಷ್ಟ್ರ ನಾಯಕರು ಮಾತ್ರವಲ್ಲ, ನೀರಿನಾಚೆ ಮೋಡದಾಚೆ ಪಸರಿಸಿರುವ ಮಿನುಗು ನಕ್ಷತ್ರವೆಂಬ ಸತ್ಯವನ್ನು ಸಹಿಸಿಕೊಳ್ಳಲು ಇವರಿಗೆ ಇನ್ನೂ ಸಾಧ್ಯವಾಗುತ್ತಿಲ್ಲ.

ಭಾರತ ದೇಶದಲ್ಲಿ ಬ್ರಾಹ್ಮಣ್ಯ ಶಾಹಿಯ ಹೆಸರಿನಲ್ಲಿ ತಾಂಡವ ವಾಡುತ್ತಿರುವ ಅಸ್ಪೃಶ್ಯತಾ ಆಚರಣೆ ಮತ್ತು ಜಾತಿ ತಾರತಮ್ಯದ ನಿರ್ಮೂಲನೆ ಹಾಗೂ ಸಮಾನತೆಯ ಸಮಾಜ ನಿರ್ಮಿಸಲು, ತಮ್ಮ ಜೀವನವನ್ನೆ ಪಣತೊಟ್ಟ, ಬುದ್ಧ, ಬಸವಣ್ಣ, ಜೋತಿ ಬಾಪುಲೆ, ಸಾವಿತ್ರಿ ಬಾಯಿ ಪುಲೆ ಪೆರಿಯಾರ್, ನಾರಾಯಣ ಗುರು, ಅಂಬೇಡ್ಕರ್ ಹುಟ್ಟಿದ ನಾಡು ನಮ್ಮದು. ಇವರುಗಳ ಸಾಮಾಜಿಕ ಬದ್ಧತೆಯ ಹೋರಾಟಗಳ ಬಗ್ಗೆ ನಮಗೆ ಹೆಮ್ಮೆ ಇದೆ ಎಂದಿದೆ.

ಬಹು ಸಂಸ್ಕೃತಿಯನ್ನು ಪ್ರತಿಪಾದಿಸುವ ನಮ್ಮ ಸಂವಿಧಾನವನ್ನು ರಕ್ಷಣೆ ಮಾಡಬೇಕಾದ ನಿಟ್ಟಿನಲ್ಲಿ, ಕಾರ್ಯ ನಿರ್ವಹಣೆ ಮಾಡುವ ದಿಕ್ಕಿನಲ್ಲಿ ನಮ್ಮ ಮಾದ್ಯಮಗಳು ಜನ ಜಾಗೃತಿ ಮೂಡಿಸಲು ಮುಂದಾಗಲಿ ಎಂಬುದೇ ಡಿಎಹೆಚ್‌ಎಸ್ ನ ಆಶಯ.

ಸಂವಿಧಾನದ ಆಶಯವಾದ ಸಮಾನತೆಯ ಸಮಾಜ ನಿರ್ಮಾಣ ಕ್ಕೆ, ಹಂಸಲೇಖ ರಂತವರ ಅಭಿಪ್ರಾಯಕ್ಕೆ ಮನ್ನಣೆ ನೀಡುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂಬುದು ವಿವಾದ ಸೃಷ್ಟಿಸಿರುವ ಜನರಿಗೆ ಗೊತ್ತಾಗುತ್ತಿದೆ. ಆದ್ದರಿಂದ ಇಂತಹ ಕ್ಷುಲಕತನಕ್ಕೆ ಧಮುಕಿದ್ದಾರೆ.

ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಯನ್ನು ಎತ್ತಿ ಹಿಡಿದಿರುವ ಹಂಸಲೇಖರವರೆ, ನಾವು ಪ್ರಜಾಪ್ರಭುತ್ವದ ಅಸಲಿ ಪ್ರತಿಪಾದಕರು, ಅದನ್ನು ಎತ್ತಿ ಹಿಡಿದ ನಿಮ್ಮ ಬಗ್ಗೆ ಹೆಮ್ಮೆಯಿದೆ. ನಾವು ಸದಾ ನಿಮ್ಮೊಂದಿಗೆ ಇರುತ್ತೇವೆ ಡಿಹೆಚ್‌ಎಸ್ ಹೇಳಿದೆ.

ನಿಮ್ಮ ನುಡಿಗಳು ನಕಲಿ ಹಿಂದುತ್ವ ಪ್ರತಿಪಾದಕರಿಗೆ ಕೊಟ್ಟ ಚಾಟಿ ಏಟು. ಆದರೆ ನೀವು ದೇಶದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದಿದ್ದೀರಿ. ಅದರ ಬಗ್ಗೆ ನಮಗೆ ಹೆಮ್ಮೆಯಿದೆ. ನಿಮಗೆ ನಮ್ಮ ಅಭಿನಂದನೆಗಳು ಎಂದು ಡಿಹೆಚ್‌ಎಸ್ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿಯವರು ಹೇಳಿದ್ದಾರೆ.



ವಿಧಾನಸಭಾ ಕ್ಷೇತ್ರಕ್ಕೆ ಸಿಕ್ಕ ಶಾಸಕರ ನಿಧಿ ಎಷ್ಟು? ಶಾಸಕರು ಬಳಸಿದ್ದೆಷ್ಟು?

ಗುರುರಾಜ ದೇಸಾಯಿ

ರಾಜ್ಯ ವಿಧಾನಮಂಡಲದ ಉಭಯ ಸದನಗಳ ಸದಸ್ಯರಿಗೂ ಸಮಾನವಾಗಿ ಶಾಸಕರ ನಿಧಿಯನ್ನು ಹಂಚಿಕೆ ಮಾಡುವ ಪದ್ಧತಿ ಜಾರಿಯಲ್ಲಿದೆ. ಪ್ರತಿ ವರ್ಷ ಅವರವರು ಪ್ರತಿನಿಧಿಸುವ ಕ್ಷೇತ್ರಗಳ ಅಭಿವೃದ್ಧಿಗೆ ಈ ಹಣವನ್ನು ವ್ಯಯಿಸಬಹುದಾಗಿದೆ. ವಿಧಾನಸಭೆಯ ಸಂಖ್ಯಾಬಲ 224, ಒಂದು ಆಂಗ್ಲೋ ಇಂಡಿಯನ್ ಸದಸ್ಯರ ನಾಮನಿರ್ದೇಶನ ಸೇರಿದರೆ 225 ಆಗಲಿದೆ. ವಿಧಾನ ಪರಿಷತ್ ಸದಸ್ಯ ಬಲ 75 ಒಟ್ಟು ಉಭಯ ಸದನಗಳ ಸದಸ್ಯರ ಸಂಖ್ಯೆ 300 ಆಗಲಿದೆ. ಎಲ್ಲಾ ವಿಧಾನಸಭಾ ಕ್ಷೇತ್ರಗಳು, ಶಿಕ್ಷಕರ ಕ್ಷೇತ್ರ, ಪದವೀಧರ ಕ್ಷೇತ್ರದ ವ್ಯಾಪ್ತಿ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯನ್ನೂ ಇದು ಒಳಗೊಂಡಿದೆ. ಪ್ರತಿವರ್ಷ ಸಿಗಲಿರುವ ಶಾಸಕರ ನಿಧಿಯ ಮೊತ್ತ ಹಾಗು ಯಾವೆಲ್ಲಾ ಕೆಲಸಗಳಿಗೆ ಹಣ ಬಳಕೆ ಮಾಡಬಹುದು ಹಾಗೂ ಎಷ್ಟು ಶಾಸಕರು ಆ ಹಣವನ್ನು ಖರ್ಚು ಮಾಡಿದ್ದಾರೆ ಎಂಬುದರ ಕಂಪ್ಲೀಟ್ ರಿಪೋರ್ಟ್ ಇಲ್ಲಿದೆ.

ಪ್ರತಿ ಶಾಸಕ ಹಾಗು ವಿಧಾನ ಪರಿಷತ್ ಸದಸ್ಯರಿಗೆ ಪ್ರತಿ ವರ್ಷ 2 ಕೋಟಿ ರೂ.ಗಳ ಹಣವನ್ನು ಶಾಸಕರ ನಿಧಿಯೆಂದು ನೀಡಲಾಗ್ತದೆ. ವಿಧಾನಸಭೆ ಮತ್ತು ವಿಧಾನ ಪರಿಷತ್?ನ 300 ಸದಸ್ಯರಿಗೆ ವರ್ಷಕ್ಕೆ 600 ಕೋಟಿ ಹಣ ಶಾಸಕರ ನಿಧಿಗೆ ನೀಡಲಾಗ್ತದೆ. ಈ ಹಣ ನೇರವಾಗಿ ಶಾಸಕರ ಖಾತೆಗಳಿಗೆ ತಲುಪುವುದಿಲ್ಲ. ಆಯಾ ಶಾಸಕರ ಕ್ಷೇತ್ರ ವ್ಯಾಪ್ತಿಯ ಜಿಲ್ಲಾಧಿಕಾರಿಗಳ ಪಿಡಿ ಖಾತೆಗೆ ನಾಲ್ಕು ಕಂತುಗಳಲ್ಲಿ ಹಣಕಾಸು ಇಲಾಖೆಯಿಂದ ಹಣ ಸಂದಾಯವಾಗಲಿದೆ. ಶಾಸಕರು ಅವರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ ಶಿಫಾರಸು ಮಾಡುವ ಯೋಜನೆಗಳಿಗೆ ಜಿಲ್ಲಾಧಿಕಾರಿಗಳ ಖಾತೆಯಿಂದ ಹಣ ಬಿಡುಗಡೆಯಾಗಲಿದೆ.

ಯಾವ ಯಾವ ಯೋಜನೆಗೆ ನಿಧಿ ಬಳಸಬಹುದು:

ಶಾಸಕರ ನಿಧಿಯ ಅನುದಾನ ನೇರವಾಗಿ ಶಾಸಕರ ಖಾತೆಗೆ ಹೋಗುವುದಿಲ್ಲ. ಆ ಹಣ ಜಿಲ್ಲಾಧಿಕಾರಿಗಳ ಪಿ.ಡಿ(ವೈಯಕ್ತಿಕ ಠೇವಣಿ) ಖಾತೆಗೆ ಹೋಗುತ್ತದೆ. ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಸಮುದಾಯ ಭವನ, ಗ್ರಾಮೀಣ ರಸ್ತೆ, ಶಾಲೆ, ಕಾಲೇಜು, ಅಂಗನವಾಡಿ ಕಟ್ಟಡ, ಆಸ್ಪತ್ರೆ ಕಟ್ಟಡ, ಚರಂಡಿ, ತುರ್ತು ಕುಡಿಯುವ ನೀರು, ಬೀದಿ ದೀಪ, ಗ್ರಂಥಾಲಯ, ಬಸ್ ತಂಗುದಾಣ ಸೇರಿದಂತೆ ವಿವಿಧ ಜನೋಪಯೋಗಿ ಕೆಲಸಗಳಿಗೆ ಈ ನಿಧಿಯನ್ನು ಬಳಸಬಹುದಾಗಿದೆ.

ಹೀಗೆ ಕ್ಷೇತ್ರಾಭಿವೃದ್ಧಿ ಯೋಜನೆಯಡಿ ಶಾಸಕರು ಶಿಫಾರಸು ಮಾಡುವ ಯೋಜನೆಗಳಿಗೆ ಜಿಲ್ಲಾಧಿಕಾರಿ ಖಾತೆಯಿಂದ ಹಣ ಬಿಡುಗಡೆ ಆಗುತ್ತದೆ. ಆದರೆ, ಶಾಸಕರು ಈ ಅನುದಾನವನ್ನು ಬಳಸಲು ಹಿಂದೆ ಬಿದ್ದಿದ್ದಾರೆ ಎಂದು ಅಂಕಿ ಅಂಶಗಳು ಹೇಳುತ್ತಿವೆ. ಸ್ವತಃ ಸಿಎಂ ಸೆಪ್ಟೆಂಬರ್ ನಲ್ಲಿ ಶಾಸಕರ ನಿಧಿ ಬಳಕೆಯಾಗದೇ ಇರುವ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿ, ಎಲ್ಲಾ ಶಾಸಕರಿಗೆ ಪತ್ರ ಬರೆದಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು.

ಬಿಡುಗಡೆಯಾದ ನಿಧಿ ಎಷ್ಟು?:

2021–22 ಸಾಲಿನಲ್ಲಿ ಎರಡು ಕಂತುಗಳಲ್ಲಿ ತಲಾ 1 ಕೋಟಿ ರೂ.ನಂತೆ ಎರಡು ಕೋಟಿ ರೂ. ಅನುದಾನವನ್ನು ಎಲ್ಲ ಶಾಸಕರ ಖಾತೆಗೆ ಬಿಡುಗಡೆ ಮಾಡಲಾಗಿದೆ. ಆದರೆ ಅನುದಾನದ ಬಳಕೆ ಮಾಡುವಲ್ಲಿ ಶಾಸಕರು ತಮ್ಮ ನಿರಾಸಕ್ತಿ ಮುಂದುವರಿಸಿದ್ದಾರೆ. ಯೋಜನೆ ಇಲಾಖೆ ನೀಡಿದ ಅಂಕಿಅಂಶದಂತೆ ಸೆಪ್ಟೆಂಬರ್ ಅಂತ್ಯದವರೆಗೆ ಶಾಸಕರ ನಿಯಿಂದ ಒಟ್ಟು ಶೇ.27.02ರಷ್ಟು ಅನುದಾನ ಮಾತ್ರ ಬಳಕೆಯಾಗಿದೆ. ಉಳಿದ ಹಣವನ್ನು ಬಳಕೆ ಮಾಡದೆ ಹಾಗೆ ಬಿಡಲಾಗಿದೆ. ಪ್ರತಿ ವರ್ಷ ಜೂನ್ ತಿಂಗಳ ಒಳಗೆ ಎಲ್ಲ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿ ತಲಾ 2 ಕೋಟಿವರೆಗಿನ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು ಮತ್ತು ಪ್ರಸ್ತಾವಿತ ಕಾಮಗಾರಿಯನ್ನು ಎರಡು ವರ್ಷದ ಒಳಗೆ ಪೂರ್ಣಗೊಳಿಸಬೇಕಾಗಿದೆ. ಆದರೆ ಎರಡರಲ್ಲೂ ಶಾಸಕರು ಹಿಂದೆ ಬಿದ್ದಿದ್ದಾರೆ. ಮಂಜೂರಾದ ಹಣವನ್ನು ಕ್ಷೇತ್ರದ ಅಭಿವೃದ್ಧಿಗೆ ಬಳಕೆ ಮಾಡುವಲ್ಲಿ ಹಿಂದೇಟಾಕುತ್ತಿದ್ದಾರೆ.

ಜಿಲ್ಲಾವಾರು ಶಾಸಕರ ನಿಧಿ ಬಳಕೆ ಪ್ರಮಾಣ:

ಮಂಡ್ಯ ಶೇ.10.71ರಷ್ಟು, ಕೊಪ್ಪಳ ಶೇ.10.88, ಕೋಲಾರ 12.39%, ಯಾದಗಿರಿ 13.87%, ಕಲಬುರ್ಗಿ 13.99%, ಚಿತ್ರದುರ್ಗ 15.87%, ಹಾವೇರಿ 16.81%, ರಾಮನಗರ 16.84%, ಬಳ್ಳಾರಿ 19.63%, ಚಾಮರಾಜನಗರ 20.83%, ಬೆಳಗಾವಿ 22.44%, ರಾಯಚೂರು 24.38%, ಗದಗ 24.98%, ಕೊಡಗು ಶೇ.26.14ರಷ್ಟು ಮಾತ್ರ ಶಾಸಕರ ನಿಧಿ ಅನುದಾನ ಖರ್ಚು ಮಾಡಲಾಗಿದೆ.

ಇನ್ನು ಶಿವಮೊಗ್ಗ 26.42%, ಧಾರವಾಡ 27.14%, ಉ.ಕನ್ನಡ 28.16%, ಚಿಕ್ಕಮಗಳೂರು 29.80%, ಚಿಕ್ಕಬಳ್ಳಾಪುರ 29.81%, ಬೀದರ್ 35.54%, ತುಮಕೂರು 36.17%, ಬೆಂಗಳೂರು ನಗರ 37.16%, ಉಡುಪಿ 38.53%, ಬೆಂಗಳೂರು ಗ್ರಾಮಾಂತರ 40.05%, ಮೈಸೂರು 40.11%, ವಿಜಯಪುರ 43.56%, ಬಾಗಲಕೋಟೆ 44.43%, ದ.ಕನ್ನಡ 44.69%, ಹಾಸನ 45.11%, ದಾವಣಗೆರೆ 45.43% ಪ್ರಮಾಣದಲ್ಲಿ ಶಾಸಕರ ನಿಧಿ ಬಳಕೆ ಮಾಡಲಾಗಿದೆ.

2018ರ ವಿಧಾನಸಭೆ ಅಸ್ತಿತ್ವಕ್ಕೆ ಬಂದು ಮೂರು ವರ್ಷಗಳು ಕಳೆದಿವೆ. ಆದರೆ ಶಾಸಕರಿಗೆ ಪ್ರತಿ ವರ್ಷ ನೀಡುವ ವಿವೇಚನಾ ನಿಧಿ ಸರಿಯಾಗಿ ಬಳಕೆಯಾಗಿಲ್ಲ ಎನ್ನುವ ಆರೋಪವಿದೆ. ಹಲವು ಶಾಸಕರಿಗೆ ದೊರೆಯಬೇಕಾದ ನಿಧಿ ಸಹ ದೊರೆಯುತ್ತಿಲ್ಲ ಎನ್ನುವ ಕೊರಗು ಇದೆ. ಒಂದು ವೇಳೆ ಅನುದಾನ ಬಂದ್ರೆ ಅದನ್ನು ಪಡೆಯಲು ಶಾಸಕರು ತೊಂದರೆ ಅನುಭವಿಸುತ್ತಿದ್ದಾರೆ ಎಂಬ ಆರೋಪಗಳು ಕೂಡಾ ಕೇಳಿ ಬರುತ್ತಿವೆ.

ಹಳ್ಳಿಗಳಲ್ಲಿ ಮೂಲ ಸೌಲಭ್ಯಗಳಿಲ್ಲ:

ಹಳ್ಳಿಗಳು ಮೂಲ ಸೌಲಭ್ಯ ಇಲ್ಲದೆ ನರಳುತ್ತಿವೆ. ಆಸ್ಪತ್ರೆ, ರಸ್ತೆಗಳಿಲ್ಲದೆ ದಿನ ನಿತ್ಯ ಜನ ನೂರಾರು ಸಂಕಟಗಳನ್ನು ಎದುರಿಸುತ್ತಿದ್ದಾರೆ. ಶಾಸಕರ ನಿಧಿಯನ್ನು ಕ್ಷೇತ್ರದ ಹಳಿಗಳ ಮೂಲಸೌಲಭ್ಯಕ್ಕೆ ಬಳಸಲು ಶಾಸಕರು ಹಿಂದೇಟಾಕುತ್ತಿರುವುದು ಅವರ ಹಳ್ಳಿಗಳ ಕಾಳಜಿ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ಬಹುಷಃ ಸುಧಾರಣೆ ಮಾಡಿ ಬಿಟ್ಟರೆ ಸಮಸ್ಯೆಗಳ ಹೆಸರಲ್ಲಿ ರಾಜಕೀಯ, ಪರಸ್ಪರ ಕೆಸರೆರಚಾಟ ಮಾಡಲು ಬರುವುದಿಲ್ಲ ಎಂಬ ಕಾರಣದಿಂದಾಗಿ ಅಭಿವೃದ್ಧಿ ಮಾಡಲು ಹಿಂದೇಟಾಕುತ್ತಿದ್ದಾರೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಈ ಕೋವಿಡ್ ಅವಧಿಯಲ್ಲಿ ಸರಿಯಾದ ಆಂಬ್ಯುಲೆನ್ಸ್, ಆಕ್ಸಿಜನ್, ಆಸ್ಪತ್ರೆಗಳಲ್ಲಿ ಸೌಲಭ್ಯ ಇಲ್ಲದೆ ಸಾವಿರಾರು ಜನ ಉಸಿರು ಚೆಲ್ಲುವಾಗಲು ಈ ನಿಧಿಯನ್ನು ಶಾಸಕರು ಮತ್ತು ಜಿಲ್ಲಾಧಿಕಾರಿಗಳು ಬಳಕೆ ಮಾಡದೆ ಇರುವಂತದ್ದು ಅವರ ಹಳ್ಳಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಚುನಾವಣೆ ಸಮೀಪಿಸುತ್ತಿದ್ದಂತೆ ಜನಪ್ರತಿನಿಧಿಗಳ ಪ್ರಣಾಳಿಕೆ ಪಟ್ಟಿಯಲ್ಲಿ ಮೊದಲನೆಯದ್ದೇ ರಸ್ತೆಗಳ ಅಭಿವೃದ್ಧಿ. ಗ್ರಾಮಕ್ಕೊಂದು ಸಮುದಾಯ ಭವನ, ಆಸ್ಪತ್ರೆ, ಅಂಗನವಾಡಿ, ಶಾಲೆಗಳಿಗೆ ಕಟ್ಟಡ ಕಟ್ಟುವುದಾಗಿ ಭಾಷಣ ಬಿಗಿಯುತ್ತಾರೆ. ಚುನಾವಣೆಯಲ್ಲಿ ಗೆದ್ದಾದ ಮೇಲೆ ಅಭಿವೃದ್ಧಿ ವಿಷಯಕ್ಕೆ ಬಂದರೆ ಅದೇ ಕೊನೆಯ ಸ್ಥಾನದಲ್ಲಿರುತ್ತವೆ. ಅಧಿಕಾರಕ್ಕೆ ಬಂದಾಗ ಇರುವ ಹದಗೆಟ್ಟ ರಸ್ತೆಗಳು ಅಧಿಕಾರದಿಂದ ಕೆಳಗಿಳಿಯುವವರೆಗೂ ಹಾಗೆಯೇ ಇರುತ್ತವೆ. ಚೂರು ಬದಲಾಗಿರಲ್ಲ. ಇದು ಜನರೆ ಮಾಡಿಕೊಂಡಿರುವ ತಪ್ಪು ಎಂಬಂತೆ ಶಾಸಕರು ಇತ್ತ ಕಡೆ ತಲೆ ಹಾಕಿ ಮಲಗುವುದು ಇಲ್ಲ.

ಗ್ರಾಮೀಣ ಕ್ಷೇತ್ರಗಳನ್ನು ಬಲ ಪಡಿಸಲು ಶಾಸಕರುಗಳು ಇನ್ನಾದರೂ ಶಾಸಕರ ನಿಧಿಯನ್ನು ಸರಿಯಾಗಿ ಬಳಕೆ ಮಾಡಿಕೊಂಡು ಆ ಪ್ರದೇಶಗಳನ್ನು ಅಭಿವೃದ್ಧಿ ಮಾಡುವತ್ತ ಗಮನ ಹರಿಸಬೇಕಿದೆ. ಮುಂಬರುವ ಚುನಾವಣೆಗಳಲ್ಲಿ ಮತ ಕೇಳಲು ಬರುವ ಶಾಸಕರ ಎದೆಪಟ್ಟಿ ಹಿಡಿದು ಎಲ್ಲಿ ಅಭಿವೃದ್ಧಿ, ಏನು ನಿಮ್ಮ ಕತೆ ಎಂದು ಪ್ರಶ್ನಿಸುವ ಧೈರ್ಯವನ್ನು ಮತದಾರ ಬೆಳಸಿಕೊಳ್ಳಬೇಕಿದೆ. ಇಲ್ಲದೆ ಹೋದರೆ ಅವರು ಕೊಡುವ 500 ಆಸೆಗೋ, ಇಲ್ಲವೋ ಸೀರೆ, ಹೆಂಡಕ್ಕೆ ನಮ್ಮನ್ನು ನಾವು ಮಾರಿಕೊಂಡರೆ ಗ್ರಾಮೀಣ ಪ್ರದೇಶಗಳು ಇನ್ನಷ್ಟು ಹಾಳಾಗುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಜನ ಜಾಗೃತರಾಗಬೇಕಿದೆ.


ಸಿಪಿಐ(ಎಂ)ನ ಮಾಲೂರು ತಾಲ್ಲೂಕು 6ನೇ ಸಮ್ಮೇಳನ

ಸಿಪಿಐ(ಎಂ)ನ ಮಾಲೂರು ತಾಲ್ಲೂಕು 6ನೇ ಸಮ್ಮೇಳನವು 21 ನವೆಂಬರ್ 2021 ರಂದು ಮಾಲೂರಲ್ಲಿ ಯಶಸ್ವಿಯಾಗಿ ನಡೆದಿದೆ. ಪಕ್ಷದ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಹೆಚ್.ಎನ್. ಗೋಪಾಲ್ ಗೌಡ ಅವರು ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ಶ್ರೀನಿವಾಸ್ ಮತ್ತು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎ.ಆರ್. ಬಾಬು ಉಪಸ್ಥಿತರಿದ್ದರು. ಕಾಂ.ಎನ್. ಅಶೋಕ್ ಸ್ಥಳೀಯ ಸಮಿತಿ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು.





ಸಂಘಪರಿವಾರದೊಂದಿಗೆ ಸೈದ್ಧಾಂತಿಕವಾಗಿ ಗುರುತಿಸಿಕೊಂಡ ವಿವಿಧ ರಂಗದ ಸೃಜನಶೀಲರು ಮತ್ತು ಬುದ್ಧಿಜೀವಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳಲ್ಲಿ ಸುಪ್ತವಾಗಿ ಅಥವಾ ಅಧಿಕೃತವಾಗಿ ಸೇರಿಕೊಂಡರೆ ಏನು ತೊಂದರೆ? ಅಂಥವರು ಯೋಜಿಸುವ ಸಾರ್ವಜನಿಕ ಕ್ರಿಯೆಗಳ ಮೂಲಕ ಅವರ ಸೈದ್ಧಾಂತಿಕ ನಿಲುವನ್ನು ಮುನ್ನೊತ್ತುವುದಕ್ಕೆ ವಿರೋಧ ಯಾಕೆ? ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ತೊಂದರೆ ಇರುವುದು ಸಂಘಪರಿವಾರದ ಸೃಜನಶೀಲರು ಮತ್ತು ಬುದ್ಧಿಜೀವಿಗಳು, ಅಥವಾ ಯಾರೇ ಆಗಲಿ, ಅವರು ಮೈಗೂಡಿಸಿಕೊಂಡಿರುವ ಅಥವಾ ಆಯ್ಕೆಯ ಸಿದ್ಧಾಂತದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಕ್ರಿಯೆಯಲ್ಲಿ ಅಲ್ಲ. ಎರಡನೆಯ ಕಾರಣ, ಸಂಘಪರಿವಾರದ ಸೈದ್ಧಾಂತಿಕ ನಿಲುವು ಭಾರತದ ಬಂಡವಾಳವಾದೀ ಪ್ರಭುತ್ವದ ನವಉದಾರವಾದೀ ಆರ್ಥಿಕತೆಗೆ ಊಳಿಗಮಾನ್ಯ ಧೋರಣೆಗಳ ರಾಜಕೀಯ ಮತ್ತು ಸಾಮಾಜಿಕತೆಗಳನ್ನು ಹೊಂದಿಸಿದ ಪರಿಷ್ಕೃತ ಫ್ಯಾಸೀವಾದವೇ ಆಗಿದೆ.



ಸಾಂಸ್ಕೃತಿಕ ಸಂಘಟನೆಗಳು ಮತ್ತು ಸಂಘಪರಿವಾರ

ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ




ಸಂಘಪರಿವಾರವು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಅಧಿಕಾರ ಹಿಡಿಯುವ ಎಷ್ಟೋ ಮೊದಲೇ ಹಿಂದುತ್ವದ ಸೈದ್ಧಾಂತಿಕತೆಯಲ್ಲಿ ತಮ್ಮನ್ನು ಗುರುತಿಸಿಕೊಂಡ ಜನರು ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳಲ್ಲಿ ವಿವಿಧ ರೀತಿಗಳಲ್ಲಿ ಸಕ್ರಿಯರಾಗಿದ್ದರು. ಸ್ವಾತಂತ್ರ್ಯಪೂರ್ವ ದಿನಗಳಿಂದಲೂ ಎಳೆಯರನ್ನು ಕ್ರೀಡೆ ಮತ್ತು ಧಾರ್ಮಿಕ–ಸಾಮಾಜಿಕ ಆಚರಣೆಗಳ ಮೂಲಕ ಆಕರ್ಷಿಸುತ್ತಾ, ಸಂಘಟಿಸುತ್ತಾ, ವಯಸ್ಸು, ಲಿಂಗ, ಉದ್ದೇಶ–ಸಂದರ್ಭಗಳಿಗನುಗುಣವಾದ ಸಂಘಟನೆಗಳನ್ನು ಹುಟ್ಟುಹಾಕುತ್ತಾ ಹೆಮ್ಮರವಾಗಿ ಬೆಳೆದ ಸಂಘಪರಿವಾರ ಡಿಜಿಟಲ್ ಬಂಡವಾಳವಾದದ ಪ್ರಸ್ತುತ ಕಾಲಘಟ್ಟದಲ್ಲಿ ರಾಜಕೀಯ ಅಧಿಕಾರವನ್ನು ಪಡೆದುಕೊಂಡಿದೆ. ಹೀಗಾಗಿ ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ, ಸಮೂಹ ಮಾಧ್ಯಮ ಹೀಗೆ ಭಾರತದ ಪ್ರಭುತ್ವದ ಎಲ್ಲ ಅಂಗಗಳಲ್ಲಿಯೂ ಸಂಘಪರಿವಾರದ ತಾತ್ವಿಕತೆಗೆ ಹೊದಿಸಿದ್ದ ಸಾಂಸ್ಕೃತಿಕ ಮುಸುಕನ್ನು ಕಳಚಿಹಾಕಿದ ಅಧಿಕಾರಸ್ಥರು, ಶಿಕ್ಷಣತಜ್ಞರು, ಸಂಸ್ಕೃತಿಚಿಂತಕರು, ತಾಂತ್ರಿಕ ಪರಿಣತರು ಮತ್ತು ರಾಜಕೀಯ ಕಾಲಾಳುಗಳು ಎಲ್ಲ ಕ್ಷೇತ್ರಗಳಲ್ಲೂ ಈಗ ಯಾವ ಮುಸುಕೂ ಇಲ್ಲದ ಹೆಮ್ಮೆಯ ಹಿಂದುತ್ವವಾದಿಗಳಾಗಿಯೇ ಕಾಣಸಿಗುತ್ತಾರೆ. ರಾಜ್ಯಗಳ ಮತ್ತು ಕೇಂದ್ರದ ಆರ್ಥಿಕ ನಿಯಂತ್ರಣದಲ್ಲಿ ಅರೆ ಸರ್ಕಾರೀ ಸಂಸ್ಥೆಗಳಾಗಿದ್ದ ವಿವಿಧ ಅಕಾಡೆಮಿಗಳು, ಈಗ ನೇರವಾಗಿ ಸಂಘಪರಿವಾರದ ಜನರಿಂದ ನಿರ್ವಹಿಸಲ್ಪಡುತ್ತಿವೆ. ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ, ಪ್ರಸ್ತುತ ಕನ್ನಡ ಸಾಹಿತ್ಯಪರಿಷತ್ತು ಮತ್ತು ಆಕಾಶವಾಣಿಗಳೂ ಸಹ ಇದಕ್ಕೆ ಹೊರತಾಗಿಲ್ಲ.

ಲೇಖಕರು, ಚಿತ್ರನಿರ್ಮಾಪಕರು, ಕಲಾವಿದರು, ಸಂಸ್ಕೃತಿಚಿಂತಕರು ಮೊದಲಾದ ಸೃಜನಶೀಲರು ಮತ್ತು ಬುದ್ಧಿಜೀವಿಗಳು ಸಂಘಪರಿವಾರದೊಂದಿಗೆ ಸೈದ್ಧಾಂತಿಕವಾಗಿ ಗುರುತಿಸಿಕೊಳ್ಳುವುದು ಅನೈತಿಕವೇ, ಅಪರಾಧವೇ ಎಂಬ ಪ್ರಶ್ನೆಗಳಿಗೆ ಈಗಿರುವ 'ಪ್ರಜಾತಾಂತ್ರಿಕ' ಚೌಕಟ್ಟಿನೊಳಗೇ ಉತ್ತರಿಸುವುದಾದರೆ, ತಾಂತ್ರಿಕವಾಗಿ 'ಇಲ್ಲ' ಎಂಬ ಖಚಿತ ಉತ್ತರ ಸಾಧ್ಯ. ಎಲ್‌ಪಿಜಿ ಆರ್ಥಿಕತೆ ಮತ್ತು ಸಾಮಾಜಿಕತೆಯ ಸಂದರ್ಭದಲ್ಲಿ ಲೇಖಕರು, ಚಿತ್ರನಿರ್ಮಾಪಕರು, ಕಲಾವಿದರು, ಸಂಸ್ಕೃತಿಚಿಂತಕರು ಮೊದಲಾದ ಸೃಜನಶೀಲರು ಮತ್ತು ಬುದ್ಧಿಜೀವಿಗಳಲ್ಲಿ ಅನೇಕರು ಸೈದ್ಧಾಂತಿವಾಗಿ ಬಂಡವಾಳವಾದದೊಂದಿಗೆ, ಉದಾರವಾದದೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವೇ ಪ್ರಶ್ನೆಗಳನ್ನು ಅಂಥವರ ಬಗ್ಗೆ ಕೇಳಿದಾಗಲೂ ಈಗಿರುವ ಪ್ರಜಾತಾಂತ್ರಿಕ ಚೌಕಟ್ಟಿನೊಳಗೆ ಸಿಗುವ ಉತ್ತರ 'ಇಲ್ಲ' ಎಂಬುದೇ ಆಗಿದೆ. ಹಾಗಿದ್ದರೆ ಸಂಘಪರಿವಾರದೊಂದಿಗೆ ಸೈದ್ಧಾಂತಿಕವಾಗಿ ಗುರುತಿಸಿಕೊಂಡ ವಿವಿಧ ರಂಗದ ಸೃಜನಶೀಲರು ಮತ್ತು ಬುದ್ಧಿಜೀವಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳಲ್ಲಿ ಸುಪ್ತವಾಗಿ ಅಥವಾ ಅಧಿಕೃತವಾಗಿ ಸೇರಿಕೊಂಡರೆ ಏನು ತೊಂದರೆ? ಅಂಥವರು ಯೋಜಿಸುವ ಸಾರ್ವಜನಿಕ ಕ್ರಿಯೆಗಳ ಮೂಲಕ ಅವರ ಸೈದ್ಧಾಂತಿಕ ನಿಲುವನ್ನು ಮುನ್ನೊತ್ತುವುದಕ್ಕೆ ವಿರೋಧ ಯಾಕೆ?

ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ತೊಂದರೆ ಇರುವುದು ಸಂಘಪರಿವಾರದ ಸೃಜನಶೀಲರು ಮತ್ತು ಬುದ್ಧಿಜೀವಿಗಳು, ಅಥವಾ ಯಾರೇ ಆಗಲಿ, ಅವರು ಮೈಗೂಡಿಸಿಕೊಂಡಿರುವ ಅಥವಾ ಆಯ್ಕೆಯ ಸಿದ್ಧಾಂತದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಕ್ರಿಯೆಯಲ್ಲಿ ಅಲ್ಲ. ಹಾಗೆ ಗುರುತಿಸಿಕೊಳ್ಳುವ ಸಿದ್ಧಾಂತವು ಜನಸಮುದಾಯದ ಅಂದರೆ ಸಾಮಾಜಿಕವಾಗಿ ದುಡಿಯುವ, ರಾಜಕೀಯವಾಗಿ ಆಳಿಸಿಕೊಳ್ಳುವ ಸಾಮಾನ್ಯ ಜನರ ಹಿತಾಸಕ್ತಿಗನ್ನು ಬೆಂಬಲಿಸುವ ಸಿದ್ಧಾಂತವಾಗಿದೆಯೋ, ಇಲ್ಲವೋ ಎಂಬುದು. ಅಂದರೆ ನಿಜವಾದ ಅರ್ಥದಲ್ಲಿ 'ಪ್ರಜಾಪ್ರಭುತ್ವ'ವಾದೀ ಸಿದ್ಧಾಂತವಾಗಿದೆಯೋ ಇಲ್ಲವೋ ಎಂಬುದರಲ್ಲಿ.

ಎರಡನೆಯ ಕಾರಣ, ಸಂಘಪರಿವಾರವು ತನ್ನ ರಾಜಕೀಯ ಆಯ್ಕೆ ಮತ್ತು ಆರ್ಥಿಕ ಆದ್ಯತೆಗಳನ್ನು ಅವುಗಳ ನಿಜರೂಪದಲ್ಲಿ ಮಂಡಿಸುವ ಬದಲು ಸಂಸ್ಕೃತಿಯ ಹೆಸರಿನಲ್ಲಿ ಅಭಿವ್ಯಕ್ತಗೊಳಿಸುತ್ತದೆ. ಭಾರತೀಯ ಸಂಸ್ಕೃತಿ, ಸನಾತನ ಭಾರತ, ವೈದಿಕಪರಂಪರೆ, ಆರ್ಷಜ್ಞಾನ, ವೇದವಿಜ್ಞಾನ, ವಿಶ್ವಗುರು ಹೀಗೆ ಸಂಘಪರಿವಾರವು ತನ್ನ ಸಂಕಥನಗಳಲ್ಲಿ ಮತ್ತೆ ಮತ್ತೆ ಬಳಸುವ ಯಾವ ಪದಗುಚ್ಛವನ್ನು ನೋಡಿದರೂ ಅದರ ಹಿಂದಿರುವುದು ದಿವ್ಯ–ಭವ್ಯವೆಂದು ಕೀರ್ತಿಸುವ ವರ್ಣವ್ಯವಸ್ಥೆಯೇ. ಜಾತಿತಾರತಮ್ಯ ಆಧಾರಿತ ಉತ್ತಮಿಕೆಯ ಬ್ರಾಹ್ಮಣ ಯಜಮಾನ್ಯವೇ. ನಂಬಿಕೆಯನ್ನು ವಿಜ್ಞಾನವೆಂದು, ಪುರಾಣಗಳನ್ನು ಚರಿತ್ರೆಯೆಂದು, ಜಾತಿ ತಾರತಮ್ಯಗಳನ್ನು ನೈಸರ್ಗಿಕ ಭೇದಗಳೆಂದು ನಂಬುವ, ತನ್ನ ನಂಬಿಕೆಯೇ ಚಾರಿತ್ರಿಕ ಮತ್ತು ವಸ್ತುನಿಷ್ಠ ಸಾರ್ವಕಾಲಿಕ ಸತ್ಯವೆಂದು ಪ್ರತಿಪಾದಿಸುವ ಸಂಘಪರಿವಾರದ ಸೈದ್ಧಾಂತಿಕತೆಯ ಹಿಂದೆ ಯಾವ ವೈಚಾರಿಕತೆಗೂ ಜಗ್ಗದ ಮೌಢ್ಯವಿದೆ.



ತನ್ನ ಅಜ್ಞಾನವನ್ನು ಸಮರ್ಥಿಸಿಕೊಳ್ಳುವ ಹುಂಬತನವಿದೆ. ತಾರ್ಕಿಕವಾಗಿ ಎದುರಿಸಲಾಗದವರನ್ನು ಬಗ್ಗುಬಡಿಯುವ ಕ್ರೌರ್ಯವಿದೆ. ಕ್ರಿಯೆಯ ಹೊಣೆಗಾರಿಕೆಯಿಂದ ಜಾರಿಕೊಳ್ಳಬಲ್ಲ ಕುತರ್ಕ–ಜಾಣ್ಮೆಗಳಿವೆ. ನೈತಿಕತೆ–ಅನೈತಿಕತೆ, ನ್ಯಾಯ–ಅನ್ಯಾಯ, ಸುಳ್ಳು–ಸತ್ಯಗಳ ನಡುವಿನ ಗೆರೆಯನ್ನು ಅಳಿಸಿ ಅಥವಾ ಆಚೀಚೆ ತಳ್ಳಿ ಗೊಂದಲದ ಲಾಭವನ್ನು ಪಡೆಯುವ ವ್ಯಾಪಾರಿಯ ಧೂರ್ತತೆ ಇದೆ. ಸಮಯಕ್ಕೊಂದು ಹೆಸರು, ಉದ್ದೇಶಕ್ಕೊಂದು ಸಂಘಟನೆಯನ್ನು ಹುಟ್ಟುಹಾಕಿ ತನ್ನೆಲ್ಲ ಹುಸಿಗಳನ್ನೂ ನಿಜವೆಂದು ತೋರುವಂತೆ ಪೋಷಿಸಬಲ್ಲ ಅಗಾಧ ಕಲ್ಪನಾಶಕ್ತಿ ಇದೆ.

ಬಂಡವಾಳವಾದೀ ಸಿದ್ಧಾಂತವು ಪ್ರತಿಪಾದಿಸುವ ಪ್ರಜಾಪ್ರಭುತ್ವವು ಕೇವಲ ತೋರಿಕೆಯದು. ಅಥವಾ ಅದು ಆಳುವವರ್ಗಕ್ಕೆ ಮಾತ್ರ ಅನ್ವಯವಾಗುವಂಥ 'ಪ್ರಜಾತಂತ್ರ'. ಹಾಗಿದ್ದರೂ ಅದರಲ್ಲಿ ಆಳಿಸಿಕೊಳ್ಳುವ ಜನಸಮುದಾಯದ ಆಶೋತ್ತರಗಳ ಭಿನ್ನ ನೆಲೆಗಳ ಅಭಿವ್ಯಕ್ತಿಗೆ ಮತ್ತು ಸೀಮಿತ ಮಟ್ಟದ ಭಿನ್ನಮತಕ್ಕೆ ಸ್ವಲ್ಪವಾದರೂ ಅವಕಾಶವಿದೆ. ಅದು ಕೇವಲ ಆಳುವವರ ಅಧಿಕಾರವನ್ನು ಛಿದ್ರವಾಗದಂತೆ ಕಾಪಾಡಿಕೊಳ್ಳುವ ಉದ್ದೇಶದಿಂದ ಎಂಬುದು ನಿಜ. ಹೀಗಿದ್ದರೂ ಒಟ್ಟು ಫಲಿತದಲ್ಲಿ, ಪ್ರಭುತ್ವದ ಬುನಾದಿಯನ್ನು ಅಲುಗಿಸದ ಭಿನ್ನಮತ ಮತ್ತು ಭಿನ್ನ ನಿಲುವುಗಳು ಜನಸಾಮಾನ್ಯರ ಅಸ್ಮಿತೆ ಮತ್ತು ಅನನ್ಯತೆಗಳಿಗೆ ಸ್ಥಳಾವಕಾಶವನ್ನು ಒದಗಿಸುತ್ತದೆ ಎಂಬುದೂ ಅಷ್ಟೇ ನಿಜ. ತನ್ನ ಗರ್ಭದಲ್ಲಿ ಆರ್ಥಿಕ ತಾರತಮ್ಯವನ್ನು ಪೋಷಿಸುತ್ತಲೇ ಸಮಾಜದ ಮೇಲ್ಪದರಗಳಲ್ಲಿ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ತೋರಿಕೆಯ ಇಲ್ಲವೆ ಸಾಂಕೇತಿಕವಾದ ಸಮಾನತೆಯನ್ನು ಬಂಡವಾಳವಾದವು ತಾತ್ವಿಕವಾಗಿಯಾದರೂ ಮಾನ್ಯಮಾಡುತ್ತದೆ. ಈ ಕಾರಣಕ್ಕಾಗಿಯೇ ಬಂಡವಾಳವಾದೀ ಪ್ರಜಾತಂತ್ರವು 'ಪ್ರಜಾಪ್ರಭುತ್ವ' ದ ಹೆಸರಿನಲ್ಲಿ ವಿಶ್ವದ ಎಲ್ಲ ಭಾಗಗಳಲ್ಲಿಯೂ 'ಜನಪ್ರಿಯ'ವಾದ ಜನತಂತ್ರವಾಗಿದೆ.

ಬಂಡವಾಳವಾದೀ ಪ್ರಭುತ್ವದ ತೀವ್ರ ಸ್ವರೂಪವಾದ ಫ್ಯಾಸೀವಾದದ ಸೈದ್ಧಾಂತಿಕ ಚೌಕಟ್ಟಿನೊಳಕ್ಕೆ ವರ್ಗಭೇದದ ಜೊತೆಗೆ ವರ್ಣಭೇದ ಮತ್ತು ಜನಾಂಗ ಭೇದಗಳು ಸೇರಿಕೊಳ್ಳುತ್ತವೆ. ಈ ಸ್ಥಿತಿಯಲ್ಲಿ ಜನಸಮುದಾಯದ ಪರವಾದ ಭಿನ್ನಮತಕ್ಕೆ ಯಾವ ಅವಕಾಶವೂ ಇಲ್ಲ. ಮಾತ್ರವಲ್ಲ, ಭಿನ್ನಮತವೆಂಬುದೇ ಇರಬಾರದೆಂಬ ಏಕಾಧಿಕಾರದ ನಿಲುವು ಫ್ಯಾಸೀವಾದದ ಅವಿಭಾಜ್ಯ ಅಂಗ. ಇನ್ನೂ ತೀವ್ರಸ್ಥಿತಿಯಲ್ಲಿ ಭಿನ್ನನಿಲುವನ್ನು ಹೊಂದಿರುವ ಜನರ ಅಸ್ಮಿತೆ, ಅನನ್ಯತೆ ಮತ್ತು ಅಸ್ತಿತ್ವಗಳು ಏಕಾಧಿಕಾರದ ಮೂಸೆಯಲ್ಲಿ ಕರಗಿಹೋಗಬೇಕು ಇಲ್ಲವೇ ನಾಶವಾಗಬೇಕು ಎಂಬ ಪರ್ಯಾಯವನ್ನು ಫ್ಯಾಸೀವಾದವು ಜನರಮುಂದೆ ಇಡುತ್ತದೆ. ನಾಶವಾಗುವುದಕ್ಕಿಂತಾ ಬದುಕಿರುವುದೇ ಎಲ್ಲರ, ಅದರಲ್ಲೂ ನಿರ್ಬಲರ ಸ್ವಾತಂತ್ರ್ಯದ ಪ್ರಾಥಮಿಕ ಅಭಿವ್ಯಕ್ತಿಯಾದ್ದರಿಂದ ಅವರ ಪ್ರತಿರೋಧವಿಲ್ಲದ ಜೀವನಶೈಲಿಯು ಫ್ಯಾಸೀವಾದೀ ಪ್ರಭುತ್ವಕ್ಕೆ ಜನರ 'ಸಮ್ಮತಿ'ಯಾಗಿ ಪರಿವರ್ತಿತವಾಗುತ್ತದೆ.

ಸಂಘಪರಿವಾರದ ಸೈದ್ಧಾಂತಿಕ ನಿಲುವು ಭಾರತದ ಬಂಡವಾಳವಾದೀ ಪ್ರಭುತ್ವದ ನವಉದಾರವಾದೀ ಆರ್ಥಿಕತೆಗೆ ಊಳಿಗಮಾನ್ಯ ಧೋರಣೆಗಳ ರಾಜಕೀಯ ಮತ್ತು ಸಾಮಾಜಿಕತೆಗಳನ್ನು ಹೊಂದಿಸಿದ ಪರಿಷ್ಕೃತ ಫ್ಯಾಸೀವಾದವೇ ಆಗಿದೆ. ಉತ್ಪಾದನೆ, ಸರಕು–ಸೇವೆ, ವಿನಿಮಯ–ಹಂಚಿಕೆಗಳ ಆರ್ಥಿಕತೆಯಲ್ಲಿ ಬಂಡವಾಳವಾದಿಯಾಗಿ, ಕೌಟುಂಬಿಕ ಸಂಬಂಧಗಳು, ಸಾಮಾಜಿಕ ಒಡನಾಟ ಮತ್ತು ಸಾಂಸ್ಕೃತಿಕ ಧೋರಣೆಗಳಲ್ಲಿ ಊಳಿಗಮಾನ್ಯ ಸಮಾಜವಾಗಿ ಇರುವ ಭಾರತದ ಸಂಕೀರ್ಣ ಸ್ವರೂಪವು ಸಂಘಪರಿವಾರದ ಅಧಿಕಾರಗ್ರಹಣಕ್ಕೆ ಅನುಕೂಲಕರವಾಗಿಯೂ, ತಮ್ಮ ಧೋರಣೆಗಳಿಗೆ ಹೊಂದುವಂತೆ ನಿಭಾಯಿಸಲು ಏಕಕಾಲಕ್ಕೆ ಕಷ್ಟಕರವಾದುದೂ ಆಗಿದೆ. ಯೂರೋಪಿನ ನಾಜ಼ೀ ಫ್ಯಾಸೀವಾದದಲ್ಲಿ ಜನಾಂಗದ್ವೇಷಕ್ಕೆ ಗುರಿಯಾಗಿದ್ದ ಯಹೂದಿಗಳ ಸ್ಥಾನದಲ್ಲಿ ಭಾರತದಲ್ಲಿ ಸಂಘಪರಿವಾರದ ವೈದಿಕ–ಸನಾತನವಾದೀ ಫ್ಯಾಸೀವಾದಕ್ಕೆ ಮುಸ್ಲಿಂ ಮತ್ತು ಕ್ರೈಸ ಧರ್ಮೀಯರು ದ್ವೇಷಯೋಗ್ಯರಾಗಿದ್ದಾರೆ. ಕಮ್ಯೂನಿಸ್ಟರು ಮತ್ತು ಅರಾಜಕತಾವಾದಿಗಳು ಹಿಟ್ಲರ್ ಮತ್ತು ಮುಸೋಲಿನಿಗೆ ಹೇಗೋ ಹಾಗೆ ಭಾರತದಲ್ಲಿ ಕಮ್ಯೂನಿಸ್ಟರು ಮತ್ತು ನಾಸ್ತಿಕರು ಸಂಘಪರಿವಾರಕ್ಕೆ ಹಾಗೆ.

ಊಳಿಗಮಾನ್ಯ ಸಮಾಜದಲ್ಲಿ ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಜನಸಾಮಾನ್ಯರಿಗೆ ಸಮ್ಮತವಾದ 'ಸರ್ವಶಕ್ತ' ಏಕದೇವ–ದೇವಿಯ ಆರಾಧನೆಯು, ಏಕಾಧಿಕಾರದ ಮನುಷ್ಯರೂಪದ ನೇತಾರನ ಆರಾಧನೆಯಾಗುತ್ತದೆ. ಇದಕ್ಕೆ ವಿರುದ್ಧವಾದ ಧೋರಣೆಯು ನಾಸ್ತಿಕತೆ, ದೈವದ್ರೋಹ ಮತ್ತು ರಾಜದ್ರೋಹವೆನಿಸುತ್ತದೆ. ಸಂಘಪರಿವಾರವು ಅಂಥ ಏಕದೇವತೆಯ ಜೊತೆಗೆ, ಮತ್ತು ಅದರ ಸ್ಥಾನದಲ್ಲಿ ಮಾತೃಭೂಮಿಯನ್ನು ಪ್ರತಿಷ್ಠಾಪನೆಗೊಳಿಸುತ್ತದೆ. ಹೀಗಾಗಿ ಜನಸಮುದಾಯವನ್ನು ದೇಶವೆಂದು ಗುರುತಿಸಿ ಗೌರವಿಸುವ ಬದಲು ಭಾರತದ ಭೌಗೋಳಿಕ ಚಿತ್ರವನ್ನೇ ಭಾರತಮಾತೆ, ನಾಡದೇವಿ ಎಂದು ಭಾವಿಸಿ ಪೂಜಿಸುವಂಥ ದೇಶದ ಆರಾಧನೆಯು, ಸಂಘಪರಿವಾರದ ಪಾಲಿಗೆ ದೇಶಭಕ್ತಿ, ರಾಷ್ಟ್ರಭಕ್ತಿ, ನಾಡಭಕ್ತಿ ಮುಂತಾದ ಧಾರ್ಮಿಕ–ಲೌಕಿಕ ಮಿಶ್ರಣದ ರಾಜಕೀಯ ಮೌಲ್ಯವಾಗುತ್ತದೆ. ಇದರ ಬಗೆಗಿನ ಭಿನ್ನಮತವು ಸಹಜವಾಗಿಯೇ ದೇಶದ್ರೋಹ, ರಾಷ್ಟ್ರದ್ರೋಹ, ಮಾತೃಭೂಮಿಗೆ ತೋರಿಸಬಾರದ ಅಗೌರವ ಎಂದಾಗಿಬಿಡುತ್ತದೆ.

ಸಂಘಪರಿವಾರದ ಸೈದ್ಧಾಂತಿಕ ನಿಲುವಿನ ಜೊತೆ ತಮ್ಮನ್ನು ಗುರುತಿಸಿಕೊಳ್ಳುವ ಸೃಜನಶೀಲರು, ಕಲಾವಿದರು ಮತ್ತು ಬುದ್ಧಿಜೀವಿಗಳು ಬೌದ್ಧಿಕ ವಾಗ್ವಾದ ಮತ್ತು ಚರ್ಚೆಗಳಲ್ಲಿ ತಮ್ಮ ಸೈದ್ಧಾಂತಿಕ ನೆಲೆಯನ್ನು ಸ್ಪಷ್ಟವಾಗಿ ಪ್ರಕಟಿಸಿ ಸಮರ್ಥಿಸಿಕೊಳ್ಳುವ ಬದಲು 'ಹೀಗಿದ್ದರೇನು ತಪ್ಪು?', 'ಇದು ಹಿಂದಿನವರ ತೀರ್ಮಾನ', 'ನೀವೂ ಇದರಲ್ಲಿ ಪಾಲುದಾರರು' ಮುಂತಾಗಿ ಪ್ರತಿದಾಳಿ ನಡೆಸಿ ಬಾಯಿ ಮುಚ್ಚಿಸಲು ಯತ್ನಿಸುತ್ತಾರೆ.

ಸಂಘಪರಿವಾರದಲ್ಲಿ ಮುಗ್ಧ ಕಾಲಾಳುಗಳಿದ್ದಾರೆ. ಅರೆಶಿಕ್ಷಿತ ಉತ್ಸಾಹಿಗಳಿದ್ದಾರೆ. ಅಧ್ಯಯನಶೀಲರಾದ ಬೌದ್ಧಿಕರಿದ್ದಾರೆ. ಆದರೂ ಸರ್ಕಾರದ ಅನುದಾನವನ್ನು ಪಡೆಯುವ ಅಕಾಡೆಮಿಗಳು, ಸಂಸ್ಕೃತಿ ಕೇಂದ್ರಗಳು, ಸಾಹಿತ್ಯ ಕೂಟಗಳು, ಚಲನಚಿತ್ರ ಸಂಸ್ಥೆಗಳು, ಕಲಾವಿದರ ಬಳಗಗಳು, ಪತ್ರಿಕಾ ಮಾಧ್ಯಮಗಳು, ದೂರದರ್ಶನ, ಆಕಾಶವಾಣಿಯಂಥ ಪ್ರಸಾರ ಕೇಂದ್ರಗಳು ಇವುಗಳಲ್ಲಿ ತುಂಬಿಕೊಂಡಿರುವ ಸಂಘಪರಿವಾರದ ಸೃಜನಶೀಲರು ಮತ್ತು ಬುದ್ಧಿಜೀವಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವೈಚಾರಿಕ ಮತ್ತು ತಾರ್ಕಿಕ ನೆಲೆಗಳಲ್ಲಿ ಭಿನ್ನ ಸೈದ್ಧಾಂತಿಕ ನಿಲುವುಗಳ ಸೃಜನಶೀಲರನ್ನು ಮತ್ತು ಬುದ್ಧಿಜೀವಿಗಳೊಂದಿಗೆ ಮುಕ್ತಚರ್ಚೆ–ವಾಗ್ವಾದಗಳಲ್ಲಿ ಪರಸ್ಪರವಾಗಿ ಬೆರೆಯುವುದಕ್ಕಿಂತಾ ಏಕಮುಖವಾದ ಸ್ವಕೀರ್ತನೆ ಅಥವಾ ಎದುರಾಳಿಯ ಭರ್ತ್ಸನೆಗಳ ಮೂಲಕ ಎದುರಿಸುತ್ತಾರೆ. ಗುಂಪುದಾಳಿಯ ಮೂಲಕ ಮಣಿಸಲು ಯೋಚಿಸುತ್ತಾರೆ.

ಹೀಗಾಗಲು ಮುಖ್ಯ ಕಾರಣ ಸಂಘಪರಿವಾರದ ಸೈದ್ಧಾಂತಿಕ ನೆಲೆಯು ಬಂಡವಾಳವಾದದಂತೆ ಪ್ರಜಾತಾಂತ್ರಿಕವಾಗಿರದೆ, ಏಕಾಧಿಕಾರವನ್ನು ಬಯಸುವ ಫ್ಯಾಸೀವಾದವನ್ನೇ ನೆಚ್ಚಿಕೊಂಡಿರುವುದೇ ಆಗಿದೆ.



ಪ್ರಧಾನಿಗಳಿಂದ ಮೂರೂ ಕೃಷಿ ಕಾಯ್ದೆಗಳ ರದ್ದಿನ ಪ್ರಕಟಣೆ

ವ್ಯಾಪಕ ಪರಿಣಾಮಗಳ ವಿಜಯ



ಹಿಂದುತ್ವ-ನವಉದಾರವಾದಿ ಸರ್ವಾಧಿಕಾರಶಾಹೀ ಆಳ್ವಿಕೆಯ ವಿರುದ್ಧದ ಹೋರಾಟ ಒಂದು ಹೊಸ ಮಜಲನ್ನು ತಲುಪಿದೆ ಎನ್ನುವುದು ಸ್ಪಷ್ಟ.ವಾಗಿದೆ. ರೈತ ಚಳವಳಿ ಸಾಧಿಸಿರುವ ಅಭೂತಪೂರ್ವ ಏಕತೆ ಹಾಗೂ ಅದು ದುಡಿಯುವ ವರ್ಗದ ಚಳವಳಿಯೊಂದಿಗೆ ಸಾಧಿಸಿರುವ ಐಕಮತ್ಯದ ಸ್ವರೂಪದಲ್ಲಿ ದೇಶದಲ್ಲಿ ವರ್ಗ ರಾಜಕೀಯ ಮೇಲೆದ್ದು ಬಂದಿದೆ. ಎಡ ಶಕ್ತಿಗಳ ದೃಷ್ಟಿಯಲ್ಲಿ ಈ ಬೆಳವಣಿಗೆಗಳು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವ ದಿಸೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಹಿಂದುತ್ವ-ಸರ್ವಾಧಿಕಾರಶಾಹೀ ಆಳ್ವಿಕೆಗೆ ಒಂದು ಪರಿಣಾಮಕಾರೀ ಪರ್ಯಾಯವನ್ನು ಕಟ್ಟಲು ಅದು ನೆರವಾಗಲಿದೆ.



* ಪ್ರಕಾಶ್ ಕಾರಟ್

ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿ ಶರಣಾಗಿದ್ದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನೇತೃತ್ವದಲ್ಲಿ ನಡೆದ ರೈತರ ಸಂಘಟಿತ ಚಳವಳಿಗೆ ಸಂದ ಐತಿಹಾಸಿಕ ವಿಜಯವಾಗಿದೆ. ಕಾರ್ಪೊರೇಟ್-ಪರವಾದ ಕೆಲವು ಕೃಷಿ ಕ್ರಮಗಳನ್ನು ರದ್ದುಪಡಿಸಿದ್ದಷ್ಟೇ ಅಲ್ಲ, ಇದು ಇನ್ನೂ ವ್ಯಾಪಕವಾದ ಪರಿಣಾಮಗಳನ್ನು ಬೀರಬಲ್ಲ ಮಹತ್ವದ ವಿಜಯವಾಗಿದೆ.

ಮೊದಲ ಹಾಗೂ ಅತಿ ಪ್ರಮುಖ ವಿಷಯವೆಂದರೆ, ರೈತ-ಆಧಾರಿತ ಕೃಷಿ ಮೂಲಕ ರೈತರ ಜೀವನೋಪಾಯದ ಹಕ್ಕುಗಳನ್ನು ಯಶಸ್ವಿಯಾಗಿ ರಕ್ಷಿಸಿಕೊಂಡಿರುವುದು ಮೋದಿ ಸರ್ಕಾರ ಅನುಸರಿಸುತ್ತಾ ಬಂದಿರುವ ನವ-ಉದಾರವಾದಿ ಕಾರ್ಯಸೂಚಿಗೆ ಆಗಿರುವ ಒಂದು ಹಿನ್ನಡೆ.

ಎರಡನೆಯದಾಗಿ, ರೈತರ ಆಂದೋಲನದ ಯಶಸ್ಸು ಸರ್ವಾಧಿಕಾರಶಾಹಿಗೆ ಮತ್ತು ಪ್ರಜಾಪ್ರಭುತ್ವವನ್ನು ತುಳಿಯುವವರಿಗೆ ಕೊಟ್ಟಿರುವ ಬಲವಾದ ಹೊಡೆತವಾಗಿದೆ. ದುಡಿಯುವ ವರ್ಗದ ಬೆಂಬಲದೊಂದಿಗೆ ನಡೆದ ಅನ್ನದಾತರ ಸಾಮೂಹಿಕ ಚಳವಳಿಯು ಸ್ವತಃ ಸಂಸತ್ತನ್ನೇ ಅವಮಾನಿಸಿ ಸಂಸದೀಯ ನಿಯಮಗಳನ್ನು ಮೊಟಕುಗೊಳಿಸಿದ ಹಾಗೂ ಬದಿಗೊತ್ತಿದ ಸರ್ವಾಧಿಕಾರಶಾಹೀ ವ್ಯವಸ್ಥೆಗೆ ಹೊಡೆತ ನೀಡಿದೆ.

ಮೂರು ಕೃಷಿ ಕಾನೂನುಗಳನ್ನು ಮೊದಲಿಗೆ 2020ರ ಜೂನ್‌ನಲ್ಲಿ ಯಾವುದೇ ಸಮಾಲೋಚನೆ ನಡೆಸದೆ ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಲಾಗಿತ್ತು ಹಾಗೂ ಸ್ಥಾಯೀ ಸಮಿತಿಗೆ ಕಳಿಸದೆ ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ರಾಜ್ಯಸಭೆಯಲ್ಲಿ ಮತದಾನ ಪ್ರಕ್ರಿಯೆಯನ್ನು ಪಾಲಿಸದೇ ಮತ್ತು ಪ್ರತಿಪಕ್ಷ ಸದಸ್ಯರ ದನಿಯನ್ನು ಅಡಗಿಸಿ ಪಾಸುಮಾಡಿಸಿಕೊಳ್ಳಲಾಯಿತು. ಈ ಸರ್ವಾಧಿಕಾರಶಾಹೀ ವ್ಯವಸ್ಥೆಯನ್ನು ರೈತರ ಸಾಮೂಹಿಕ ಆಂದೋಲನ ನುಚ್ಚು ನೂರು ಮಾಡಿದೆ.

ಸುಗ್ರೀವಾಜ್ಞೆಗಳ ಆಳ್ವಿಕೆಗೆ ಸವಾಲು ಸಾಮೂಹಿಕ ಹೋರಾಟದ ದಾರಿ

ಈ ಹಿಂದೆಯೂ, ಭೂ ಸ್ವಾಧೀನ ಕಾನೂನು ತಿದ್ದುಪಡಿ ಮಾಡಲು 2015ರಲ್ಲಿ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿತ್ತು. ಭೂಮಿ ಅಧಿಕಾರ್ ಆಂದೋಲನ್ ಎಂಬ ಸಂಯುಕ್ತ ವೇದಿಕೆಯಿಂದ ಆ ಸುಗ್ರೀವಾಜ್ಞೆ ವಿರುದ್ಧ ನಡೆಸಿದ ಹೋರಾಟದ ಫಲವಾಗಿ ಲೋಕಸಭೆಯಲ್ಲಿ ಅಂಗೀಕಾರವಾದ ಆ ಆಧ್ಯಾದೇಶವನ್ನು ಸರ್ಕಾರ ಕೈಬಿಡಬೇಕಾಗಿ ಬಂತು.

ಆದರೆ 2019ರ ಲೋಕಸಭೆ ಚುನಾವಣೆಯಲ್ಲಿ ಜಯ ಗಳಿಸಿದ ನಂತರ ಸರ್ಕಾರ ಈ ಪಾಠವನ್ನು ಮರೆತು ಸುಗ್ರೀವಾಜ್ಞೆ ಮತ್ತು ಸಂಸತ್ತಿನ ಮೂಲಕ ಪ್ರಜಾಪ್ರಭುತ್ವ-ವಿರೋಧಿ ಕಾನೂನುಗಳನ್ನು ಜಾರಿ ಮಾಡುವ ಪರಿಪಾಠವನ್ನೇ ಬೆಳೆಸಿಕೊಂಡಿತು. ಸಂವಿಧಾನದ 370ನೇ ವಿಧಿಯ ರದ್ದತಿ ಹಾಗೂ ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ಅವುಗಳಲ್ಲಿ ಸೇರಿವೆ. ಹೀಗಾಗಿ, ಈಗಿನ ಬೆಳವಣಿಗೆಯಿಂದಾಗಿ ಭವಿಷ್ಯದಲ್ಲಿ ಈ ರೀತಿ ಮಾಡುವುದಕ್ಕೂ ಮುಂಚೆ ಮೋದಿ ಸರ್ಕಾರ ಎರಡೆರಡು ಬಾರಿ ಚಿಂತಿಸುವುದು ಅಗತ್ಯವಾಗಿದೆ.

ಮೂರನೆಯದಾಗಿ, ವರ್ಷದಷ್ಟು ದೀರ್ಘಕಾಲ ನಡೆದ ರೈತರ ಚಳವಳಿಯು ಹಿಂದುತ್ವ-ನವ-ಉದಾರವಾದಿ ಆಡಳಿತದ ನೀತಿಗಳ ವಿರುದ್ಧ ನಡೆಸಬೇಕಾದ ಹೋರಾಟಕ್ಕೆ ದಾರಿಯನ್ನು ತೋರಿಸಿಕೊಟ್ಟಿದೆ. ಅದರಲ್ಲೂ ವಿಶೇಷವಾಗಿ, ಸಂಸದೀಯ ಪ್ರತಿಪಕ್ಷ ದುರ್ಬಲ ಹಾಗೂ ಪರಿಣಾಮಕಾರಿ ಆಗಿಲ್ಲದಿರುವ ಸನ್ನಿವೇಶದಲ್ಲಿ, ಜನರನ್ನು ಅಣಿನೆರೆಯಿಸಿ ಪ್ರತಿರೋಧ ಕಟ್ಟಲು ಸಂಯುಕ್ತ ವೇದಿಕೆಗಳ ಮೂಲಕ ಸಾಮೂಹಿಕ ಹೋರಾಟಗಳನ್ನು ರೂಪಿಸುವುದೇ ಉತ್ತಮ ದಾರಿ ಎನ್ನುವುದನ್ನು ತೋರಿಸಿಕೊಟ್ಟಿದೆ.

ಹಿಮ್ಮೆಟ್ಟಿದ್ದು ಯಾಕೆ?

ಮೋದಿ ಸರ್ಕಾರ ಈ ಹಂತದಲ್ಲಿ ಹಿಂದಕ್ಕೆ ಸರಿದದ್ದು ಯಾಕೆಂಬ ಪ್ರಶ್ನೆ ಉದ್ಭವವಾಗುತ್ತದೆ. ಪಂಜಾಬ್, ಹರ್ಯಾಣ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗವು ರೈತ ಚಳವಳಿಯ ಪ್ರಮುಖ ಕೇಂದ್ರವಾಗಿತ್ತು. ದಬ್ಬಾಳಿಕೆ ಮೂಲಕ ಚಳವಳಿಯನ್ನು ಹತ್ತಿಕ್ಕಲು ಮತ್ತು ಸಿಖ್ ರೈತ ನಾಯಕರನ್ನು ಖಲಿಸ್ತಾನಿಗಳು ಮತ್ತು ರಾಷ್ಟ್ರ-ವಿರೋಧಿಗಳು ಎಂದು ಬಿಂಬಿಸಲು ಮೋದಿ ಸರ್ಕಾರ ಮಾಡಿದ ಪ್ರಯತ್ನಗಳಿಂದಾಗಿ ಇಡೀ ಪಂಜಾಬಿನ ಜನರು ಬಿಜೆಪಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ತಿರುಗಿ ಬೀಳುವಂತಾಯಿತು. ಪರಿಸ್ಥಿತಿ ಎಲ್ಲಿವರೆಗೆ ಹೋಗಿದೆಯೆಂದರೆ ಯಾವುದೇ ಬಿಜೆಪಿ ನಾಯಕ ಪಂಜಾಬ್‌ನ ಯಾವುದೇ ಹಳ್ಳಿಗೆ ಕಾಲಿಡುವಂತಿಲ್ಲ. ಪಂಜಾಬ್ ವಿಧಾನ ಸಭೆ ಚುನಾವಣೆಗೆ ಇನ್ನು ಕೆಲವೇ ವಾರವಿರುವಾಗ, ಎಲ್ಲ ಕಡೆಯಿಂದ ದಾಳಿಗೊಳಗಾಗಿರುವ ಬಿಜೆಪಿ ಏಕಾಂಗಿತನದ ಪರಿಸ್ಥಿತಿಯಿಂದ ಹೊರಬರಲು ಹತಾಶೆಯ ಕ್ರಮಗಳನ್ನು ಕೈಗೊಳ್ಳಲೇ ಬೇಕಾಗಿ ಬಂತು.

ಪಂಜಾಬ್‌ನಲ್ಲಿ ಚುನಾವಣಾ ಭವಿಷ್ಯವನ್ನು ತ್ಯಾಗ ಮಾಡಲು ಸಾಧ್ಯವಿದೆ ಎಂದು ಬಿಜೆಪಿ ಯೋಚಿಸಿದರೂ ಉತ್ತರ ಪ್ರದೇಶದಲ್ಲಿ ತೂಗುತ್ತಿರುವ ಅಪಾಯದ ಕತ್ತಿಯನ್ನು ಯಾವ ಕಾರಣಕ್ಕೂ ನಿರ್ಲಕ್ಷಿಸುವ ಸ್ಥಿತಿಯಲ್ಲಿ ಅದು ಇಲ್ಲ.

ಪಶ್ಚಿಮ ಉತ್ತರ ಪ್ರದೇಶದಲ್ಲಿ ಕಳೆದೊಂದು ವರ್ಷದಿಂದ ಇಡೀ ರೈತಾಪಿ ವರ್ಗ ಒಗ್ಗಟ್ಟಾಗಿ ಚಳವಳಿಯ ಪರವಾಗಿ ಎದ್ದು ನಿಂತಿದೆ. 2014ರ ಲೋಕಸಭೆ ಹಾಗೂ 2019ರ ವಿಧಾನಸಭೆ ಚುನಾವಣೆಗಳಲ್ಲಿ ರೈತರ ಗಣನೀಯ ವಿಭಾಗ ಬಿಜೆಪಿಗೆ ಬೆಂಬಲ ನೀಡಿತ್ತು. 2013ರ ಮುಜಾಫರ್‌ನಗರ ಗಲಭೆಗಳಿಂದ ಜಾಟ್ ಹಾಗೂ ಮುಸ್ಲಿಮರಲ್ಲಿ ಉಂಟಾದ ಬಿರುಕನ್ನು ಮುಚ್ಚಲು ಕಿಸಾನ್ ಚಳವಳಿ ದೊಡ್ಡ ಪ್ರಮಾಣದಲ್ಲಿ ನೆರವಾಯಿತು. 2013ರ ಗಲಭೆಯು ಪರಿಸ್ಥಿತಿಯನ್ನು ಧ್ರುವೀಕರಿಸಲು ಬಿಜೆಪಿಗೆ ನೆರವಾಗಿತ್ತು. ಆದರೆ, ಮುಜಾಫರ್‌ನಗರದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ಬೃಹತ್ ರ್‍ಯಾಲಿ ಪ್ರಬಲವಾದ ಸಂದೇಶ ಸಾರಿತ್ತು.

ಕೇಂದ್ರ ಸಚಿವರೊಬ್ಬರ ಮಗ ಕಾರು ಹರಿಸಿ ನಾಲ್ಕು ರೈತರ ಹತ್ಯೆಗೆ ಕಾರಣವಾದ ಉತ್ತರ ಪ್ರದೇಶದ ಲಖಿಂಪುರ ಖೇರಿಯ ದೌರ್ಜನ್ಯದಿಂದಾಗಿ ರೈತರ ಪರ ಬೆಂಬಲ ಹಾಗೂ ಸಹಾನುಭೂತಿ ಇಡೀ ರಾಜ್ಯದಲ್ಲಿ ಇನ್ನಷ್ಟು ಹೆಚ್ಚಾಗಿದೆ.

ಬಿಜೆಪಿ ಮಟ್ಟಿಗೆ ಉತ್ತರ ಪ್ರದೇಶವು ಬಹಳ ಜತನದಿಂದ ರಕ್ಷಿಸಬೇಕಾದ ಕಿರೀಟದ ರತ್ನವಾಗಿದೆ. ಅಮಿತ್ ಷಾ ಮತ್ತೆ-ಮತ್ತೆ ಹೇಳುತ್ತಿರುವಂತೆ, 2022ರ ಅಸೆಂಬ್ಲಿ ಚುನಾವಣೆಯ ಗೆಲುವು 2024ರ ಲೋಕಸಭೆ ಚುನಾವಣೆಯ ಗೆಲುವಿಗೆ ಹಾದಿ ಮಾಡಿಕೊಡಬೇಕಾಗಿದೆ. ಕಿಸಾನ್ ಆಂದೋಲನದಿಂದ ಉಂಟಾಗಿರುವ ಅಪಾಯ ಹಾಗೂ ಆದಿತ್ಯನಾಥ ಸರ್ಕಾರದ ದಮನಕಾರೀ ಆಡಳಿತದಿಂದಾಗಿ ಬೆಂಬಲ ಕುಸಿಯುತ್ತಿರುವುದರಿಂದ ಬಿಜೆಪಿಗೆ ಅಪಾಯ ಇನ್ನೂ ಹೆಚ್ಚಾಗಿದೆ. ಉತ್ತರ ಪ್ರದೇಶದಲ್ಲಿ ನಷ್ಟದ ಪ್ರಮಾಣವನ್ನು ತಗ್ಗಿಸಲು ಮೋದಿ ಹಿಮ್ಮೆಟ್ಟುವ ತಂತ್ರಕ್ಕೆ ಶರಣಾಗಿದ್ದಾರೆ. ಈ ನಡೆಯ ಹಿಂದೆ ಇನ್ನೂ ಒಂದು ವಾಸ್ತವವಿದೆ. ಕಿಸಾನ್ ಚಳವಳಿ ಹಾಗೂ ಅದು ಎತ್ತಿರುವ ಪ್ರಶ್ನೆಗಳು ಮುನ್ನೆಲೆಯಲ್ಲಿ ಇರುವಾಗ ವಿಭಜನಕಾರಿ ಕೋಮು ಅಜೆಂಡಾದ ಮೇಲೆ ಜನರ ಗಮನ ಕೇಂದ್ರೀಕರಿಸುವಂತೆ ಮಾಡುವುದು ಬಿಜೆಪಿಗೆ ಕಷ್ಟ ಎನ್ನುವುದೇ ಆ ವಾಸ್ತವ ಸಂಗತಿ.

ರೈತರ ಪ್ರಶ್ನೆ ತನ್ನ ಹಾದಿಯಿಂದ ಸರಿದಿರುವುದರಿಂದ ತನ್ನ ಪ್ರಚೋದನಕಾರಿ ಹಿಂದುತ್ವ ಅಜೆಂಡಾವನ್ನು ಎತ್ತಲು ಪರಿಸ್ಥಿತಿ ಹದಗೊಳ್ಳಬಹುದು ಎನ್ನುವುದು ಬಿಜೆಪಿ ಲೆಕ್ಕಾಚಾರವಾಗಿದೆ. ಆದರೆ, ರೈತರ ಪ್ರಶ್ನೆಗಳು ಮಾಯವಾಗುವ ಪ್ರಮೇಯವೇ ಇಲ್ಲ.

ಚಳವಳಿಯ ಕಾವು ಇಳಿಯದು

ಯಾಕೆಂದರೆ ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವುದು ಮಾತ್ರವಲ್ಲದೆ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಗೆ ಶಾಸನಾತ್ಮಕ ಖಾತ್ರಿ ಎರಡನೇ ಜೀವನ್ಮರಣ ಪ್ರಶ್ನೆ ಎಂದು ಎಸ್‌ಕೆಎಂ ಸ್ಪಷ್ಟಪಡಿಸಿದೆ.



ಕೃಪೆ: ಸಾತ್ವಿಕ್ ಗಡೆ, ದಿ ಹಿಂದು

ರೈತ ಸಮುದಾಯಕ್ಕೆ ಮಾರಕವಾಗಲಿರುವ, ವಿದ್ಯುತ್ ವಿತರಣೆಯ ಖಾಸಗೀಕರಣಕ್ಕೆ ಅನುಕೂಲವಾಗುವ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಹಿಂದೆ ಪಡೆಯಬೇಕೆಂಬುದು ಮತ್ತೊಂದು ಪ್ರಮುಖ ಬೇಡಿಕೆಯಾಗಿದೆ. ಈ ಬೇಡಿಕೆಗಳ ಮೇಲ್ಲೆ ಚಳವಳಿಯನ್ನು ಹೇಗೆ ಕಟ್ಟಬೇಕು ಎನ್ನುವುದನ್ನು ಎಸ್‌ಕೆಎಂ ನಿರ್ಧರಿಸಲಿದೆ.

ಏನೇ ಇರಲಿ; ಹಿಂದುತ್ವ-ನವ-ಉದಾರವಾದಿ ಸರ್ವಾಧಿಕಾರಶಾಹೀ ಆಳ್ವಿಕೆಯ ವಿರುದ್ಧದ ಹೋರಾಟ ಒಂದು ಹೊಸ ಮಜಲನ್ನು ತಲುಪಿದೆ ಎನ್ನುವುದು ಮಾತ್ರ ಸ್ಪಷ್ಟ. ರೈತ ಚಳವಳಿ ಸಾಧಿಸಿರುವ ಅಭೂತಪೂರ್ವ ಏಕತೆ ಹಾಗೂ ಅದು ದುಡಿಯುವ ವರ್ಗದ ಚಳವಳಿಯೊಂದಿಗೆ ಸಾಧಿಸಿರುವ ಐಕಮತ್ಯದ ಸ್ವರೂಪದಲ್ಲಿ ದೇಶದಲ್ಲಿ ವರ್ಗ ರಾಜಕೀಯ ಮೇಲೆದ್ದು ಬಂದಿದೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೀಡಿದ್ದ 2020 ನವೆಂಬರ್ 26ರ ಸಾರ್ವತ್ರಿಕ ಮುಷ್ಕರದ ಕರೆಯೊಂದಿಗೆ ಸಾಮೂಹಿಕ ಹೋರಾಟ ಆರಂಭವಾಗಿತ್ತು ಎನ್ನುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಅಖಿಲ ಭಾರತ ಕಿಸಾನ್ ಸಂಘರ್ಷ ಸಮಿತಿಯ 'ದೆಹಲಿ ಚಲೋ' ಘೋಷಣೆಯೊಂದಿಗೆ ನಡೆದ ಚಳವಳಿಯೊಂದಿಗೆ ಅದು ಸಮನ್ವಯಗೊಂಡಿತ್ತು. ಆಗಿನಿಂದ, ರೈತರು ಹಾಗೂ ಕಾರ್ಮಿಕರ ಹೋರಾಟಗಳು ಒಂದಕ್ಕೊಂದು ಬೆಸೆದು ನಡೆಯುತ್ತಿವೆ.

ಆಯಾಯ ರಂಗಗಳಲ್ಲಿ ವಿಸ್ತ್ರತ ಒಗ್ಗಟ್ಟನ್ನು ರೂಪಿಸುವಲ್ಲಿ ಎಡಪಂಥೀಯ ನೇತೃತ್ವದ ಕಿಸಾನ್ ಮತ್ತು ಕಾರ್ಮಿಕ ಸಂಘಟನೆಗಲ ಪಾತ್ರ ಮಹತ್ತರವಾಗಿದೆ. ರೈತ-ಕಾರ್ಮಿಕರ ಜಂಟಿ ಹೋರಾಟಗಳನ್ನು ರೂಪಿಸುವಲ್ಲಿ ಅವು ಮಹತ್ವದ ಪಾತ್ರ ನಿರ್ವಹಿಸಿವೆ. ಸಂಸತ್ತಿನ ಚಳಿಗಾಲದ ಅಧಿವೇಶನದ ವೇಳೆ ನಡೆಸಲು ಕರೆ ನೀಡಲಾಗಿರುವ ಎರಡು ದಿನಗಳ ಮುಷ್ಕರದ ಕರೆಯೂ ಸೇರಿದಂತೆ ಮುಂಬರುವ ಹೋರಾಟಗಳಿಗೆ ಕಾರ್ಯಾಚರಣೆಯ ಈ ಸಹಯೋಗವು ನೆರವಾಗಲಿದೆ.

ಸಿಪಿಐ (ಎಂ) ಮತ್ತು ಎಡ ಶಕ್ತಿಗಳ ದೃಷ್ಟಿಯಲ್ಲಿ ಈ ಬೆಳವಣಿಗೆಗಳು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವ ದಿಸೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಹಿಂದುತ್ವ-ಸರ್ವಾಧಿಕಾರಶಾಹೀ ಆಳ್ವಿಕೆಗೆ ಒಂದು ಪರಿಣಾಮಕಾರೀ ಪರ್ಯಾಯವನ್ನು ಕಟ್ಟಲು ಅದು ನೆರವಾಗಲಿದೆ.

ಅನು: ವಿಶ್ವ

ಧರ್ಮದ ಹೆಸರಲ್ಲಿ ಬಿಜೆಪಿ ಮತ್ತು ಸಂಘಪರಿವಾರ ದೇಶ ವಿಭಜಿಸುವ ಕೆಲಸ ಮಾಡುತ್ತಿದೆ-ಶೈಲಜಾ ಟೀಚರ್

ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ 23ನೇ ಸಮ್ಮೇಳನ





ಕೇಂದ್ರದಲ್ಲಿ ಹೆಸರಿಗೆ ಮಾತ್ರ ಬಿಜೆಪಿ ನೇತೃತ್ವದ ಸರಕಾರವಿದೆ. ಆದರೆ ಆಡಳಿತ ನಡೆಸುವುದು ಸಂಘ ಪರಿವಾರವಾಗಿದೆ. ಈ ಸಂಘ ಪರಿವಾರ ಮತ್ತು ಬಿಜೆಪಿ ಭಕ್ತಿಯ ಹೆಸರಲ್ಲಿ ಜನರಿಗೆ ಮೋಸಮಾಡುತ್ತಿದೆ, ಧರ್ಮದ ಹೆಸರಿನಲ್ಲಿ ದೇಶವನ್ನು ವಿಭಜಿಸುವುದು ಮೋದಿ ಮತ್ತು ಸಂಘಪರಿವಾರದ ಉದ್ದೇಶವಾಗಿದೆ ಎಂದು ಕೇರಳದ ಮಾಜಿ ಆರೋಗ್ಯ ಸಚಿವೆ, ಶಾಸಕಿ ಕೆ.ಕೆ ಶೈಲಜಾ ಟೀಚರ್ ಆರೋಪಿಸಿದ್ದಾರೆ.

ಗುರುಪುರ ಕೈಕಂಬದ ಖಾಸಗಿ ಸಭಾಗೃಹದ ಮೈದಾನದಲ್ಲಿ ನಡೆದ ಸಿಪಿಎಂ ಪಕ್ಷದ ದ.ಕ. ಜಿಲ್ಲಾ 23ನೆ ಸಮ್ಮೇಳನದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ, ಬಿಜೆಪಿ ಪಕ್ಷದ ನೀತಿಗಳು ಕಾರ್ಪೊರೇಟ್ ಪರವಾದ ನೀತಿಗಳಾಗಿವೆ. ದೇಶದಲ್ಲಿ ಧರ್ಮಗಳ ಮಧ್ಯೆ ವೈಷಮ್ಯ ತಂದು ಗೊಂದಲ ಸೃಷ್ಟಿಸುತ್ತಿದೆ ಎಂದು ಆರೋಪಿಸಿದರು.

ಈ ದೇಶದಲ್ಲಿ ಕೇವಲ ಹಿಂದೂಗಳು ಮಾತ್ರ ಇದ್ದರೆ ಸಾಕು ಎಂದು ಮೋದಿ, ಅಮಿತ್ ಶಾ, ಸಂಘಪರಿವಾರದ ಮುಖಂಡರು ಹೇಳುತ್ತಾರೆ. ಹಿಂದೂ ಹೆಸರಲ್ಲಿ ಮೇಲ್ಜಾತಿಯವರು ಅಭಿವೃದ್ಧಿ ಹೊಂದಿದರೆ, ಇತರರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಹಿಂದೆ ಗುಜರಾತ್‌ನಲ್ಲಿ ಹಿಂದೂ-ಮುಸ್ಲಿಂ ಎಂಬ ಭೇದ ಭಾವ ಇರಲಿಲ್ಲ, ಕರಸೇವೆಯ ಹೆಸರಲ್ಲಿ ಜನಾಂಗೀಯ ಹತ್ಯೆ ಮಾಡಲಾಗಿದೆ. ಬಿಜೆಪಿಯ ಒಡೆದಾಳುವ ಈ ನೀತಿಯ ವಿರುದ್ಧ ಹೋರಾಟ ತೀವ್ರಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಸಮಸ್ಯೆ ಎದುರಾಗುವ ಅಪಾಯವಿದೆ ಎಂದು ಶೈಲಜಾ ಟೀಚರ್ ಎಚ್ಚರಿಸಿದರು.

ಬಿಜೆಪಿಯು ಕೇರಳದಲ್ಲೂ ತಳವೂರಲು ಯತ್ನಿಸುತ್ತಿದೆ. ಆದರೆ ಸಿಪಿಎಂ ಹಾಗೂ ಕೇರಳದ ಜನ ಅದಕ್ಕೆ ಎಂದೂ ಅವಕಾಶ ಕೊಡುವುದಿಲ್ಲ ಎಂದರು. ಕಳೆದ 5 ವರ್ಷದಲ್ಲಿ ಕೇರಳ ಸರಕಾರ ಜನಪಯೋಗಿ ಕೆಲಸ ಮಾಡಿದೆ. ಹೃದಯಂ, ಕಾರುಣ್ಯ ಸ್ಕೀಮ್ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಮಾಡಿದೆ. ಪಿಣರಾಯಿ ವಿಜಯನ್ ನೇತೃತ್ವದ ಸರಕಾರದ ಸಾಧನೆ ಸಾಕಷ್ಟಿದೆ. ಜನರ ಆಶೋತ್ತರಗಳಿಗೆ ನಮ್ಮ ಸರಕಾರ ಕೆಲಸ ಮಾಡುತ್ತಿದೆ ಎಂದರು.

ಬಹಿರಂಗ ಸಭೆಯಲ್ಲಿ ಪಕ್ಷದ ಜಿಲ್ಲಾ ಮುಖಂಡ ವಸಂತ ಆಚಾರಿ, ಮುನೀರ್ ಕಾಟಿಪಳ್ಳ, ಸುನೀಲ್ ಕುಮಾರ್ ಬಜಾಲ್, ಕೆ.ಎಸ್.ಶ್ರೀಯಾನ್, ಯುಬಿ ಲೋಕಯ್ಯ, ಯಾದವ ಶೆಟ್ಟಿ, ಕೃಷ್ಣಪ್ಪಸಾಲ್ಯಾನ್, ಸದಾಶಿವ ದಾಸ್, ಪದ್ಮಾವತಿ ಶೆಟ್ಟಿ, ಬಾಲಕೃಷ್ಣ ಶೆಟ್ಟಿ, ವಾಸುದೇವ ಉಚ್ಚಿಲ್, ಸಂತೋಷ ಬಜಾಲ್ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಣ, ಆರೋಗ್ಯ, ಉದ್ಯೋಗದ ಹಕ್ಕಿಗಾಗಿ ಪ್ರಬಲ ಜನಚಳುವಳಿ ಕಟ್ಟಲು ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ನಿರ್ಧಾರ

ದ.ಕ. ಜಿಲ್ಲೆಯಲ್ಲಿ ಕೇಂದ್ರ ಸರಕಾರ ಭರದಿಂದ ಅನುಸರಿಸಿದ ಜಾಗತೀಕರಣ ಉದಾರೀಕರಣ ಮತ್ತು ಖಾಸಗೀಕರಣ ನೀತಿಯಿಂದ ಆತಂಕಕಾರಿ ಪ್ರಮಾಣದಲ್ಲಿ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವ ಬಗ್ಗೆ ಸಿಪಿಐ(ಎಂ) ದ.ಕ. ಜಿಲ್ಲಾ ಸಮ್ಮೇಳನವು ತೀವ್ರ ಆತಂಕ ವ್ಯಕ್ತಪಡಿಸಿದೆ. ಖಾಸಗಿ ರಂಗ, ಸಾರ್ವಜನಿಕ ರಂಗದ ಉದ್ಯೋಗಾವಕಾಶಗಳು ತೀವ್ರ ಕಡಿತಗೊಂಡಿದೆ. ಸಾವಿರಾರು ಸಂಖ್ಯೆಯಲ್ಲಿ ವಿವಿಧ ಪದವಿಗಳನ್ನು ಪಡೆದು ಹೊರ ಬರುವ ವಿದ್ಯಾರ್ಥಿ ಸಮುದಾಯದ ಎದುರು ನಿರುದ್ಯೋಗದ ಕರಿಛಾಯೆ ವ್ಯಾಪಿಸಿದ್ದು ನಿರಾಶೆ, ಸಿನಿಕತನ ಮತ್ತು ಸಮಾಜಬಾಹಿರ ಕೃತ್ಯಗಳಿಗೆ ದೂಡುತ್ತಿದೆ. ಆದುದರಿಂದ ಜಿಲ್ಲಾಡಳಿತ ಜಿಲ್ಲೆಯ ನಿರುದ್ಯೋಗ ಸಮಸ್ಯೆಯ ಬಗ್ಗೆ ಬಹುಪಕ್ಷೀಯ ಸಭೆಯೊಂದನ್ನು ಜನಪ್ರತಿನಿಧಿಗಳು, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ರಂಗದ ಪ್ರತಿನಿಧಿಗಳು ರಾಜಕೀಯ ಪಕ್ಷಗಳು ಮತ್ತು ವಿದ್ಯಾರ್ಥಿ ಯುವಜನ ಸಂಘಟನೆಗಳ ಜಂಟಿ ಸಭೆ ನಡೆಸಿ, ಉದ್ಯೋಗಾವಕಾಶಗಳ ಸೃಷ್ಟಿಯ ಬಗ್ಗೆ ವೈಜ್ಞಾನಿಕ ಕಾರ್ಯ ಯೋಜನೆಯೊಂದನ್ನು ರೂಪಿಸಬೇಕೆಂದು ಸಿಪಿಐ(ಎಂ)ನ 23ನೇ ದ.ಕ. ಸಮ್ಮೇಳನದಲ್ಲಿ ನಿರ್ಣಯವೊಂದನ್ನು ಅಂಗೀಕರಿಸಲಾಗಿದ್ದು ಮುಂಬರುವ ದಿನಗಳಲ್ಲಿ ಈ ಬಗ್ಗೆ ವ್ಯಾಪಕ ಜನಾಭಿಪ್ರಾಯ ಚಳುವಳಿ ರೂಪಿಸಬೇಕೆಂದು ಪಕ್ಷವು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಜಿಲ್ಲೆಯಲ್ಲಿ ಮಹಿಳೆಯರ ಮೇಲೆ, ಅಪ್ರಾಪ್ತ ಬಾಲಕಿಯರ ಮೇಲೆ ದೌರ್ಜನ್ಯ ಅತ್ಯಾಚಾರ ಪ್ರಕರಣಗಳು ಜಾಸ್ತಿಯಾಗಿರುವ ಬಗ್ಗೆ ತೀವ್ರ ಆತಂಕಪಡಿಸಿರುವ ಪಕ್ಷದ ಸಮ್ಮೇಳನವು ಈ

ಪುಟ 16 ನೋಡಿ



ದೇಶವನ್ನು ಮಾರಾಟಕ್ಕಿಟ್ಟಿರುವ 'ಸೇಲ್ಸ್‌ಮನ್ ಮೋದಿ': ಮೀನಾಕ್ಷಿ ಸುಂದರಂ

ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ 23ನೇ ಸಮ್ಮೇಳನ

'ಜನ ಕೊಟ್ಟ ಬಹಮತವನ್ನೇ ಬಂಡವಾಳ ಮಾಡಿಕೊಂಡಿರುವ ಬಿಜೆಪಿ, ದೇಶದ ಸಂಪತ್ತನ್ನು ಲೂಟಿಕೋರ ಬಂಡವಾಳದಾರರಿಗೆ ಧಾರೆ ಎರೆಯುತ್ತಿದೆ. ಮಾನಿಟೈಸೇಷನ್ ಎಂಬ ಪದಪುಂಜ ಬಳಸಿ ಸೇಲ್ಸ್‌ಮನ್ ಕೆಲಸ ಮಾಡುತ್ತಿದೆ' ಎಂದು ಸಿಪಿಐ(ಎಂ) ರಾಜ್ಯ ಮುಖಂಡ ಮೀನಾಕ್ಷಿ ಸುಂದರಂ ಹೇಳಿದರು.

ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲೆಯ 23ನೇ ಸಮ್ಮೇಳನದ ಅಂಗವಾಗಿ ನವೆಂಬರ್ 19 ರಂದು, ಸಾರಕ್ಕಿ ವೃತ್ತದ ಬಳಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

'ನೋಟು ಅಮಾನ್ಯೀಕರಣ, ಜಿಎಸ್ಟಿ ನಂತರ ಒಕ್ಕರಿಸಿದ ಕೊರೊನಾ, ಜನರ ಆದಾಯ ಕಸಿದಿದೆ. ಹೀಗಿದ್ದೂ ಬೆಲೆ ಏರಿಕೆಯ ಹೊರೆ ಹೊರಿಸಿ ಜನರನ್ನು ಬೀದಿಗೆ ತಳ್ಳಿದೆ. ಸೌದೆ ಒಲೆಯ ಹೊಗೆ ಕುಡಿವ ಗ್ರಾಮೀಣ ಮಹಿಳೆಯರ ಬಗ್ಗೆ ಕಣ್ಣೀರು ಸುರಿಸಿ ಉಚಿತ ಗ್ಯಾಸ್ ಕೊಡುವುದಾಗಿ ಹೇಳಿದ್ದ ಮೋದಿ, ಸಾವಿರ ರೂಪಾಯಿಗೆ ಬೆಲೆ ಏರಿಸಿ, ಇತ್ತ ಗ್ಯಾಸೂ ಇಲ್ಲ, ಅತ್ತ ಸೌದೆ ಒಲೆಯೂ ಇಲ್ಲದಂತೆ ಮಾಡಿದ್ದಾರೆ' ಎಂದರು.


ಬಿ.ಎನ್. ಮಂಜುನಾಥ್

'ದೆಹಲಿ ರೈತ ಹೋರಾಟಗಾರರನ್ನು ಖಲಿಸ್ತಾನಿ ಉಗ್ರಗಾಮಿಗಳು ಎಂದು ಮೂದಲಿಸಿದ್ದ ಮೋದಿ, ಉಪ ಚುನಾವಣೆಗಳಲ್ಲಿ ಸೋಲು ಕಾಣುತ್ತಿದ್ದಂತೆ ರೈತರ ಮೇಲೆ ಮಮತೆ ತೋರಲು ಮುಂದಾಗಿದ್ದಾರೆ. 700 ಜನ ರೈತರನ್ನು ಬಲಿ ಪಡೆದು ರೈತಪರ ಎಂದು ಬಿಂಬಿಸಿಕೊಳ್ಳುವ ಮೋದಿಯ ಕಪಟತವನ್ನು ಜನ ಅರ್ಥ ಮಾಡಿಕೊಂಡಿದ್ದಾರೆ, ಚುನಾವಣೆಗಳಲ್ಲಿನ ಅವರ ಸೋಲು ಮುಂದುವರಿಯಲಿದೆ' ಎಂದರು.

ಕೃಷಿ ಕಾಯ್ದೆಗಳು ವಾಪಾಸ್ಸಾದಂತೆ, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನೂ ಜಾರಿ ಮಾಡದಂತೆ ಕಾರ್ಮಿಕ ಚಳುವಳಿಯೂ ದೇಶವ್ಯಾಪಿ ಎದ್ದು ಬರಲಿದೆ, ಇದಕ್ಕೆ ಬೆಂಗಳೂರಿನ ಕಾರ್ಮಿಕ ವರ್ಗವೂ ಜತೆಯಾಗಿ ನಿಲ್ಲಬೇಕು. ರೈತ-ಕಾರ್ಮಿಕರ ಐಕ್ಯತೆಯು ಪರ್ಯಾಯ ನೀತಿಗಳ ಉದಯಕ್ಕೆ ನಾಂದಿ ಹಾಡಲಿದೆ' ಎಂದರು. ಈ ದಿಸೆಯಲ್ಲಿ ಸಿಪಿಐ(ಎಂ) ದುಡಿಯುವ ವರ್ಗದ ಪರವಾದ ಜನಪರ ಪರ್ಯಾಯವನ್ನು ಕೊಡುವ ದಾರಿಯಲ್ಲಿ ಹೋರಾಡುತ್ತಿದೆ ಎಂದರು.

'ಭಾರತದ ಕಮ್ಯುನಿಸ್ಟ್ ಆಂದೋಲನ – ಹೋರಾಟಗಳ ನೂರು ವರುಷಗಳು' (ಲೇಖನಗಳ

ಪುಟ 10 ನೋಡಿ





ಜನಹೋರಾಟದ ರಾಜಕೀಯ

ದಾನಿಶ್ ಸಿದ್ದಿಕಿ ಕ್ಯಾಮರಾದಲ್ಲಿ ಸೆರೆಹಿಡಿದ ಐತಿಹಾಸಿಕ ರೈತ ಹೋರಾಟ:



ಸರ್ವಾಧಿಕಾರ ಕೆಲಸ ಮಾಡದು, ಅದನ್ನು ಸೋಲಿಸಬಹುದು ಎಂದು ಭಾರತದ ಶ್ರಮಜೀವಿವರ್ಗಗಳು, ರೈತರು ಮತ್ತು ಕಾರ್ಮಿಕರು, ತಮ್ಮ ಧೀರ ಹೋರಾಟದ ಮೂಲಕ ನಿರೂಪಿಸಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದ ರೈತರ ವರ್ಷಪೂರ್ತಿ ನಡೆದ ಮತ್ತು ಐತಿಹಾಸಿಕ, ಐಕ್ಯ ಹೋರಾಟ ಗಳಿಸಿರುವ ಐತಿಹಾಸಿಕ ವಿಜಯ ಜನಹೋರಾಟದ ರಾಜಕೀಯದ ಮಹತ್ವವನ್ನು ಎತ್ತಿ ತೋರಿದೆ. ಪ್ರಸಕ್ತ ಸಂದರ್ಭದಲ್ಲಿ ಯಥಾಸ್ಥಿತಿಯನ್ನು ಛಿದ್ರಗೊಳಿಸುವ ಮತ್ತು ಬದಲಿಸುವ ಒಂದು ಪರಿವರ್ತನೆಯನ್ನು ಪ್ರಚೋದಿಸಬಲ್ಲ ಜನಹೋರಾಟದ ರಾಜಕೀಯದ ಈ ಸಾಧ್ಯತೆ ಇನ್ನಷ್ಟು ಮಹತ್ವದ್ದಾಗುತ್ತದೆ. ರೈತರು ಈ ಹೋರಾಟದಲ್ಲಿ ಮೂರು ಪಾಠಗಳನ್ನು ಕಲಿಸಿದ್ದಾರೆ. ಸರಕಾರ ಕಲಿತರೆ ದೇಶಕ್ಕೆ ಒಳ್ಳೆಯದು.



ಬೃಂದಾ ಕಾರಟ್

ಅನು: ಶ್ರೃಂ.ಶ.ನಾ.

ಸರಕಾರದ ಮೂರು ರೈತ-ವಿರೋಧಿ, ಕಾರ್ಪೊರೇಟ್-ಪರ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಬಲವಂತಪಡಿಸಿದ ರೈತ ಹೋರಾಟದ ಚಾರಿತ್ರಿಕ ವಿಜಯ ಜನಹೋರಾಟದ ರಾಜಕೀಯದ ಮಹತ್ವವನ್ನು ಎತ್ತಿ ತೋರಿದೆ. ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ನಡೆದ ಐಕ್ಯ ರೈತ ಚಳುವಳಿ ಬಿಜೆಪಿ ಮತ್ತು ಕೇಂದ್ರ ಹಾಗೂ ರಾಜ್ಯಗಳಲ್ಲಿನ ಅದರ ಸರಕಾರಗಳ ವಿರುದ್ಧ ಒಂದು ಜನಹೋರಾಟವಾಗಿ ಸಾವಯವ ಪರಿವರ್ತನೆ ಕಂಡು ಅದರ ಶಕ್ತಿಯು ಸರಕಾರ ರಕ್ಷಣಾತ್ಮಕ ನಿಲುವು ತಳೆಯುವಂತೆ ಮಾಡಿದೆ. ಹರ್‍ಯಾಣ ಮತ್ತು ಪಶ್ಚಿಮ ಉತ್ತರಪ್ರದೇಶದ ಹಳ್ಳಿಗಳಿಗೆ ಬಿಜೆಪಿ ಮುಖಂಡರ ಭೇಟಿಗಳ ವಿರುದ್ಧ ರೈತರು ನೇರವಾಗಿ ಮತ್ತು ಸ್ವಯಂಸ್ಫೂರ್ತಿಯಿಂದ ಅಣಿನೆರೆಯು ವಂತಾಗಿರುವುದಕ್ಕೂ, ಈ ರೈತರು ಸರಕಾರದ ಧೋರಣೆಗಳು ಸೃಷ್ಟಿಸಿದ ವಿವಿಧ ಕಾರಣಗಳಿಂದಾಗಿ ಸಂಕಟಪಡುತ್ತಿರುವಾಗ ಕಾರ್ಪೊರೇಟ್ ಹಿತಾಸಕ್ತಿಗಳನ್ನು ದಾರ್ಷ್ಟ್ಯದಿಂದ, ಆಕ್ರಾಮಕ ರೀತಿಯಲ್ಲಿ ಉತ್ತೇಜಿಸುತ್ತಿರುವ ಅವರ ನಿಜಜೀವನದ ಅನುಭವಗಳಿಗೂ ಸಂಬಂಧವಿದೆ. ಲಖಿಂಪುರ್ ಖೇರಿ ಅತ್ಯಾಚಾರ ಈ ಎರಡೂ- ಒಂದೆಡೆಯಲ್ಲಿ ರೈತ ಅಣಿನೆರಿಕೆ, ಇನ್ನೊಂದೆಡೆಯಲ್ಲಿ ಇದಕ್ಕೆ ಬಿಜೆಪಿಯ ಕ್ರೂರ ಸ್ಪಂದನೆ-ವಾಸ್ತವತೆಗಳ ಸಂಕೇತವಾಗಿ ಬಿಟ್ಟಿದೆ.

ರಾಜಕೀಯ ಮತ್ತು ವರ್ಗ ಬಲಾಬಲ ಕಾರ್ಪೊರೇಟ್‌ಗಳ ಹಿತಾಸಕ್ತಿಗಳ ಪರವಾಗಿರುವ ಮತ್ತು ನವ-ಉದಾರವಾದಿ ನೀತಿ ಚೌಕಟ್ಟುಗಳನ್ನು ಮುಂದೊತ್ತುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಯಥಾಸ್ಥಿತಿಯನ್ನು ಛಿದ್ರಗೊಳಿಸುವ ಮತ್ತು ಬದಲಿಸುವ ಒಂದು ಪರಿವರ್ತನೆಯನ್ನು ಪ್ರಚೋದಿಸಬಲ್ಲ ಜನಹೋರಾಟದ ರಾಜಕೀಯದ ಈ ಸಾಧ್ಯತೆ ಇನ್ನಷ್ಟು ಮಹತ್ವದ್ದಾಗುತ್ತದೆ. ಎಡಶಕ್ತಿಗಳು, ನಿರ್ದಿಷ್ಟವಾಗಿ ಸಿಪಿಐ(ಎಂ), ಕೃಷಿರಂಗದಲ್ಲಿನ ಸಂಕಟಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಎದುರಿಸುವಲ್ಲಿ ಒಂದು ಪರ್ಯಾಯ ಕಣ್ಣೋಟವನ್ನು ನಿರಂತರವಾಗಿ ಪ್ರತಿಪಾದಿಸಿಕೊಂಡು ಬಂದಿವೆ ಮತ್ತು ಸಾಮೂಹಿಕ ಕಾರ್ಯಾಚರಣೆಗಳನ್ನೂ ನಡೆಸಿವೆ. ಇತರ ಪ್ರತಿಪಕ್ಷಗಳೂ, ಅವುಗಳ ಈ ಮೊದಲಿನ ನಿಲುವುಗಳು ಏನೇ ಇದ್ದರೂ, ಅವನ್ನು ಬದಿಗಿಟ್ಟು ರೈತರ ಹೋರಾಟವನ್ನು ಮತ್ತು ಆಗ್ರಹಗಳನ್ನು ಬೆಂಬಲಿಸಲೇ ಬೇಕಾಗಿ ಬಂದಿದೆ. ಇದು ಕೂಡ ಜನಪರ ಕಾರ್ಯಸೂಚಿಗಳನ್ನು ಮುಂದೊತ್ತುವಲ್ಲಿ ಜನಹೋರಾಟದ ರಾಜಕೀಯದ ಸಾಧ್ಯತೆಗಳನ್ನು ತೋರಿಸುತ್ತದೆ.

ರೈತರ ವರ್ಗನೆಲೆಗಳಲ್ಲಿ ಭಿನ್ನತೆಗಳಿಲ್ಲವೆಂದೇನಲ್ಲ ಎಂಬುದೂ ನಿಜವೇ. ಎಐಕೆಎಸ್ ನಂತಹ ಸಂಘಟನೆಗಳಿಂದಾಗಿ ಬಡ ರೈತವಿಭಾಗಗಳು ಈ ಚಳುವಳಿಯಲ್ಲಿ ಪ್ರಜ್ಞಾಪೂರ್ವಕವಾಗಿ ತೊಡಗಿಸಿಕೊಂಡದ್ದು , ಜತೆಗೆ ಕಾರ್ಮಿಕ ಸಂಘಗಳು ಮತ್ತು ಕೃಷಿಕೂಲಿಕಾರ ಸಂಘಟನೆಗಳ ಸೌಹಾರ್ದವು ಈ ಚಳುವಳಿ, ಮೋದಿ ಸರಕಾರ ಪ್ರಚಾರ ಮಾಡಿದಂತೆ ರೈತಾಪಿಗಳ ಶ್ರೀಮಂತ ವಿಭಾಗಗಳ ಚಳುವಳಿಯಷ್ಟೇ ಆಗಿ ಬೆಳೆಯದಂತೆ ತಡೆದವು. ಬಡ ರೈತಾಪಿಗಳ ಬಹುದೊಡ್ಡ ವಿಭಾಗಗಳ ಬಳಿ ದೊಡ್ಡ ಮಟ್ಟದಲ್ಲಿ ಮಾರಾಟ ಮಾಡುವಷ್ಟು ಹೆಚ್ಚುವರಿ ಉತ್ಪನ್ನಗಳೇನೂ ಇರುವುದಿಲ್ಲವಾದ್ದರಿಂದ ಕನಿಷ್ಟ ಬೆಂಬಲ ಬೆಲೆ ಮತ್ತು ಸರಕಾರೀ ಖರೀದಿಯ ಪ್ರಯೋಜನಗಳಿಂದ ಅವರು ದೂರವೇ ಉಳಿಯುತ್ತಾರೆ ಎಂಬುದು ಗೊತ್ತಿರುವ ವಿಷಯವೇ. ಬಡ ರೈತವಿಭಾಗಗಳಿಗೆ ಕಾರ್ಪೊರೇಟ್‌ಗಳು ಉತ್ತಮ ಬೆಲೆಗಳನ್ನು ಒದಗಿಸುತ್ತವೆ ಎಂಬ ಅಸಂಬದ್ಧ ವಿಚಾರವನ್ನು ತುರುಕಲು ಮೋದಿ ಸರಕಾರ ಪ್ರಯತ್ನಿಸಿತು. ಆದರೆ ರೈತರನ್ನು ವಿಭಜಿಸುವ ಈ ಪ್ರಯತ್ನಕ್ಕೆ ಭಾರೀ ಸೋಲಾಯಿತು. ನಿಸ್ಸಂದೇಹವಾಗಿಯೂ ಎಸ್‌ಕೆಎಂ ಪ್ರಕಟಿಸಿರುವ ಹೋರಾಟದ ಹೊಸ ಘಟ್ಟ ಈ ಬಹುದೊಡ್ಡ ವಿಭಾಗದ ಕಾಳಜಿಗಳನ್ನು ಸಮಗ್ರವಾಗಿ ಒಳಗೊಂಡಿದೆ. ಅದು ರೂಪಿಸಿರುವ ಕಾರ್ಯಾಚರಣೆಯಲ್ಲಿ ಕನಿಷ್ಟ ಬೆಂಬಲ ಬೆಲೆ ಎಲ್ಲ ರೈತರಿಗೆ ಮತ್ತು ಬಹಳಷ್ಟು ಬೆಳೆಗಳಿಗೆ ಒಂದು ಸಾರ್ವತ್ರಿಕ ಹಕ್ಕು ಆಗಬೇಕೆಂಬ ಆಗ್ರಹವೂ ಸೇರಿದೆ.

ಇದರ ಸಾಮಾಜಿಕ ಆಯಾಮವೂ ಬಹಳ ಮುಖ್ಯ, ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ. ಮಹಿಳೆಯರನ್ನೂ ರೈತರಾಗಿ ಗುರುತಿಸಬೇಕು ಎಂಬ ಮಹಿಳಾ ಹೋರಾಟಗಳಿಗೆ ಈ ಚಳುವಳಿ ದೊಡ್ಡ ಉತ್ತೇಜನೆಯನ್ನು ನೀಡಿದೆ. ಜನಹೋರಾಟದ ರಾಜಕೀಯದ ಮಣ್ಣಲ್ಲಿ ಚಿಗುರಿದ ಈ ಹಸಿ ಗೆಲ್ಲುಗಳು ಖಾಪ್ ಪಂಚಾಯತುಗಳಂತಹ, ಇದುವರೆಗೆ ಮಹಿಳೆಯರ ಅಳವಿನ ಹೊರಗಿದ್ದ ಕಡೆಗಳಲ್ಲೂ, ಪ್ರದೇಶಗಳಲ್ಲೂ ಒಂದು ಸ್ಥಾನವನ್ನು ಪಡೆಯುವಂತಾಗಿದೆ. ಆದರೆ ಅವಿನ್ನೂ ಹಸಿ ಗೆಲ್ಲುಗಳಷ್ಟೇ. ನಿಜವಾಗಿ ಬೇರು ಬಿಡಲು ಒಂದು ಅನುಕೂಲ ಪರಿಸರದ ಅಗತ್ಯ ಅವಕ್ಕಿದೆ. ಇದು ಕೂಡ ಜನಹೋರಾಟದ ರಾಜಕೀಯ ಗಟ್ಟಿಗೊಂಡಾಗಲೇ ಬರಲು ಸಾಧ್ಯ

ಸೋಲಿನಲ್ಲೂ ಪ್ರಧಾನ ಮಂತ್ರಿಗಳು ಅಟಾಟೋಪವನ್ನೇ ಪ್ರದರ್ಶಿಸಿದರು.

ಹೋರಾಟದಲ್ಲಿ ಹುತಾತ್ಮರಾದ 700 ರೈತರ ಬಗ್ಗೆ ಒಂದೂ ವಿಷಾದದ ಮಾತಿಲ್ಲ. ರೈತರ ಮೇಲಿನ ಎಲ್ಲ ಸುಳ್ಳು ಪ್ರಕರಣಗಳನ್ನು ಹಿಂಪಡೆಯುವ ಭರವಸೆ ನೀಡಲಿಲ್ಲ. ಈ ಒಂದು ವರ್ಷದ ಅವಧಿಯಲ್ಲಿ ರೈತರ ವಿರುದ್ಧ ನಿಷ್ಠುರ ಮಾತುಗಳನ್ನಾಡಿದ್ದಕ್ಕೆ ಕ್ಷಮೆಯಾಚಿಸಲಿಲ್ಲ. ಅವರ ಪಕ್ಷದ ನಾಯಕರು ರೈತರನ್ನು ಭಯೋತ್ಪಾದಕರು, ದೇಶದ್ರೋಹಿಗಳು, ಗೂಂಡಾಗಳು, ಛಿದ್ರಕಾರಿಗಳು, ಸುಳ್ಳುಗಾರರು ಮತ್ತು ಮೋಸಗಾರರು ಎಂದು ನಿಂದಿಸಿದ್ದರು. ಇವರಲ್ಲಿ ಇನ್ನೂ ಕೇಂದ್ರ ಸಂಪುಟದಲ್ಲಿರುವ 'ಒಬ್ಬರು ಲಖೀಂಪುರ ಖೇರಿಯಲ್ಲಿ ನಡೆದ ಭೀಕರ ಘಟನೆಗಳಲ್ಲಿ ಶಾಮೀಲಾಗಿರುವವರು. ಮೋದಿ-ಜಿ ಮೌನವೇ ಈ ವಿಷಯದಲ್ಲಿ ಕರ್ಣಕರ್ಕಶವಾಗಿತ್ತು.



'ಕೆಲವು' ರೈತರ ಮನವೊಲಿಸುವಲ್ಲಿ ವಿಫಲರಾಗಿದ್ದಕ್ಕೆ ವಿಷಾದಿಸುತ್ತೇನೆ ಎಂದು ಕಾನೂನನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಪ್ರಧಾನಿಯವರು ಒಂದು ಸ್ವಯಂ ಗೋಲು ಹೊಡೆದುಕೊಂಡರು. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: ಕಾನೂನುಗಳು ಉತ್ತಮವಾಗಿದ್ದರೆ, ರೈತರಲ್ಲಿ "ಕೆಲವರು" ಮಾತ್ರ ಅದನ್ನು ವಿರೋಧಿಸಿದರೆ, ಕಾನೂನುಗಳನ್ನು ಏಕೆ ಹಿಂತೆಗೆದುಕೊಳ್ಳಬೇಕು? ಇದಕ್ಕೆ ಕಾರಣವನ್ನು ಅರಿತುಕೊಳ್ಳಲು ರಾಜಕೀಯ ವಿಜ್ಞಾನಿಗಳ ಅಗತ್ಯವಿಲ್ಲ – ಮುಂಬರುವ ಚುನಾವಣೆಗಳಲ್ಲಿ, ವಿಶೇಷವಾಗಿ ಹೋರಾಟದ ಕೇಂದ್ರಬಿಂದುಗಳಾಗಿರುವ ಉತ್ತರ ಪ್ರದೇಶ ಮತ್ತು ಪಂಜಾಬ್‌ನಲ್ಲಿ, ರೈತರ ಮುಂದುವರೆದ ಹೋರಾಟದಿಂದಾಗಿ ಆಗಬಹುದಾದ ದೊಡ್ಡ ರಾಜಕೀಯ ಪರಿಣಾಮ ಈ ನಿರ್ಧಾರದ ಹಿಂದಿದೆ.

ಕಾನೂನುಗಳನ್ನು ಹಿಂತೆಗೆದುಕೊಳ್ಳುವ ಸಂದರ್ಭದಲ್ಲಿಯೂ ಈ ಕಾನೂನಗಳ ಬಗ್ಗೆ ಪ್ರಧಾನಿಯವರ ಸಮರ್ಥನೆಯಲ್ಲಿದ್ದ ಒಂದು ಸಂದೇಶವು ರೈತರಿಗೆ ಜೋರಾಗಿ ಮತ್ತು ಸ್ಪಷ್ಟವಾಗಿ

ಪುಟ 10 ನೋಡಿ

ಮೋದೀಜೀ! ಮೋದೀಜೀ!



ಛೇ! ಬಹುಶಃ ನನ್ನ ತಪಸ್ಸಿನಲ್ಲೇ ಏನೋ ಕೊರತೆ ಇದ್ದಿರಬಹುದು!

ಕೃಪೆ: ಸತೀಶ ಆಚಾರ್ಯ, ಫೇಸ್‌ಬುಕ್

ಐತಿಹಾಸಿಕ ರೈತರ ಹೋರಾಟದ ಒಂದು ವರ್ಷ

ಕೇಂದ್ರ ಸರ್ಕಾರದ ವಿವಾದಾಸ್ಪದ ರೈತರ ಉತ್ಪಾದನೆ ವ್ಯಾಪಾರ ಮತ್ತು ವಾಣಿಜ್ಯ (ಪ್ರಚಾರ ಮತ್ತು ಸೌಲಭ್ಯ) ಕಾಯ್ದೆ, ಬೆಲೆ ಭರವಸೆ ಮತ್ತು ಕೃಷಿ ಸೇವೆಗಳ ಕಾಯ್ದೆ (ಸಬಲೀಕರಣ ಮತ್ತು ಸಂರಕ್ಷಣೆ) ಒಪ್ಪಂದ ಹಾಗೂ ಅಗತ್ಯ ಸರಕುಗಳ (ತಿದ್ದುಪಡಿ) ಕಾಯ್ದೆಗಳನ್ನು 2020ರ ಸಪ್ಟೆಂಬರ್ 17ರಂದು ಜಾರಿಗೊಳಿಸಲಾಯಿತು. ಈ ಕಾಯ್ದೆಗಳೇ ರೈತರ ವಿರೋಧಕ್ಕೆ ಮೂಲ ಕಾರಣವಾಗಿದ್ದವು.

ವರ್ಷದಿಂದ ದೇಶದಲ್ಲಿ ಮುಖ್ಯ ಚರ್ಚಾವಿಷಯವಾಗಿರುವ ಕೃಷಿ ಕಾನೂನುಗಳ ಜಾರಿ, ರೈತ ಹೋರಾಟ ಮತ್ತು ವಾಪಸ್ ಗಳ ಒಂದು ನೋಟ ಇಲ್ಲಿದೆ.



ಸಂಗ್ರಹ: ಗುರುರಾಜ ದೇಸಾಯಿ

2020ರ ಜೂನ್: ಮೂರು ಕೃಷಿ ಕಾಯ್ದೆಗಳಿಗೆ ಸುಗ್ರೀವಾಜ್ಞೆ

ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆಯ ಹೊರಗೂ ಮಾರಾಟ ಮಾಡಲು ಅವಕಾಶ ನೀಡುವ, ಕೃಷಿಯಲ್ಲಿ ಕಾರ್ಪೊರೇಟ್ ಕಂಪನಿಗಳ ಹೂಡಿಕೆಗೂ ಅವಕಾಶ ನೀಡುವ ನೂತನ ಕೃಷಿ ನೀತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು 2020ರ ಜೂನ್‌ನಲ್ಲಿ ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿತು.

2020ರ ಸೆಪ್ಟೆಂಬರ್: ಸುಗ್ರೀವಾಜ್ಞೆಗಳಿಗೆ ಸಂಸತ್ತಿನ ಅನುಮೋದನೆ

* ಸೆಪ್ಟೆಂಬರ್ 17: ಲೋಕಸಭೆಯಲ್ಲಿ ಅನುಮೋದನೆ
* ಸೆಪ್ಟೆಂಬರ್ 20: ಧ್ವನಿ ಮತದ ಮೂಲಕ ಪ್ರತಿಪಕ್ಷಗಳ ಆಕ್ಷೇಪಗಳ ನಡುವೆಯೇ ರಾಜ್ಯಸಭೆಯಲ್ಲಿ ಅನುಮೋದನೆ
*ಸೆಪ್ಟೆಂಬರ್ 24: ಪಂಜಾಬ್‌ನ ರೈತರಿಂದ ಮೂರು ದಿನಗಳ ರೈಲು ತಡೆ ಘೋಷಣೆ
* ಸೆಪ್ಟೆಂಬರ್ 24: ಅಖಿಲ ಭಾರತೀಯ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯಿಂದ ಪ್ರತಿಭಟನೆಗೆ ಕರೆ, ದೇಶದಾದ್ಯಂತ ರೈತರ ಪ್ರತಿಭಟನೆ
* ಸೆಪ್ಟೆಂಬರ್ 27ರಂದು ಕೃಷಿ ಕಾಯ್ದೆಗಳಿಗೆ ರಾಷ್ಟ್ರಪತಿಗಳ ಅಂಕಿತ
* ನವೆಂಬರ್ 25 : ಪಂಜಾಬ್, ಹರಿಯಾಣ ರೈತರಿಂದ ದೆಹಲಿ ಚಲೋ ಪ್ರತಿಭಟನಾ ಮೆರವಣಿಗೆ ಆರಂಭ

ನವಂಬರ್26, 2020:ಸಾರ್ವತ್ರಿಕ ಮುಷ್ಕರಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆ

ಕಾರ್ಮಿಕರೊಂದಿಗೆ ಸೌಹಾರ್ದ ವ್ಯಕ್ತಪಡಿಸಲು 'ಗ್ರಾಮೀಣ ಭಾರತ ಹರತಾಳ' ಮತ್ತು ಸುತ್ತಲಿನ ರಾಜ್ಯಗಳಿಂದ 'ದಿಲ್ಲಿ ಚಲೋ'ಗೆ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ) ಕರೆ

ರೈತರ ದಿಲ್ಲಿ ಚಲೋವನ್ನು ಮುರಿಯಲು ದಿಲ್ಲಿ ಪೋಲೀಸ್ ಮೂಲಕ ಅಮಾನುಷ ದಮನ.

ದೆಹಲಿ ಗಡಿ ಬಂದ್ ಮಾಡಿದರು. ಹೆದ್ದಾರಿಗಳಿಗೆ ಅಡ್ಡಲಾಗಿ ಪೊಲೀಸರು ಕಂದಕ ತೋಡಿದರು, ಮುಳ್ಳುಬೇಲಿ ಹಾಕಿದರು, ಕಾಂಕ್ರೀಟ್ ಗೋಡೆ ನಿರ್ಮಿಸಿದರು, ಮೊಳೆಯ ಬೇಲಿ ನೆಟ್ಟರು. ಆದರೆ ದೆಹಲಿ ಗಡಿಯಲ್ಲಿ ಬೀಡುಬಿಟ್ಟ ರೈತರು ತಮ್ಮ ಹೋರಾಟವನ್ನು ಮತ್ತಷ್ಟು ಹುರಿಗೊಳಿಸಿದರು. 500ಕ್ಕೂ ಹೆಚ್ಚು ರೈತ ಸಂಘಟನೆಗಳು ಒಟ್ಟುಗೂಡಿ 'ಸಂಯುಕ್ತ ಕಿಸಾನ್ ಮೋರ್ಚಾ' ರಚನೆ

* ನವೆಂಬರ್ 28:ಮಾತುಕತೆಗೆ ಆಹ್ವಾನ

ಪ್ರತಿಭಟನೆ ನಿಲ್ಲಿಸಿ ಮಾತುಕತೆಗೆ ಬನ್ನಿ ಎಂದ ಗೃಹ ಸಚಿವ ಅಮಿತ್ ಶಾ. ಆಹ್ವಾನ ತಿರಸ್ಕರಿಸಿ, ಜಂತರ್ ಮಂತರ್‌ನಲ್ಲಿ ಹೋರಾಟ ನಡೆಸಲು ಬೇಡಿಕೆ ಇಟ್ಟ ರೈತರು

* ಡಿಸೆಂಬರ್ 3: ರೈತ ಪ್ರತಿನಿಧಿಗಳೊಂದಿಗೆ ಕೇಂದ್ರ ಸರ್ಕಾರದ ಮೊದಲ ಸುತ್ತಿನ ಮಾತುಕತೆ .. ಆದರೆ, ಸಭೆಯಲ್ಲಿ ಯಾವುದೇ ತೀರ್ಮಾನ ಕೈಗೊಳ್ಳಲಾಗಲಿಲ್ಲ.
* ಡಿಸೆಂಬರ್ 5: ಎರಡನೇ ಸುತ್ತಿನ ಮಾತುಕತೆ.
* **ಡಿಸೆಂಬರ್ 8: ಭಾರತ್ ಬಂದ್‌ಗೆ ಕರೆ**
* ಡಿಸೆಂಬರ್ 9: ಮೂರು ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತರಲು ಸಿದ್ಧ ಎಂದು ಮೋದಿ ಸರ್ಕಾರ ಹೇಳಿದಾಗ, ಕಾಯ್ದೆಗಳನ್ನು ಹಿಂಪಡೆಯಲು ಆಗ್ರಹ
* ಡಿಸೆಂಬರ್ 21: ಒಂದು ದಿನದ ಉಪವಾಸ ಸತ್ಯಾಗ್ರಹ

ಡಿಸೆಂಬರ್ 21 ರಂದು ಮಹಾರಾಷ್ಟ್ರದಿಂದ 3000 ಕ್ಕೂ ಹೆಚ್ಚು ರೈತರು ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ ದೆಹಲಿಯುವರೆಗೆ 1300ಕಿ.ಮೀ. ಪಾದಯಾತ್ರೆ

* 2021ರ ಜನವರಿ 4: ಕೇಂದ್ರ ಸರ್ಕಾರ ಮತ್ತು ರೈತರ ನಡುವೆ ಏಳನೇ ಸುತ್ತಿನ ಮಾತುಕತೆ.
* ಜನವರಿ 12: ಕೃಷಿ ಕಾಯ್ದೆಗಳ ಅನುಷ್ಠಾನಕ್ಕೆ ತಡೆ ನೀಡಿದ ಸುಪ್ರೀಂ ಕೋರ್ಟ್, ನಾಲ್ವರು ಸದಸ್ಯರ ಸಮಿತಿ ರೂಪಿಸಿತು.

2021ರ ಜನವರಿ 26: ಗಣರಾಜ್ಯೋತ್ಸವ ದಿನದಂದು ದೆಹಲಿಗೆ ರೈತರ ಟ್ರ್ಯಾಕ್ಟರ್ ಮೆರವಣಿಗೆಲಕ್ಷಾಂತರ ರೈತರು ಈ ಪರೇಡ್ ವೇಳಖೆ ರೈತ ಹೋರಾಟಕ್ಕೆ ಅಪಕೀರ್ತಿ ತರುವ ಪ್ರಯತ್ನ.

* 2ಜನವರಿ 28: ಪ್ರತಿಭಟನಾ ಸ್ಥಳವನ್ನು ರಾತ್ರಿಯೊಳಗೆ ತೆರವುಗೊಳಿಸುವಂತೆ ಉತ್ತರ ಪ್ರದೇಶದ ಗಾಜಿಯಾಬಾದ್ ಆಡಳಿತದ ಆದೇಶ. ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಮೂಲಕ ಪ್ರತಿಭಟನಾಕಾರರಿಂದ'ಹೋರಾಟದಿಂದ ಹಿಂದೆ ಸರಿಯುವುದಿಲ್ಲ' ಎಂಬ ಸಂದೇಶ .
* ಫೆಬ್ರುವರಿ 5: ಪರಿಸರ ಹೋರಾಟಗಾರ್ತಿ ಗ್ರೆಟಾ ಥನ್‌ಬರ್ಗ್ ಹಂಚಿಕೊಂಡಿದ್ದ ರೈತರ ಹೋರಾಟದ ಕುರಿತ 'ಟೂಲ್‌ಕಿಟ್' ಅನ್ನು ರೂಪಿಸಿದವರೆಂಬವರ ಮೇಲೆ ದೆಹಲಿ ಪೊಲೀಸ್ ಇಲಾಖೆಯ ಸೈಬರ್ ಕ್ರೈಂ ವಿಭಾಗದಿಂದ ಎಫ್‌ಐಆರ್ . ರಾಷ್ಟ್ರವಿರೋಧಿ, ಅಪರಾಧ ಸಂಚು ಹಾಗೂ ದ್ವೇಷ ಭಾವನೆ ಹಂಚುತ್ತಿರುವ ಆರೋಪಗಳನ್ನು ದಾಖಲಿಸಲಾಯಿತು.
* ಫೆಬ್ರುವರಿ 6: ದೇಶದಾದ್ಯಂತ ಮಧ್ಯಾಹ್ನ 12ರಿಂದ 3ರವರೆಗೆ ರಸ್ತೆ ತಡೆ ಪ್ರತಿಭಟನೆ.
* ಫೆಬ್ರುವರಿ 14: ಟೂಲ್‌ಕಿಟ್ ತಿದ್ದಿರುವ ಸಂಬಂಧ ಹವಾಮಾನ ಬದಲಾವಣೆ ಜಾಗೃತಿ ಅಭಿಯಾನ ನಡೆಸುತ್ತಿದ್ದ ದಿಶಾ ರವಿ (21) ಬಂಧನ–ಫೆಬ್ರುವರಿ 23ರಂದು ಕೊನೆಗೂ ಜಾಮೀನು ಸಿಕ್ಕಿತು.
* ಫೆಬ್ರುವರಿ 18: ದೇಶದಾದ್ಯಂತ ರೈಲು ತಡೆಗೆ ಸಂಯುಕ್ತ ಕಿಸಾನ್ ಮೋರ್ಚಾ ಕರೆ.
* ಮಾರ್ಚ್ 6: ದೆಹಲಿ ಗಡಿಯಲ್ಲಿ 100 ದಿನಗಳನ್ನು ಪೂರೈಸಿದ ರೈತರ ಪ್ರತಿಭಟನೆ.
* **ಮೇ 27: ಆರು ತಿಂಗಳು ಪೂರೈಸಿದ ರೈತರ ಪ್ರತಿಭಟನೆ; ಕರಾಳ ದಿನವಾಗಿ ಆಚರಣೆ.**
* **ಜೂನ್ 5: ಕೃಷಿ ಕಾಯ್ದೆಗಳನ್ನು ಕೇಂದ್ರ ಜಾರಿಗೆ ತಂದು ಒಂದು ವರ್ಷ; ಸಂಪೂರ್ಣ ಕ್ರಾಂತಿ ದಿವಸವಾಗಿ ಆಚರಣೆ**
* ಜೂನ್ 26: ರೈತರ ಪ್ರತಿಭಟನೆಗೆ 7 ತಿಂಗಳು; ದೆಹಲಿಯತ್ತ ಹೊರಟ ಪ್ರತಿಭಟನಾಕಾರರು.
* **ಜುಲೈ: ದೆಹಲಿಯ ಸಂಸತ್ ಭವನದ ಸಮೀಪ ಕೃಷಿ ಕಾಯ್ದೆಗಳನ್ನು ವಿರೋಧಿಸಿ 'ಕಿಸಾನ್ ಸಂಸತ್'**
* ಆಗಸ್ಟ್ 7: ಜಂತರ್ ಮಂತರ್‌ನ ಕಿಸಾನ್ ಸಂಸತ್ತಿಗೆ ಹದಿನಾಲ್ಕು ವಿರೋಧ ಪಕ್ಷಗಳ ಮುಖಂಡರು ಭೇಟಿ.
* ಆಗಸ್ಟ್ 28: ಹರಿಯಾಣದ ಕರ್ನಾಲ್‌ನಲ್ಲಿ ಪ್ರತಿಭಟನಾ ನಿರತ ರೈತರು ಮತ್ತು ಪೊಲೀಸರ ಮಧ್ಯೆ ಘರ್ಷಣೆ, ಲಾಠಿ ಚಾರ್ಜ್ ಮಾಡಿದ ಪೊಲೀಸರು. ರೈತರ ಬುರುಡೆ ಹೊಡೆಯುವಂತೆ ಸೂಚನೆ ನೀಡಿದ ಐಎಎಸ್ ಅಧಿಕಾರಿ ಆಯುಷ್ ಸಿನ್ಹಾರನ್ನು ಹುದ್ದೆಯಿಂದ ಅಮಾನತುಗೊಳಿಸಲು ಆಗ್ರಹಿಸಿ ಪ್ರತಿಭಟನೆ.
* **ಸಪ್ಟಂಬರ್5, ಉತ್ತರಪ್ರದೇಶದ ಮುಝಫ್ಫರ್‌ನಗರದಲ್ಲಿ 10 ಲಕ್ಷ ಮಂದಿ ಭಾಗವಹಿಸಿದ್ದ ಕಿಸಾನ್–ಮಜ್ದೂರ್ ಮಹಾಪಂಚಾಯತ್.**
* **ಸಪ್ಟಂಬರ್ 27ರ ಭಾರತ ಬಂದ್.**
* **ಅಕ್ಟೋಬರ್ 3: ಲಖಿಂಪುರ್ ಖೇರಿ ಹತ್ಯಾಕಾಂಡ**

ರೈತರ ಪ್ರತಿಭಟನೆಯಿಂದ ಜನರ ಸಂಚಾರಕ್ಕೆ ಉಂಟಾಗಿರುವ ಅಡಚಣೆಯ ಬಗ್ಗೆ ಪ್ರಸ್ತಾಪಿಸಿದ ಸುಪ್ರೀಂ ಕೋರ್ಟ್. ಗಾಜಿಪುರ ಮತ್ತು ಟಿಕ್ರಿ ಗಡಿಯಲ್ಲಿ ಬ್ಯಾರಿಕೇಡ್‌ಗಳನ್ನು ತೆಗೆಯಲು ಮುಂದಾದ ದೆಹಲಿ ಪೊಲೀಸರು. ಪ್ರತಿಭಟನೆ ಮುಂದುವರಿಸಿದ ರೈತರು.

* 2021ರ ನವೆಂಬರ್ 19: ಮೂರೂ ಕೃಷಿ ಕಾಯ್ದೆಗಳನ್ನು ಹಿಂಪಡೆಯಲು ನಿರ್ಧರಿಸಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಣೆ.

ಜನಹೋರಾಟದ ರಾಜಕೀಯ



ಪುಟ 9 ರಿಂದ

ಕೇಳಿಸಿತು. ಅದೆಂದರೆ, ಅವಕಾಶವನ್ನು ನೀಡಿದರೆ, ಅದರಲ್ಲೂ ರಾಜ್ಯ ಚುನಾವಣೆಗಳಲ್ಲಿ ಗೆದ್ದರೆ ಸರ್ಕಾರವು ಮತ್ತೆ ಈ ಕಾನೂನುಗಳನ್ನು ತರುತ್ತದೆ ಎಂಬುದು.

ಉತ್ತರಪ್ರದೇಶದಲ್ಲಿ ಅಧಿಕಾರ ಪಡೆಯುವಲ್ಲಿ ಬಿಜೆಪಿ ವಿರುದ್ಧ ಪ್ರಮುಖ ಸ್ಪರ್ಧಿಯಾಗಿರುವ ಸಮಾಜವಾದಿ ಪಕ್ಷವು "ಸಾಫ್ ನಹೀ ಹೈ ಇನ್ಕಾ ದಿಲ್, ಚುನಾವ್ ಬಾದ್ ಫಿರ್ ಲಾಯೇಂಗೆ ಬಿಲ್" (ಇವರ ಮನಸ್ಸು ಸ್ವಚ್ಛವಾಗಿಲ್ಲ, ಚುನಾವಣೆ ನಂತರ ಮತ್ತೆ ಮಸೂದೆ ತರುತ್ತಾರೆ) ಎಂಬ ಘೋಷಣೆಯನ್ನು ಈಗಾಗಲೇ ನೀಡಿದೆ.

ಕಟು ಆಶ್ಚರ್ಯ ಕಾದಿದೆ

ಸಂಯುಕ್ತ ಕಿಸಾನ್ ಮೋರ್ಚಾದ ಹೇಳಿಕೆಯು ತಾವು ಎತ್ತುತ್ತಿರುವ ಪ್ರಮುಖ ವಿಷಯವಾದ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ನೀಡುವ ವರೆಗೆ ತಮ್ಮ ಹೋರಾಟವನ್ನು ಹಿಂಪಡೆಯುವುದಿಲ್ಲ ಎಂದು ಸೂಚಿಸುತ್ತದೆ. ಪ್ರಧಾನಿ ಘೋಷಣೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ ಹಲವು ರೈತ ನಾಯಕರು ಇತರ ವಿಷಯಗಳನ್ನೂ ಎತ್ತಿದ್ದಾರೆ. ಸರ್ಕಾರದ ಬಗ್ಗೆ ಬಹಳಷ್ಟು ಅಪನಂಬಿಕೆಯಿದೆ. ಹಾಗಾಗಿ ಈ ಕ್ರಮದಿಂದ ರೈತ ಅಜೆಂಡಾವನ್ನು ಚುನಾವಣಾ ಸಮರದಿಂದ ತೆಗೆದುಹಾಕಬಹುದು ಎಂದು ಬಿಜೆಪಿ ಭಾವಿಸಿದ್ದರೆ, ಅದಕ್ಕೆ ಒಂದು ಕಟುವಾದ ಆಶ್ಚರ್ಯ ಕಾದಿದೆ.

ಬಿಜೆಪಿ ನಡೆಗೆ ಇನ್ನೊಂದು ಸಿನಿಕ ಕಾರಣವಿದೆ. ಉತ್ತರ ಪ್ರದೇಶದಲ್ಲಿ, ವಿಶೇಷವಾಗಿ ಪಶ್ಚಿಮ ಉತ್ತರ ಪ್ರದೇಶದಲ್ಲಿ, ಕಳೆದ ವಿಧಾನಸಭಾ ಚುನಾವಣೆಗಳಿಗೆ ಸ್ವಲ್ಪ ಮೊದಲು ನಡೆದ ಕೋಮು ಗಲಭೆಗಳು ಬಿಜೆಪಿಗೆ ಪುಷ್ಕಳ ಚುನಾವಣಾ ಲಾಭ ನೀಡಿದವು. ಈ ಬಾರಿಯ ಚುನಾವಣೆಗೆ ಕ್ಷಣಗಣನೆ ಆರಂಭವಾದಾಗಿನಿಂದ, ಬಿಜೆಪಿಯು ವಿಷಕಾರಿ ಕೋಮು ಘೋಷಣೆಗಳ ಬತ್ತಳಿಕೆಯಲ್ಲಿರುವ ಎಲ್ಲ ಅಸ್ತ್ರಗಳನ್ನು ಬಳಸಿಕೊಂಡು ಕೋಮು ಅಸಾಮರಸ್ಯವನ್ನು ಸೃಷ್ಟಿಸುವ ಮಿಷನ್ ಮೋಡ್‌ನಲ್ಲಿದೆ–ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಕೊಂಡು "ಲವ್ ಜಿಹಾದ್" ಎಂದು ಕರೆಯಲ್ಪಡುವ ಅಪಪ್ರಚಾರಗಳು, ಹಿಂಸಾತ್ಮಕ ಗೋಹತ್ಯೆ ವಿರೋಧಿ ಅಭಿಯಾನಗಳು ಮತ್ತು ಮನಬಂದಂತೆ ಯುವ ಮುಸ್ಲಿಮರನ್ನು ಬಂಧಿಸಲು ಪೊಲೀಸರಿಗೆ ಪರವಾನಗಿ ನೀಡುತ್ತಿದೆ. ಆದರೆ ಈ ಕೋಮುವಾದಿ ಅಭಿಯಾನಕ್ಕೆ ದೊರೆತಿರುವುದು ನೀರಸ ಪ್ರತಿಕ್ರಿಯೆ.. ಧಾರ್ಮಿಕ ಸಮುದಾಯಗಳು ಮತ್ತು ಜಾತಿಗಳನ್ನು ಮೀರಿದ ರೈತರ ಏಕತೆ ಬಿಜೆಪಿಯ ಪೂರ್ವನಿಯೋಜಿತ ಚುನಾವಣಾ ತಂತ್ರಕ್ಕೆ ತಡೆಗೋಡೆಯಾಗಿ ಕೆಲಸ ಮಾಡುತ್ತಿದೆ.

ಸದ್ಯಕ್ಕೆ ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳುವ ಮೂಲಕ, ಈ ಸಮಸ್ಯೆಯನ್ನು ಪಕ್ಕಕ್ಕೆ ತಳ್ಳಬಹುದು ಮತ್ತು ತಮ್ಮದೇ ಆದ ವಿಭಜಕ ಕಾರ್ಯಸೂಚಿಯನ್ನು ತೂರಿಸಲು ಉತ್ತಮ ಅವಕಾಶವನ್ನು ಪಡೆಯಬಹುದು ಎಂದು ಬಿಜೆಪಿ ಭಾವಿಸುತ್ತಿದೆ.

ರೈತರು ಕಲಿಸಿದ ಪಾಠಗಳನ್ನು ಸರ್ಕಾರ ಕಲಿತರೆ ಭಾರತಕ್ಕೆ ಒಳ್ಳೆಯದು:

ಪಾಠ 1: ಪಾಶವೀ ಬಹುಮತದ ಬಲವನ್ನು ಬಳಸಿಕೊಂಡು ಸಂಸದೀಯ ಕಾರ್ಯವಿಧಾನಗಳನ್ನು ಬದಿಗೊತ್ತಿ ಬಿಡುವುದು ಬಹಳ ದುಬಾರಿಯಾಗಬಹುದು.


ಸರ್ಕಾರವು ಮಸೂದೆಗಳನ್ನು ಸ್ಥಾಯಿ ಸಮಿತಿಗೆ ಕಳುಹಿಸಿದ್ದರೆ, ರೈತರ ಮಾತುಗಳನ್ನು ಕೇಳಲು ಅವಕಾಶ ನೀಡಿದ್ದರೆ, ನ್ಯಾಯಯುತ ಮತದಾನ ಪ್ರಕ್ರಿಯೆಗೆ ಅವಕಾಶ ನೀಡಿದ್ದರೆ ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಅವು ಪ್ರಸ್ತುತ ರೂಪದಲ್ಲಿ ಕಾನೂನುಗಳಾಗುತ್ತಿರಲಿಲ್ಲ.

ಪಾಠ 2: ಭಿನ್ನಾಭಿಪ್ರಾಯದ ಧ್ವನಿಗಳನ್ನು ಕಡೆಗಣಿಸುವುದು ಮತ್ತು ತಿರಸ್ಕರಿಸುವುದು ಪ್ರತಿಕೂಲ ಪರಿಣಾಮ ಬೀರುತ್ತದೆ. ಮೊದಲಿನಿಂದಲೂ ಈ ಸರ್ಕಾರ ರೈತರ ಮಾನಹಾನಿ ಮಾಡಲು ತನ್ನೆಲ್ಲ ಅಧಿಕಾರವನ್ನು ಬಳಸಿಕೊಂಡಿದೆ. ಆದಿವಾಸಿಗಳು ಮತ್ತು ದಲಿತರು ಮತ್ತು ಅಲ್ಪಸಂಖ್ಯಾತರಿಗೆ ನ್ಯಾಯ ಒದಗಿಸಬೇಕು ಎಂದು ಪ್ರತಿಪಾದಿಸುವವರನ್ನು 'ನಗರ ನಕ್ಸಲರು' ಎಂದು ಹೆಸರಿಸಿ ಜೈಲಿನಲ್ಲಿಟ್ಟಂತೆ, ರೈತ ನಾಯಕರನ್ನು ದೇಶವಿರೋಧಿಗಳೆಂದು ಬಿಂಬಿಸಲಾಗಿದೆ.

ಪಾಠ 3 ಕ್ಕೆ ವಿವರಣೆ ಬೇಕಿಲ್ಲ. ಸರ್ವಾಧಿಕಾರದಿಂದ ಏನೂ ಆಗದು, ಅದನ್ನು ಸೋಲಿಸಬಹುದು ಎಂದು ಭಾರತದ ಶ್ರಮಜೀವಿ ವರ್ಗಗಳು, ರೈತರು ಮತ್ತು ಕಾರ್ಮಿಕರು, ತಮ್ಮ ಧೀರ ಹೋರಾಟದ ಮೂಲಕ ನಿರೂಪಿಸಿದ್ದಾರೆ.

ರೈತ ಆಂದೋಲನದ ವಿಜಯವು ವ್ಯಾಪಕವಾದ ಪರಿಣಾಮಗಳನ್ನು ಹೊಂದಿದೆ ಮತ್ತು ನ್ಯಾಯದ ಹಾಗೂ ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಪ್ರಜಾಪ್ರಭುತ್ವದ ಮತ್ತು ಧರ್ಮ ನಿರಪೇಕ್ಷತೆಯ ಮೌಲ್ಯಗಳ ಪರ ವಹಿಸುವ ಎಲ್ಲರಲ್ಲೂ ವಿಶ್ವಾಸವನ್ನು ಮೂಡಿಸಿದೆ.





ದೇಶಾದ್ಯಂತ ರೈತರ ಐತಿಹಾಸಿಕ ಹೋರಾಟದ ವರ್ಷಾಚರಣೆ

ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೊಳಿಸಿದ ಮೂರು ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ಸುಪಡೆಯಬೇಕೆಂದು ಆಗ್ರಹಿಸಿ ರೈತರು ನಡೆಸಿದ ಆಂದೋಲನ ನವಂಬರ್ 26ರಂದು ಒಂದು ವರ್ಷ ಪೂರೈಸಿದೆ. ಈ ಸಂದರ್ಭದಲ್ಲಿ ದಿಲ್ಲಿಯ ಗಡಿಗಳಲ್ಲಿ ಗಡಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ರೈತರು ಜಮಾಯಿಸಿದರು.

ದೇಶಾದ್ಯಂತ ಹಲವು ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಕರೆ ನೀಡಿದ ಸಂಯುಕ್ತ ಕಿಸಾನ್ ಮೋರ್ಚಾ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿಯ ಪ್ರದೇಶಗಳಲ್ಲಿನ ಪ್ರಮುಖ ಭಾಗಗಳಲ್ಲಿ ಚಳುವಳಿಯನ್ನು ನಡೆಸುತ್ತಿದೆ. ಇದರ ಭಾಗವಾಗಿ ದೇಶದ ರಾಜಧಾನಿ ದೆಹಲಿಯಲ್ಲಿಯೂ ಸಹ ಸಾವಿರಾರು ಸಂಖ್ಯೆಯಲ್ಲಿ ರೈತರು ಸೇರಿದ್ದು, ದೇಶದ ರೈತ ಆಂದೋಲನಕ್ಕೆ ಮತ್ತಷ್ಟು ಹುರುಪು ನೀಡಿದೆ.

ಈ ನವಂಬರ್ 26ರಂದು ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತ್ರಿ ನೀಡಬೇಕೆಂಬುದು ಮತ್ತು ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯನ್ನು ವಾಪಾಸು ತೆಗೆದುಕೊಳ್ಳಬೇಕು ಎಂಬುದು ಮುಖ್ಯ ಬೇಡಿಕೆಯಾಗಿದೆ.

ಸಂಯುಕ್ತ ಕಿಸಾನ್ ಮೋರ್ಚಾದ ವತಿಯಿಂದ ರೈತರು ದೆಹಲಿ ಗಡಿಭಾಗದಲ್ಲಿ ಪ್ರತಿಭಟನಾ ನಿರತರಾಗಿದ್ದು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ದ್ರ ಸರ್ಕಾರದ ಮೇಲೆ ಒತ್ತಡ ಹಾಕಿದರು.

ಟಿಕ್ರಿ ಗಡಿಯ ಪಕೋರಾ ಚೌಕ್‌ನಲ್ಲಿ ದೊಡ್ಡ ಟೆಂಟ್ ಹಾಕಿ ಸಮಾವೇಶಗೊಳಿಸಲಾಗಿತ್ತು. ಇನ್ನೊಂದು ಮುಖ್ಯ ವೇದಿಕೆ ಸಿಂಘು ಗಡಿಯಲ್ಲಿ ಸಿದ್ದವಾಗಿದ್ದು, ಸರ್ಕಾರ ರೈತ ವಿರೋಧಿ ನೀತಿಗಳ ಬಗ್ಗೆ ಪ್ರತಿಭಟನಾಕಾರರಲ್ಲಿ ವಿವರಿಸಿದರು.

ಕರ್ನಾಟಕದಲ್ಲಿಯೂ ಹೆದ್ದಾರಿಗಳ ಬಂದ್ ನಡೆಸಲಾಗಿದೆ. ತಮಿಳುನಾಡು, ಬಿಹಾರ ಮತ್ತು ಮಧ್ಯಪ್ರದೇಶದಲ್ಲಿ ಕಾರ್ಮಿಕ ಸಂಘಟನೆಗಳೊಂದಿಗೆ ಜಂಟಿಯಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ರಾಯ್ಪುರ ಮತ್ತು ರಾಂಚಿಯಲ್ಲಿ ಟ್ರ್ಯಾಕ್ಟರ್ ರ್‍ಯಾಲಿಗಳು ನಡೆದಿದೆ. ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿ ಬೃಹತ್ ರ್‍ಯಾಲಿವೊಂದು ನಡೆದಿದೆ.

ಮೋಗಾ, ಬಟಿಂಡಾ, ಫರೀದ್‌ಕೋಟ್, ಸಂಗ್ರೂರ್ ಮತ್ತು ಅಮೃತಸರದಿಂದ ಟ್ರ್ಯಾಕ್ಟರ್ ರ್‍ಯಾಲಿಗಳಲ್ಲಿ ರೈತರು ಜಮಾವಣೆಗೊಂಡರು. ರೈತರು ಎರಡು ಗಡಿ ಕೇಂದ್ರಗಳಲ್ಲಿ ಕಾರುಗಳಲ್ಲಿ ಮತ್ತು ಸೋನಿಪತ್‌ನಲ್ಲಿ ರೈಲುಗಳಲ್ಲಿ ಪ್ರತಿಭಟನಾ ಸ್ಥಳಗಳಿಗೆ ಆಗಮಿಸಿದರು.

ಇತರೇ ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರಿಯುತ್ತದೆ

ಕೇಂದ್ರದ ಮೂರು ಕೃಷಿ ಕಾನೂನುಗಳ ವಿರುದ್ಧ ರೈತರು ಪ್ರತಿಭಟನೆಗೆ ಒಂದು ವರ್ಷ ಪೂರೈಸಿದ್ದು, ಕೇಂದ್ರದಿಂದ ಬೇಡಿಕೆಗಳನ್ನು ಈಡೇರಿಸುವವರೆಗೆ ಪ್ರತಿಭಟನೆ ಮುಂದುವರಿಯುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ್ ಧವಳೆ ಹೇಳಿದ್ದಾರೆ.

ಎಎನ್‌ಐ ಜೊತೆ ಮಾತನಾಡಿದ ಅಶೋಕ್ ಧವಳೆ "ರೈತ ಸಂಘಟನೆಗಳ ಜಂಟಿ ವೇದಿಕೆ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ರೈತರ ಚಳವಳಿಯ ಮೊದಲ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ರಾಜ್ಯಗಳಲ್ಲಿ ಪ್ರತಿಭಟನೆಗಳನ್ನು ಹಮ್ಮಿಕೊಂಡಿದೆ. ನವೆಂಬರ್ 29ರಿಂದ ಸಂಸತ್ತಿನ ಚಳಿಗಾಲದ ಅಧಿವೇಶನ ಪ್ರಾರಂಭವಾಗುತ್ತದೆ. ಕೇಂದ್ರವು ಕನಿಷ್ಠ ಬೆಂಬಲ ಬೆಲೆ ಬಗ್ಗೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು" ಎಂದು ಆಗ್ರಹಿಸಿದರು.

ಹರಿಯಾಣದ ರೈತರೂ ಎರಡು ಗಡಿ ಕೇಂದ್ರಗಳಲ್ಲಿ ಸೇರಿದ್ದಾರೆ. ನಮ್ಮ ಇತರೆ ಬೇಡಿಕೆಗಳು ಈಡೇರುವವರೆಗೂ ಪ್ರತಿಭಟನೆ ಮುಂದುವರಿಸುತ್ತೇವೆ ಎಂದು ಇನ್ನೊಬ್ಬ ರೈತ ಮುಖಂಡ ಇಂದರ್‌ಜೀತ್ ಸಿಂಗ್ ಹೇಳಿದರು.

"ಪಂಜಾಬ್‌ನ ಪ್ರತಿ ಹಳ್ಳಿಯಿಂದ 50 ರಿಂದ 500 ರೈತರು ದೆಹಲಿ ಗಡಿಯನ್ನು ತಲುಪಿದ್ದಾರೆ. ಪಂಜಾಬ್, ಹರಿಯಾಣ ಮತ್ತು ಇತರ ರಾಜ್ಯಗಳಿಂದ ಟಿಕ್ರಿ ಗಡಿಯಲ್ಲಿ ಒಂದು ಲಕ್ಷ ರೈತರು ಸೇರಿರುವ ಸಾಧ್ಯತೆ ಇದೆ" ಎಂದು ಇನ್ನೊಬ್ಬ ಮುಖಂಡರು ಹೇಳಿದ್ದಾರೆ.

ದೇಶವನ್ನು ಮಾರಾಟಕ್ಕಿಟ್ಟಿರುವ 'ಸೇಲ್ಸ್‌ಮನ್'.......

ಪುಟ 8 ರಿಂದ

ಸಂಗ್ರಹ) ಹಾಗು ಆರ್.ಅರುಣ್ ಕುಮಾರ್ ಬರೆದಿರುವ 'ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ' ಎಂಬ ಪುಸ್ತಕಗಳನ್ನು ಸಿಪಿಐ(ಎಂ) ಮುಖಂಡರಾದ ಎಸ್.ವರಲಕ್ಷ್ಮಿ ಬಿಡುಗಡೆ ಮಾಡಿದರು. ಹಿರಿಯ ಮುಖಂಡ ಟಿ.ಸುರೇಂದ್ರರಾವ್ ಅಧ್ಯಕ್ಷತೆ ವಹಿಸಿದ್ದರು. ಡಾ.ಕೆ.ಪ್ರಕಾಶ್, ಕೆ.ಎನ್ ಉಮೇಶ್ ಮಾತನಾಡಿದರು. ಭೂಮ್ತಾಯಿ ಬಳಗದವರು ಸೌಹಾರ್ದ ಗೀತೆಗಳನ್ನು ಹಾಡಿದರು. ಇದಕ್ಕೂ ಮೊದಲು ನಡೆದ ಜನತೆಯ ಹಕ್ಕುಗಳಿಗಾಗಿ ರಾಜಕೀಯ ಹಕ್ಕೊತ್ತಾಯ ರ್‍ಯಾಲಿಯಲ್ಲಿ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಹಿರಿಯ ಸಂಗಾತಿಗಳಿಗೆ ಗೌರವ ಸನ್ಮಾನ:

ಪಕ್ಷಕ್ಕಾಗಿ ದಶಕಗಳ ಕಾಲ ದುಡಿದ ಹಿರಿಯ ಸಂಗಾತಿಗಳನ್ನು ಸನ್ಮಾನಿಸಲಾಯಿತು. ರೈತ ಮುಖಂಡ ಎನ್. ವೆಂಕಟಾಚಲಯ್ಯ, ಸಾಂಸ್ಕೃತಿಕ ರಂಗದ ಗುರುತಿಸಿಕೊಂಡಿದ್ದ ಟಿ. ಸುರೇಂದ್ರರಾವ್, ವಿಮಾ ರಂಗದ ಚಳುವಳಿಯಲ್ಲಿ ಗುರುತಿಸಿಕೊಂಡಿದ್ದ ಎಚ್.ಎಸ್. ವೆಂಕಟೇಶಮೂರ್ತಿ, ಜಿ.ಕೆ. ಗಂಗಾಧರ್, ದೇಶಾಭಿಮಾನಿ ಶಾಖೆ ಹಿರಿಯ ಸಂಗಾತಿ ಉನ್ನಿಕೃಷ್ಣನ್ ಅವರು ಸನ್ಮಾನ ಸ್ವೀಕರಿಸಿದರು.

ನಾಲ್ಕು ವರ್ಷಗಳ ಹೆಜ್ಜೆಗುರುತು – ಛಾಯಾಚಿತ್ರ ಪ್ರದರ್ಶನ

ಕಾರ್ಮಿಕ ಮುಖಂಡ ಕಾಮ್ರೇಡ್ ಪುರುಷೋತ್ತಮ ಕಲಾಲಬಂಡಿ ಅವರ ಹೆಸರಿನಲ್ಲಿ ಕುಮಾರಸ್ವಾಮಿ ಬಡಾವಣೆಯ ಉಡುಪಿ ಸ್ವಾದ್ ಹೋಟೆಲ್ ನಲ್ಲಿ ನಾಲ್ಕು ವರ್ಷಗಳ ಹೋರಾಟಗಳನ್ನು ಸ್ಮರಿಸುವ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಕಿರುತೆರೆ ನಿರ್ದೇಶಕ ಹಾಗು ನಟ ಬಿ.ಸುರೇಶ್ ಛಾಯಾಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು 'ಶೇಕಡ 2ರಷ್ಟಿರುವ ವೈದಿಕಶಾಹಿ ಇಡೀ ದೇಶ ತನ್ನ ಅಣತಿಯಂತೆ ನಡೆಯಬೇಕೆಂದು ಆಜ್ಞೆ ಹೊರಡಿಸುತ್ತಿದೆ, ಭಾರತದಲ್ಲಿ ಎರಡು ಭಾರತ ಮಾತ್ರವಲ್ಲ ಕಲ್ಲು ಹೊಡೆಯುವವರ ಭಾರತ, ಬಾಯಿ ಮುಚ್ಚಿಸುವವರ ಭಾರತ ಸೇರಿದಂತೆ ಹಲವು ಭಾರತಗಳಿವೆ. ವೀರ್ ದಾಸ್ ಹಾಗು ಹಂಸಲೇಖ ಅವರ ಮೇಲಿನ ದಾಳಿ ಇದನ್ನು ಪುಷ್ಟೀಕರಿಸುತ್ತಿದೆ' ಎಂದರು. 'ಕಮ್ಯುನಿಸ್ಟ್ ಪಕ್ಷಗಳು ಅಂಬೇಡ್ಕರ್ ವಾದದ ಜತೆಗೆ ಮಿಳಿತಗೊಂಡು ಜಾತಿ ಪ್ರಶ್ನೆಯನ್ನು ಪ್ರಧಾನವಾಗಿ ಪರಿಗಣಿಸಿ ನಡೆಯಬೇಕಾದ ಅಗತ್ಯವಿದೆ' ಎಂದರು.

'ಕಮ್ಯುನಿಸ್ಟ್ ಪಕ್ಷಗಳ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಒಡೆದು ಚೂರಾಗಿರುವ ಮನಸ್ಸುಗಳನ್ನು ಒಗ್ಗೂಡಿಸುವ ಸವಾಲು ಇದೆ. ಪ್ರಭಾವಿ ಮಾಧ್ಯವಾಗಿರುವ ಸಿನಿಮಾ, ರಂಗಭೂಮಿಯನ್ನು ಬಳಸಿಕೊಂಡು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಮುಖ್ಯವಾಹಿನಿ ಸಿನಿಮಾಗಳಲ್ಲಿ ಜನರ ನೈಜ ಸಮಸ್ಯೆಗಳು ಬಿಂಬಿತವಾಗಲು ಜೈ ಭೀಮ್ ದಂತಹ ಸಿನಿಮಾ ಬರಬೇಕಾಯಿತು, ಈ ಪ್ರಯತ್ನಗಳು ಇನ್ನಷ್ಟು ಹೆಚ್ಚಬೇಕು' ಎಂದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ. ರಾಜಶೇಖರ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕಲಾಲಬಂಡಿಯವರ ಪತ್ನಿ ಶ್ಯಾಮಲಾ ಪೂಜಾರ್ ಇದ್ದರು.

ನವೆಂಬರ್ 21 ರಂದು ನಡೆದ ಪ್ರತಿನಿಧಿ ಅಧಿವೇಶನದಲ್ಲಿ ರಾಜಕೀಯ ಸಂಘಟನಾ ವರದಿ ಹಾಗು ಕೋವಿಡ್ ಸಂದರ್ಭದಲ್ಲಿ ಪಕ್ಷದ ಮಧ್ಯಪ್ರವೇಶ ಕುರಿತ ವಿಸ್ತೃತ ವರದಿ ಮೇಲೆ ಪ್ರತಿನಿಧಿಗಳು ಚರ್ಚಿಸಿದರು. ಇದರ ಆಧಾರದ ಮೇಲೆ ಪಕ್ಷವನ್ನು ಜನತೆಯ ನಡುವೆ ಬಲಿಷ್ಟವಾಗಿ ಕಟ್ಟುವ ಮುಂದಿನ ಕರ್ತವ್ಯಗಳನ್ನು ತೀರ್ಮಾನಿಸಲಾಗಿದೆ. ಮುಂಬರುವ ದಿನಗಳಲ್ಲಿ ಜನತೆಯ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ರೂಪಿಸಲು ನಗರದ ನಾಗರಿಕ ಸಮಸ್ಯೆಗಳು, ಮೂಲಸೌಕರ್ಯ ಅಭಿವೃದ್ಧಿ, ಬಿಬಿಎಂಪಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಬಿಎಸ್ ಪಾಟೀಲ್ ವರದಿ ಆಧರಿಸಿ ಆಡಳಿತ ವಿಕೇಂದ್ರೀಕರಣ ಮಾಡಬೇಕೆಂಬ ಇತ್ಯಾದಿ ಪ್ರಶ್ನೆಗಳ ಮೇಲೆ ನಿರ್ಣಯ ಕೈಗೊಳ್ಳಲಾಗಿದೆ.

ನೂತನ ಕಾರ್ಯದರ್ಶಿಯಾಗಿ ಬಿ.ಎನ್. ಮಂಜುನಾಥ್ ಆಯ್ಕೆ:

ಸಮ್ಮೇಳನವು 17 ಜನರ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡಿದ್ದು, ಜಿಲ್ಲಾ ಕಾರ್ಯದರ್ಶಿಯಾಗಿ ಬಿ.ಎನ್. ಮಂಜುನಾಥ್ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಡಾ.ಕೆ. ಪ್ರಕಾಶ್, ಕೆ.ಎಸ್. ವಿಮಲಾ, ಬಿ.ರಾಜಶೇಖರಮೂರ್ತಿ, ಲಿಂಗರಾಜು, ಪಿ.ನಾಗರಾಜ್, ಸಿ.ಜಿ. ಶ್ರೀಪತಿ ಆಯ್ಕೆಯಾಗಿದ್ದಾರೆ. ಹಿರಿಯ ಮುಖಂಡ ಟಿ. ಸುರೇಂದ್ರರಾವ್ ವಿಶೇಷ ಆಹ್ವಾನಿತರಾಗಿ ಆಯ್ಕೆ ಮಾಡಲಾಗಿದೆ.

ಪಕ್ಷದ ರಾಜ್ಯ ಸಮಿತಿ ಸದಸ್ಯ ಡಾ.ಕೆ.ಪ್ರಕಾಶ್ ಸಮಾರೋಪ ಭಾಷಣ ಮಾಡಿದರು. ಜಿಲ್ಲಾ ಸಮಿತಿಯಿಂದ ಬಿಡುಗಡೆಯಾದ ಕೆ.ಎನ್. ಉಮೇಶ್ ಅವರನ್ನು ಸನ್ಮಾನಿಸಲಾಯಿತು.

ದುರಹಂಕಾರಕ್ಕೆ ಸೋಲು

ಅನಗತ್ಯವಾಗಿದ್ದ ಸಂಘರ್ಷಕ್ಕೆ ತಡೆ




ಕೃಷಿ ಕಾನೂನುಗಳನ್ನು ರದ್ದುಗೊಳಿಸಿರುವುದರಿಂದ, ಕೊನೆಯ ಪಕ್ಷ ತಾತ್ಕಾಲಿಕವಾಗಿಯಾದರೂ, ಕೇಂದ್ರ ಸರ್ಕಾರ ಮತ್ತು ರೈತರ ನಡುವಿನ ಸಲೀಸಾಗಿ ತಪ್ಪಿಸಬಹುದಾಗಿದ್ದ ಸಂಘರ್ಷದ ಒಂದು ಕೆಟ್ಟ ಅಧ್ಯಾಯವನ್ನು ಕೊನೆಗೊಳಿಸಲಾಗಿದೆ. ಆದಾಗ್ಯೂ, ಪ್ರತಿಭಟನೆಯು ಹೊರಸೂಸಿದ ಆವೇಗವು ಖಂಡಿತವಾಗಿಯೂ ಮುಂದುವರಿಯುತ್ತದೆ. ನಿರಂತರವಾಗಿ ಕಾಡುತ್ತಿರುವ ಕೃಷಿ ಬಿಕ್ಕಟ್ಟನ್ನು ಪರಿಹರಿಸುವ ಬೇಡಿಕೆಗಳ ಸುತ್ತ ಗ್ರಾಮೀಣ ಜನತೆಯನ್ನು ಹೊಸದಾಗಿ ಅಣಿನೆರೆಸುವ, ಹೊಸ ಸಂಘರ್ಷಗಳು ಹೊರಹೊಮ್ಮುವ ಮತ್ತು ಬೆಳೆಯುವ ಸಾಧ್ಯತೆಗಳಿರುವ, ಖಂಡಿತವಾಗಿಯೂ ಕುತೂಹಲ ಕೆರಳಿಸುವ ದಿನಮಾನಗಳಲ್ಲಿ ನಾವಿದ್ದೇವೆ. ಎನ್ನುತ್ತಾರೆ ಮುಂಬೈಯ ಟಾಟಾ ಸಮಾಜಿಕ ವಿಜ್ಞಾನಗಳ ಸಂಸಥೆಯಲ್ಲಿ ಪ್ರಾಧ್ಯಾಪಕ

ಪ್ರೊ. ಆರ್. ರಾಮಕುಮಾರ್

ಅನು: ಕೆ.ಎಂ. ನಾಗರಾಜ್

ಮೂಲ ಲೇಖನ ಕೃಪೆ:
ದಿ ಹಿಂದು, ನವಂಬರ್ 20, 2021



ಭಾರತದ ರೈತ ಚಳುವಳಿಯು ಒಂದು ಅಭೂತಪೂರ್ವ ವಿಜಯವನ್ನು ಸಂಪಾದಿಸಿದೆ. ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸುವುದಾಗಿ ಪ್ರಧಾನಿ ಮೋದಿ ಘೋಷಣೆ ಮಾಡಿದ್ದಾರೆ. ಈ ಕಾನೂನುಗಳನ್ನು ವಿರೋಧಿಸಿ, ಒಂದು ವರ್ಷಕ್ಕೂ ಹೆಚ್ಚು ಸಮಯದಿಂದಲೂ ಸಾವಿರ ಸಾವಿರಗಟ್ಟಲೆ ರೈತರು ದೆಹಲಿಯನ್ನು ಸುತ್ತುಗಟ್ಟಿ ಠಿಕಾಣಿ ಹೂಡಿ ಪ್ರತಿಭಟನೆ ನಡೆಸುತ್ತಿದ್ದರು. ಅವರ ಈ ಐತಿಹಾಸಿಕ ಪ್ರತಿಭಟನೆಯು ದಿನೇ ದಿನೇ ದೇಶವ್ಯಾಪಿಯಾಗಿ ವಿಸ್ತರಿಸುತ್ತಾ, ಪ್ರತಿರೋಧದ ಒಂದು ಬೃಹತ್ ಆಂದೋಲನವಾಗಿ ವಿಕಾಸ ಹೊಂದುವ ಲಕ್ಷಣಗಳು ಗೋಚರಿಸುತ್ತಿದ್ದವು. ಈ ಕಾನೂನುಗಳನ್ನು ರದ್ದುಗೊಳಿಸುವ ನಿರ್ಧಾರವು ಬುದ್ಧಿವಂತಿಕೆಯದ್ದೇ ಆದರೂ ಅದನ್ನು ಕೈಗೊಳ್ಳುವಲ್ಲಿ ತಡವಾಗಿದೆ. ದೆಹಲಿಯಲ್ಲಿ ಈಗಲೂ ಮುಂದುವರೆಯುತ್ತಿರುವ ಈ ಚಳುವಳಿಯ ಮೇಲೆ ತೆರೆ ಎಳೆದರೂ ಸಹ, ಅದು ರಾಜಕೀಯವಾಗಿ ಹೊರಸೂಸಿದ ಭಾವ ತೀವ್ರತೆ, ಹುರುಪು–ಉತ್ಸಾಹಗಳು ಕಡಿಮೆಯಾಗುವ ಸಾಧ್ಯತೆಗಳಿಲ್ಲ.

ರೈತರ ಈ ಪ್ರತಿಭಟನೆಗೆ ಸರ್ಕಾರ ತೋರಿದ ಪ್ರತಿಕ್ರಿಯೆ ಭಯಾನಕವಾಗಿತ್ತು ಮತ್ತು ದುರಹಂಕಾರದಿಂದ ಕೂಡಿತ್ತು. ಒಂದು ಕಡೆಯಲ್ಲಿ, ಕೃಷಿ ಸುಧಾರಣೆಗಳ ಹೆಸರಿನಲ್ಲಿ ತಾನು ರೂಪಿಸಿದ ಯೋಜನೆಯ ಬಗ್ಗೆ ಸದಭಿಪ್ರಾಯ ಮೂಡಿಸುವ ನಿರೂಪಣೆಯಲ್ಲಿ ತೊಡಗಿದ್ದ ಸರ್ಕಾರವು ಇನ್ನೊಂದು ಕಡೆಯಲ್ಲಿ, ಹೇಗಾದರೂ ಸರಿ, ಚಳುವಳಿಯನ್ನು ಮುರಿಯಲೇಬೇಕು ಎನ್ನುವ ಹಠಕ್ಕೆ ಬಿದ್ದಿತ್ತು. ಪ್ರತಿಭಟನಾಕಾರರನ್ನು ಭಯೋತ್ಪಾದಕರೆಂದು ಮತ್ತು ಖಲಿಸ್ತಾನಿಗಳೆಂದು ಹಣೆಪಟ್ಟಿ ಹಚ್ಚಿತು. ಅವರ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸಿತು. ಅವರನ್ನು ಖರೀದಿಸಲು ಪ್ರಯತ್ನಿಸಿತು. ಅವರನ್ನು ರಾಕ್ಷಸರಂತೆ ಬಿಂಬಿಸಿ, ಅವಮಾನಿಸಲು ಪ್ರಯತ್ನಿಸಿತು. ಅವರ ಮೇಲೆ ಅಶ್ರುವಾಯು ಸಿಡಿಸಿತು. ಜಲ ಫಿರಂಗಿಗಳನ್ನು ಸಿಡಿಸಿತು. ಅವರ ವಿರುದ್ಧ ದೇಶದ್ರೋಹದ ಕೇಸುಗಳನ್ನು ಜಡಿಯಿತು. ರೈತರು ಬಗ್ಗಲಿಲ್ಲ. ಹತಾಶೆಗೊಂಡ ಸರ್ಕಾರದ ಅಧಿಕಾರಿಗಳು, ಪ್ರತಿಭಟನಾಕಾರರ ತಲೆ ಒಡೆಯುವಂತೆ ಪೊಲೀಸರಿಗೆ ಬಹಿರಂಗವಾಗಿಯೇ ಹೇಳಿದರು. ಉತ್ತರ ಪ್ರದೇಶದ ಲಖಿಂಪುರ್ ಖೇರಿಯಲ್ಲಿ ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದ ರೈತರ ಮೇಲೆ ವಾಹನವನ್ನು ಓಡಿಸಲಾಯಿತು. ಹಲವರು ಸತ್ತರು.



ವ್ಯಂಗ್ಯಚಿತ್ರ ಕೃಪೆ: ದಿನೇಶ್ ಕುಕ್ಕುಜಡ್ಕ

ಇಂತಹ ಅನೇಕ ಕಿರುಕುಳಗಳನ್ನು ಮತ್ತು ಕ್ರೌರ್ಯವನ್ನು ಸಹಿಸಿಕೊಂಡು ಚಳುವಳಿಯನ್ನು ಮುಂದುವರೆಸಿದ ಪ್ರತಿಭಟನಾಕಾರರು ವಂದನೀಯರೇ.

ಒಟ್ಟಾರೆ ಸಂದರ್ಭ

1991ರ ನಂತರ, ಬಲಪಂಥೀಯ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸಿದ ಕೃಷಿ ವಲಯದ "ಸುಧಾರಣೆಗಳು", 1960ರ ನಂತರ ಆರಂಭಗೊಂಡು ಕೃಷಿಗೆ ಒದಗುತ್ತಿದ್ದ ಸಾಂಸ್ಥಿಕ ಬೆಂಬಲವನ್ನು ಮತ್ತು ಅದರ ಕ್ರಮಗಳನ್ನು ಕಳಚಿಹಾಕುವ ನಿಟ್ಟಿನಲ್ಲಿದ್ದವು. ಧಾನ್ಯಗಳಿಗೆ ಕನಿಷ್ಠ ಬೆಂಬಲ ಬೆಲೆ, ರಸ ಗೊಬ್ಬರ ಸಬ್ಸಿಡಿ, ಬೆಳೆ ಸಾಲ, ಕೃಷಿ ಮಾರುಕಟ್ಟೆಯ ಅಭಿವೃದ್ಧಿ, ಕೃಷಿ ಸಂಶೋಧನೆ ಮತ್ತು ಕೃಷಿ ಸೇವೆಗಳ ವಿಸ್ತರಣೆ ಮುಂತಾದ ಸಾಂಸ್ಥಿಕ ಬೆಂಬಲದ ಕ್ರಮಗಳು, 1960 ಮತ್ತು 1980ರ ನಡುವೆ ದೇಶವು ಸಾಧಿಸಿದ ಆಹಾರ ಸ್ವಾವಲಂಬನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಪ್ರಸಕ್ತ ಕಾನೂನುಗಳ ಪೈಕಿ, ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ಕಾಯ್ದೆಯ ಉದ್ದೇಶವು ಎಪಿಎಂಸಿ (ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ) ಕಾಯ್ದೆಯನ್ನು ಅನೂರ್ಜಿತಗೊಳಿಸುವುದೇ ಆಗಿತ್ತು. ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಎಪಿಎಂಸಿ ಕಾಯ್ದೆ(1972) ಪ್ರಕಾರ ನಿಯಂತ್ರಿಸಲ್ಪಡುತ್ತಿದ್ದ ಮಂಡಿ ವ್ಯವಸ್ಥೆಯನ್ನು ನಾಶ ಪಡಿಸುವುದೇ ಹೊಸ ಕಾಯ್ದೆಯ ಉದ್ದೇಶ. ರಫ್ತು ಬೆಳೆಗಳು ಮತ್ತು ಹೆಚ್ಚಿನ ಲಾಭ ತರುವ ಇತರ ಬೆಳೆಗಳೊಂದಿಗೆ ಭಾರತವು ತನ್ನ ಬೆಳೆ ಮಾದರಿಯನ್ನು ವೈವಿಧ್ಯಮಯ ಗೊಳಿಸಿಕೊಳ್ಳಬೇಕು ಎಂದಾದರೆ, ಮಂಡಿ ವ್ಯವಸ್ಥೆಯು ಖಾಸಗಿ ಮಾರುಕಟ್ಟೆಗಳಿಗೆ, ವಾಯ್ದೆ(ಫ್ಯೂಚರ್ಸ್) ಮಾರುಕಟ್ಟೆಗೆ ಮತ್ತು ಗುತ್ತಿಗೆ ಕೃಷಿಗೆ ದಾರಿ ಮಾಡಿಕೊಡಬೇಕಾಗುತ್ತದೆ ಎಂಬುದಾಗಿ ಹೇಳಲಾಯಿತು. ದೊಡ್ಡ ಕಾರ್ಪೊರೇಟ್ ಖರೀದಿದಾರರು ಮತ್ತು ರಫ್ತುದಾರರೊಂದಿಗೆ ರೈತರು ನೇರವಾಗಿ ವ್ಯವಹರಿಸಲು ಎಪಿಎಂಸಿ ಕಾಯ್ದೆಯು ಅವಕಾಶ ನೀಡದ ಕಾರಣದಿಂದ ರೈತರಿಗೆ ತಾರತಮ್ಯ ಮಾಡಿದಂತಾಗುತ್ತದೆ ಎಂದು ವಾದಿಸಲಾಯಿತು. ಆದ್ದರಿಂದ, ಸ್ಥಳೀಯ ಮಂಡಿಯ ಅನುಮತಿ ಇಲ್ಲದೆ ಅಥವಾ ಮಂಡಿಗೆ ಯಾವುದೇ ತೆರಿಗೆ ಪಾವತಿ ಮಾಡದೆ, ಎಲ್ಲಿ ಬೇಕಾದರೂ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ವಾತಂತ್ರ್ಯವನ್ನು ರೈತರು ಹೊಂದಿದಾಗ ಖಾಸಗಿ ಮಾರುಕಟ್ಟೆಗಳು ಅಥವಾ ಗ್ರಾಮೀಣ ಸಂಗ್ರಹ ಕೇಂದ್ರಗಳು ಅಸ್ತಿತ್ವಕ್ಕೆ ಬರುತ್ತವೆ ಮತ್ತು ಈ ಮೂಲಕ ಗುತ್ತಿಗೆ ಕೃಷಿ ಪದ್ಧತಿಯನ್ನು ಜನಪ್ರಿಯಗೊಳಿಸಬಹುದು ಎಂಬ ನೆಲೆಯಲ್ಲಿ ಎಪಿಎಂಸಿ ಕಾಯ್ದೆಯನ್ನು ತಿದ್ದುಪಡಿ ಮಾಡಲಾಗಿದೆ. ಅದೇ ರೀತಿಯಲ್ಲಿ, ವ್ಯಾಪಾರಿಗಳು ತಮ್ಮ ಬಳಿ ಇಟ್ಟುಕೊಳ್ಳುವ ದಾಸ್ತಾನು ಮಿತಿಯನ್ನು ಸಡಿಲಿಸಿದರೆ ಧಾನ್ಯಗಳ ಸಂಗ್ರಹಣೆ, ಪರಿಷ್ಕರಣೆ ಮತ್ತು ದಾಸ್ತಾನುಗಳಿಗೆ ಖಾಸಗಿ ಕಾರ್ಪೊರೇಟ್ ಹೂಡಿಕೆಯನ್ನು ಪ್ರೋತ್ಸಾಹಿಸಬಹುದು ಎಂಬ ನೆಲೆಯಲ್ಲಿ 1955ರ ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿಮಾಡಲಾಗಿದೆ.

ಕೃಷಿ ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರೂಪಿಸುವುದು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸೇರಿದ್ದು ಎಂಬುದು ದೀರ್ಘಕಾಲದಿಂದಲೂ ಭಾರತದಲ್ಲಿ ಪಾಲಿಸಿಕೊಂಡು ಬಂದಿದ್ದ ಒಂದು ಸಾಂವಿಧಾನಿಕ ಒಮ್ಮತದ ಪರಂಪರೆಯೇ ಆಗಿತ್ತು. ಹಾಗಾಗಿ, 2003ರಲ್ಲಿ ಕೇಂದ್ರ ಸರ್ಕಾರವು ಕೃಷಿ ಮಾರುಕಟ್ಟೆಗಳಿಗೆ ಸಂಬಂಧಿಸಿದ ಒಂದು ಮಾದರಿ ಕಾಯ್ದೆಯನ್ನು ಸಿದ್ಧಪಡಿಸಿ ಅದನ್ನು ತಮ್ಮ ತಮ್ಮ ರಾಜ್ಯ ವಿಧಾನಸಭೆಗಳಲ್ಲಿ ಅಂಗೀಕರಿಸಿಕೊಳ್ಳುವಂತೆ ರಾಜ್ಯಗಳಿಗೆ ಸೂಚಿಸಿತು. ತದನಂತರ, ಇನ್ನೆರಡು ಮಾದರಿ ಕಾಯ್ದೆಗಳನ್ನು 2017 ಮತ್ತು 2018 ರಲ್ಲಿ ಸಿದ್ಧಪಡಿಸಿ ಅವುಗಳನ್ನು ರಾಜ್ಯಗಳಿಗೆ ಕಳುಹಿಸಲಾಗಿತ್ತು. ಕೇಂದ್ರ ಸರ್ಕಾರವು ರೂಪಿಸಿದ ಈ ಮಾದರಿ ಕಾಯ್ದೆಗಳನ್ನು ರಾಜ್ಯಗಳು ಸ್ವಾಗತಿಸಲೂ ಇಲ್ಲ ಅಥವಾ ತಳ್ಳಿ ಹಾಕಲೂ ಇಲ್ಲ. ಅನೇಕ ರಾಜ್ಯಗಳು ತಮಗೆ ಆಕರ್ಷಕವಾಗಿ ಕಂಡ ಮತ್ತು ತಮ್ಮ ಸಂದರ್ಭಗಳಿಗೆ ಸೂಕ್ತವೆಂದು ಕಂಡುಬಂದ ಕೆಲವು ಕಲಮು/ಖಂಡಗಳನ್ನು ಆಯ್ಕೆ ಮಾಡಿಕೊಂಡವು ಮತ್ತು ಅದಕ್ಕನುಗುಣವಾಗಿ 2003 ಮತ್ತು 2020 ರ ನಡುವೆ ತಮ್ಮ ಎಪಿಎಂಸಿ ಕಾಯ್ದೆಗಳಿಗೆ ತಿದ್ದುಪಡಿ ಮಾಡಿಕೊಂಡವು. ಈ ಸಂದರ್ಭವನ್ನು ಬಳಸಿಕೊಂಡ, ಏಕ ಮಾತ್ರ, ಬಿಹಾರ ರಾಜ್ಯವು 2006ರಲ್ಲಿ ತನ್ನ ಎಪಿಎಂಸಿ ಕಾಯ್ದೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿತು.

ಅಸಂವಿಧಾನಿಕ ಕಾನೂನುಗಳು

ಕೃಷಿಗೆ ಸಂಬಂಧಿಸಿದ ಕಾನೂನುಗಳನ್ನು ರಾಜ್ಯ ಸರ್ಕಾರಗಳಿಳ ಶಾಸಕ ವ್ಯಾಪ್ತಿಗೆ ಸೇರಿದ್ದು ಎಂಬ ಒಮ್ಮತವನ್ನು ಕೇಂದ್ರ ಸರ್ಕಾರವು 2020ರಲ್ಲಿ ಈ ಮೂರು ಕೃಷಿ ಕಾನೂನುಗಳನ್ನು ರಚಿಸುವ ಮೂಲಕ ಮುರಿಯಿತು. ರಾಜ್ಯ ಪಟ್ಟಿಯ ದಾಖಲೆ ಸಂಖ್ಯೆ 14, 26 ಮತ್ತು 27 ರ ವಿಷಯಗಳಲ್ಲಿ ಮಧ್ಯಪ್ರವೇಶಿಸಲು ಕೇಂದ್ರ ಸರ್ಕಾರವು ಸಮವರ್ತಿ ಪಟ್ಟಿಯ ದಾಖಲೆ ಸಂಖ್ಯೆ 33ನ್ನು ಬಳಕೆ ಮಾಡಿಕೊಳ್ಳುವ ಮೂಲಕ ಕೇಂದ್ರ–ರಾಜ್ಯಗಳ ನಡುವಿನ ಸಂಬಂಧದ ತತ್ವಗಳನ್ನು ಉಲ್ಲಂಘಿಸಿದೆ. ಈ ಕೃಷಿ ಕಾನೂನುಗಳು ರಾಜ್ಯ ಪಟ್ಟಿಯ ದಾಖಲೆ ಸಂಖ್ಯೆ 28ರಲ್ಲಿ ಹಸ್ತಕ್ಷೇಪ ಮಾಡಿವೆ. ಏಕೆಂದರೆ, ಅವು ಸಮವರ್ತಿ ಪಟ್ಟಿಯ ದಾಖಲೆ ಸಂಖ್ಯೆ 33ಕ್ಕೆ ಒಳಪಟ್ಟಿಲ್ಲ. ಹೀಗಾಗಿ, ಆರಂಭದಲ್ಲೇ, ಈ ಕೃಷಿ ಕಾನೂನುಗಳು ಅಸಂವಿಧಾನಿಕವಾಗಿವೆ ಎಂಬುದನ್ನು ಸಮಂಜಸವಾಗಿ ಮತ್ತು ಸಮರ್ಥನೀಯವಾಗಿ ವಾದಿಸಬಹುದು.

ಅದೇನೇ ಇರಲಿ, ಈ ಕೃಷಿ ಕಾನೂನುಗಳ ಅಸಂವಿಧಾನಕತೆಯ ಬಗ್ಗೆ ರೈತ ಸಂಘಟನೆಗಳು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸರ್ವೋಚ್ಚ ನ್ಯಾಯಾಲಯವು ನಿರಾಕರಿಸಿತು. ಬದಲಿಗೆ, ಪ್ರತಿಭಟನಾ ನಿರತ ರೈತ ಸಂಘಟನೆಗಳೊಂದಿಗೆ ಸಮಾಲೋಚಿಸದೆ, ಸರ್ವೋಚ್ಚ ನ್ಯಾಯಾಲಯವು ಜನವರಿ 2021 ರಲ್ಲಿ ನಾಲ್ಕು ಜನರ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯ ನಾಲ್ಕೂ ಸದಸ್ಯರೂ ಕೃಷಿ ಕಾನೂನುಗಳನ್ನು ಬಹಿರಂಗವಾಗಿಯೇ ಸಮರ್ಥಿಸಿದ್ದರು. ರೈತ ಸಂಘಟನೆಗಳು ಈ ಸಮಿತಿಯನ್ನು ವಿರೋಧಿಸಿದವು. ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದವು.

ಸಂವಿಧಾನಾತ್ಮಕತೆಯಲ್ಲದೆ, ಅವು ಒಳಗೊಂಡ ವಿಷಯಗಳನ್ನು ವ್ಯಾಪಕವಾಗಿ ಟೀಕಿಸಲಾಯಿತು. ಎಪಿಎಂಸಿ ಕಾಯ್ದೆಗಳನ್ನು ರದ್ದುಗೊಳಿಸಿದರೂ ಸಹ, ಖಾಸಗಿ ಹೂಡಿಕೆಯು ಕೃಷಿ ಮಾರುಕಟ್ಟೆಯತ್ತ ಹರಿಯುವುದಿಲ್ಲ ಎಂಬುದನ್ನು ಬಿಹಾರದ ಉದಾಹರಣೆ ತೋರಿಸುತ್ತದೆ. ವಾಸ್ತವವಾಗಿ ಹೇಳುವುದಾದರೆ, 2006ರಲ್ಲಿ ಎಪಿಎಂಸಿ ಕಾಯ್ದೆಯನ್ನು ಬಿಹಾರದಲ್ಲಿ ರದ್ದುಗೊಳಿಸಿದ ನಂತರ, ನಿರ್ಲಜ್ಜ ವ್ಯಾಪಾರಿಗಳಿಂದ ರೈತರ ಶೋಷಣೆ ಮತ್ತಷ್ಟು ಹೆಚ್ಚಾಗಿದೆ. ಕೇರಳದಲ್ಲಿ ಎಪಿಎಂಸಿ ಕಾಯ್ದೆ ಇರಲೇ ಇಲ್ಲ. ಆದರೂ, ಅಲ್ಲಿಗೆ ಖಾಸಗಿ ಹೂಡಿಕೆ ಹರಿದಿಲ್ಲ.

ಮಹಾರಾಷ್ಟ್ರವು 2016 ರಲ್ಲಿ ಹಣ್ಣುಗಳು ಮತ್ತು ತರಕಾರಿಗಳನ್ನು ಎಪಿಎಂಸಿಯ ವ್ಯಾಪ್ತಿಯಿಂದ ತೆಗೆದುಹಾಕಿತ್ತು. ಆದರೂ, ಅಲ್ಲಿನ ಕೃಷಿ ಮಾರುಕಟ್ಟೆಗೆ ಖಾಸಗಿ ಹೂಡಿಕೆಯಾದದ್ದು ಸ್ವಲ್ಪವೇ ಸ್ವಲ್ಪ. ಹಾಗಾಗಿ, ಎಪಿಎಂಸಿ ಕಾಯ್ದೆ ದುರ್ಬಲಗೊಂಡರೆ ಏನಾಗಬಹುದು ಎಂದರೆ, ಒಂದು ಔಪಚಾರಿಕ ನೆಲೆ ಹೊಂದಿರುವ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರುವ ಕೃಷಿ ಮಾರುಕಟ್ಟೆಯು **ಪುಟ 14 ನೋಡಿ**

ತ್ರಿಪುರಾ: ಮೋಸದ ಚುನಾವಣೆಗಳನ್ನು ರದ್ದು ಪಡಿಸಬೇಕು ಪ್ರಜಾಪ್ರಭುತ್ವವವನ್ನು ಮತ್ತೆ ನೆಲೆಗೊಳಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ನವಂಬರ್ 25 ರಂದು ತ್ರಿಪುರಾದಲ್ಲಿ ಅಗರ್ತಲಾ ಮಹಾನಗರಪಾಲಿಕೆ ಮತ್ತು 19 ನಗರಸಭೆಗಳಿಗೆ ನಡೆದಿರುವ ಚುನಾವಣೆಗಳನ್ನು ಆಳುವ ಬಿಜೆಪಿ ಒಂದು ಪ್ರಹಸನವಾಗಿ ಪರಿವರ್ತಿಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ದೂಷಿಸಿದೆ.

ಮತದಾನದ ಹಿಂದಿನ ದಿನ, ಅಗರ್ತಲಾ ಮತ್ತು ಇತರ ಪಟ್ಟಣಗಳಲ್ಲಿ ಬಿಜೆಪಿ ಮಂದಿ ಮನೆ–ಮನೆಗೆ ಹೋಗಿ ಸಿಪಿಐ(ಎಂ) ಅಭ್ಯರ್ಥಿಗಳನ್ನು, ಪೋಲಿಂಗ್ ಏಜೆಂಟರನ್ನು ಮತ್ತು ಸ್ಥಳೀಯ ಮುಖಂಡರನ್ನು ಬೆದರಿಸಲಾರಂಭಿಸಿದರು, ಮತದಾನದ ದಿನ ಮನೆಬಿಟ್ಟು ಹೊರಬರದಂತೆ ಎಚ್ಚರಿಕೆ ನೀಡಿದರು. ದೈಹಿಕ ಹಿಂಸಾಚಾರ ಮತ್ತು ಅವರ ಕುಟುಂಬಗಳನ್ನು ಮನೆಗಳಿಂದ ಹೊಡೆದೋಡಿಸುವ ಬೆದರಿಕೆ ಹಾಕಿದರು.

ಮತದಾನ ದಿನ, ಅಗರ್ತಲಾ, ಧರ್ಮನಗರ. ಖೊವಾಯ್, ಬೆಲೊನಿಯ ಮತ್ತು ಮೆಲಾಘರ್ ನಲ್ಲಿ ಬಿಜೆಪಿ ಗೂಂಡಾಗಳಿಂದ ವ್ಯಾಪಕ ಪ್ರಮಾಣದಲ್ಲಿ ಮತಗಟ್ಟೆ ಅಪಹರಣ ನಡೆಯಿತು, ಹಲವೆಡೆಗಳಲ್ಲಿ ಮತದಾರರನ್ನು ದೈಹಿಕವಾಗಿ ತಡೆಯಲಾಯಿತು. ಅಗರ್ತಲಾ ಪಟ್ಟಣದಲ್ಲಿ ಎಡಪಕ್ಷಗಳ ಪೋಲಿಂಗ್ ಏಜೆಂಟರನ್ನು ಥಳಿಸಿ ಮತಗಟ್ಟೆಗಳಿಂದ ಹೊರಗಟ್ಟಲಾಯಿತು. ಮತದಾನದ ಆರಂಭದಲ್ಲೇ ಮತಗಟ್ಟೆಗಳನ್ನು ವಶಪಡಿಸಿಕೊಂಡರು, ಜನರು ಮತದಾನ ಮಾಡದಂತೆ ತಡೆದರು. ಇದಕ್ಕೆ ಮೊದಲು, ಏಳು ವನಗರಸಭೆಗಳಲ್ಲಿ ಪ್ರತಿಪಕ್ಷಗಳ ಅಭ್ಯರ್ಥಿಗಳು ಮತಪತ್ರಗಳನ್ನು ಸಲ್ಲಿಸದಂತೆ ತಡೆಯಲಾಗಿತ್ತು. ಅದರಿಂದಾಗಿ, ಮತಪತ್ರ ಹಿಂತೆಗೆದುಕೊಳ್ಳುವ ದಿನದ ನಂತರ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಗೊಂಡರು.

ಸುಪ್ರಿಂ ಕೋರ್ಟ್ ಚುನಾವಣಾ ಪ್ರಕ್ರಿಯೆಯನ್ನು ಸುಭದ್ರಗೊಳಿಸಲು ಸಾಕಷ್ಟು ಪೋಲೀಸ್ ಪಡೆಗಳನ್ನು ನೆಲೆಗೊಳಿಸಬೇಕು ಎಂದು ನೀಡಿದ ಆದೇಶದ ಹೊರತಾಗಿಯೂ, ಚುನಾವಣಾ ವ್ಯವಸ್ಥೆಯ ಮೇಲೆ ಮತ್ತು ಮತದಾನದ ಹಕ್ಕಿನ ಮೇಲೆ ಈ ಲಜ್ಜಾಹೀನ ದಾಳಿಗಳು ನಡೆದಿವೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಬಿಜೆಪಿ ರಾಜ್ಯ ಸರಕಾರ ಸುಪ್ರಿಂ ಕೋರ್ಟ್ ನೀಡಿದ ಎಲ್ಲ ಆದೇಶಗಳ ನಗ್ನ ಉಲ್ಲಂಘನೆ ನಡೆಸಿದೆ, ಪೋಲಿಸ್ ಮತ್ತು ಕೇಂದ್ರೀಯ ಪೋಲಿಸ್ ಈ ಚುನಾವಣಾ ಮೋಸಕ್ಕೆ ಮೂಕಪ್ರೇಕ್ಷಕರಾಗಿ ಇರುವಂತೆ ಮಾಡಿದೆ ಎಂದು ಹೇಳಿದೆ.

ತ್ರಿಪುರಾದ ಎಡರಂಗ ಅಗರ್ತಲಾ ಮಹಾನಗರಪಾಲಿಕೆ ಮತ್ತು ಧರ್ಮನಗರ, ಖೊವಾಯ್, ಬೆಲೊನಿಯ ಮತ್ತು ಮೆಲಘರ್ ನಗರ ಸಭೆಗಳಿಗೆ ನಡೆದ ಮತದಾನಗಳನ್ನು ರದ್ದುಗೊಳಿಸುವ ಆದೇಶ ಹೊರಡಿಸಬೇಕು ಮತ್ತು ಪಾನಿಸಾಗರ್, ಸಬ್ರೂಮ್, ಸೊನಾಮುರ, ಕುಮಾರಘಾಟ್, ಅಮರ್ಪುರ್ ಮತ್ತಿತರ ನಗರಸಭೆಗಳಲ್ಲಿ ಹಲವಾರು ವಾರ್ಡುಗಳಲ್ಲಿ ಮರುಮತದಾನ ನಡೆಸಬೇಕು ಎಂದು ಆಗ್ರಹಿಸಿದೆ.

ತ್ರಿಪುರಾದ ಎಡರಂಗದ ಈ ಆಗ್ರಹವನ್ನು ಅನುಮೋದಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಮುಕ್ತ ಮತ್ತು ನ್ಯಾಯಯುತ ಮತದಾನ ನಡೆಯುವಂತೆ ಪ್ರಯತ್ನಿಸಲು ಮತ್ತು ಖಾತ್ರಿಪಡಿಸಲು ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿರುವುದರಿಂದ, ಈಗ ಅದು ತ್ರಿಪುರಾದಲ್ಲಿ ಪ್ರಜಾಪ್ರಭುತ್ವವನ್ನು ಮತ್ತು ನಾಗರಿಕರ ಮತದಾನದ ಹಕ್ಕನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಸಹಕಾರಿ ಸಂಸ್ಥೆಗಳ ಬಗ್ಗೆ ಆರ್‌ಬಿಐ ಹೊಸ ಮಾರ್ಗಸೂಚಿ ವಿರುದ್ಧ ಕೇರಳ ಎಡರಂಗ ಸರ್ಕಾರ ಸುಪ್ರೀಂ ಕೋರ್ಟಿಗೆ ಅರ್ಜಿ

ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ನ ಹೊಸ ಮಾರ್ಗಸೂಚಿಯು ಸಹಕಾರ ಸಂಘಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು ಕೇರಳದ ಎಲ್‌ಡಿಎಫ್ ಸರ್ಕಾರವು ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ನಿರ್ಧರಿಸಿದೆ.

ಇತ್ತೀಚಿನ ಆರ್‌ಬಿಐ ಮಾರ್ಗಸೂಚಿಗಳು ಸಹಕಾರಿ ಸಂಘಗಳು "ಸಹಕಾರಿ ಬ್ಯಾಂಕ್" ಪದವನ್ನು ಬಳಸಬಾರದು ಎಂದು ಒತ್ತಾಯಿಸುತ್ತದೆ. ಕೆಲವು ದಿನಗಳ ಹಿಂದೆ ಹೊರಡಿಸಿದ ಟಿಪ್ಪಣಿಯ ಮೂಲಕ, ಮತದಾನದ ಹಕ್ಕು ಹೊಂದಿರದ ಸದಸ್ಯರಿಂದ ಠೇವಣಿಗಳನ್ನು ತೆಗೆದುಕೊಳ್ಳದಂತೆ ಸಹಕಾರ ಸಂಘಗಳನ್ನು ನಿರ್ಬಂಧಿಸಿದೆ. ಆರ್‌ಬಿಐನ ಹೊಸ ನಿರ್ಧಾರವು ಸುಮಾರು 1,625 ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಸಾವಿರಾರು ಇತರ ಸಹಕಾರಿ ಬ್ಯಾಂಕ್‌ಗಳ ಕಾರ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

ಆರ್‌ಬಿಐ ಕಠಿಣ ಷರತ್ತುಗಳನ್ನು ಸರಿಪಡಿಸಲು ರಾಜ್ಯ ಸರ್ಕಾರದ ಅಡ್ವೊಕೇಟ್ ಜನರಲ್ ಮತ್ತು ಇತರ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆಯಲು ಕೇರಳ ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಸರ್ಕಾರದ ಪ್ರಕಾರ ಈ ನಿಯಮಗಳು ಸಹಕಾರ ಸಂಘಗಳ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತದೆ ಎಂಬುದಾಗಿದೆ.

ಕೇರಳದ ಎಡರಂಗ ಸರ್ಕಾರದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಹಣಕಾಸು ಸಚಿವ ಕೆ ಎನ್ ಬಾಲಗೋಪಾಲ್ ಮತ್ತು ಸಹಕಾರ ಸಚಿವ ವಿ ಎನ್ ವಾಸವನ್ ಅವರಿಗೆ ಜವಾಬ್ದಾರಿಯನ್ನು ವಹಿಸಿದೆ.

ಕೇರಳದಲ್ಲಿನ ಸಹಕಾರ ಸಂಘಗಳು ಆರ್‌ಬಿಐನ ಈ ಹೊಸ ಮಾರ್ಗಸೂಚಿಗಳು ರಾಜ್ಯದ ಹಿತಾಸಕ್ತಿಗಳಿಗೆ ಹೇಗೆ ಪ್ರತಿಕೂಲ ಪರಿಣಾಮ ಬೀರುತ್ತವೆ ಎಂಬುದರ ಕುರಿತು ಆರ್‌ಬಿಐನೊಂದಿಗೆ ಚರ್ಚಿಸಲಾಗುವುದು. ಅಲ್ಲದೆ, ಕೇರಳವು ಇತರ ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸಲಿದೆ. ಇತರ ರಾಜ್ಯಗಳ ಸಹಕಾರ ಸಚಿವರೊಂದಿಗೆ ಸಮಾಲೋಚನೆ ನಡೆಸಲಾಗುವುದು. ಈ ವಿಷಯದ ಬಗ್ಗೆ ಕೇರಳದ ಕಳವಳಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಲು ನಿಯೋಗ ನವದೆಹಲಿಗೆ ತೆರಳಲಿದೆ.

ರಾಜ್ಯಗಳಲ್ಲಿನ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಲ್ಲಿ ಮಧ್ಯಪ್ರವೇಶಿಸುವ ಕೇಂದ್ರ ಸರ್ಕಾರದ ಕ್ರಮವನ್ನು 97ನೇ ಸಾಂವಿಧಾನಿಕ ತಿದ್ದುಪಡಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತಡೆಹಿಡಿದಿದೆ ಎಂದು ಇದೇ ಸಂದರ್ಭದಲ್ಲಿ ಸಚಿವ ವಿ ಎನ್ ವಾಸವನ್ ಅವರು ತಿಳಿಸಿದರು.

ಕೇರಳದಲ್ಲಿ 60 ಪ್ರತಿಶತ ಸೇವಾ ಸಹಕಾರಿ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕಾರಣ ಕೇಂದ್ರ ಸರ್ಕಾರವು ಇಂತಹ ಬಲವಾದ ನಕಾರಾತ್ಮಕ ನಿಲುವನ್ನು ತೆಗೆದುಕೊಳ್ಳುತ್ತಿದೆ ಎಂದು ವಾಸವನ್ ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿದ ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿ ಕಾಯ್ದೆಯ ಆಧಾರದ ಮೇಲೆ ಪ್ರಾಥಮಿಕ ಸಹಕಾರ ಸಂಘಗಳನ್ನು ನಿಯಂತ್ರಿಸಲು ಆರ್‌ಬಿಐ ಕಠಿಣ ನಿಬಂಧನೆಗಳನ್ನು ಹೇರಿತು. ಆದರೆ ಕೇರಳದಲ್ಲಿ ಕಾಯ್ದೆಯ ನಿಬಂಧನೆಗಳು ಪರಿಣಾಮಕಾರಿಯಾಗಿ ಜಾರಿಯಾಗಲಿಲ್ಲ. ಇದೀಗ ಕೇಂದ್ರ ಸರ್ಕಾರ ಈ ಮಾರ್ಗಸೂಚಿ ಹೊರಡಿಸುವ ಮೂಲಕ ರಾಜ್ಯದ ಮೇಲೆ ಒತ್ತಡ ಹೇರಲು ಮುಂದಾಗಿದೆ.

ದುರಹಂಕಾರಕ್ಕೆ ಸೋಲು

ಪುಟ 13 ರಿಂದ

ಅನೌಪಚಾರಿಕ ಮತ್ತು ಅನಿಯಂತ್ರಿತ ಮಾರುಕಟ್ಟೆಯಾಗಿ ಛಿದ್ರಗೊಳ್ಳಬಹುದು.

ಜೊತೆಗೆ, ಇನ್ನೂ ಎರಡು ಸಮಸ್ಯೆಗಳಿವೆ. ಒಂದು, ಪಂಜಾಬ್ ರಾಜ್ಯದಲ್ಲಿ ಮಂಡಿಗಳು ವಸೂಲು ಮಾಡುತ್ತಿದ್ದ ತೆರಿಗೆಯನ್ನು ಗ್ರಾಮೀಣ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬಳಸಲಾಗುತ್ತಿತ್ತು. ಮಂಡಿ ವ್ಯವಸ್ಥೆಯು ದುರ್ಬಲಗೊಂಡರೆ, ಗ್ರಾಮೀಣ ಮೂಲಸೌಕರ್ಯಗಳಿಗೆ ಯಾವ ಬದಲಿ ಮೂಲದಿಂದ ಹಣ ಬರುತ್ತದೆ? ಎರಡು, ಒಂದೊಮ್ಮೆ ಖಾಸಗಿ ಮಾರುಕಟ್ಟೆಗಳು ಬೆಳೆದು ಬಂದರೂ ಸಹ, ಸಣ್ಣ ಮತ್ತು ಅತಿ ಸಣ್ಣ ಬಡ ರೈತರ ಹೊಲದ ಬದಿಯಿಂದ ಅವರ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯುವಲ್ಲಿ ಇರುವ ಕೆಲವು ಸಮಸ್ಯೆಗಳನ್ನು ಖಾಸಗಿ ವ್ಯಾಪಾರಸ್ತರು ಹೇಗೆ ಪರಿಹರಿಸುತ್ತಾರೆ? ಒಬ್ಬ ಸಾಧಾರಣ ಮಧ್ಯವರ್ತಿಯ ಬದಲಾಗಿ ಇನ್ನೊಬ್ಬ ಸೂಟು ಬೂಟಿನ ಮಧ್ಯವರ್ತಿಯೊಂದಿಗಿನ ಬದಲಾವಣೆಯೇ? ಈ ಪ್ರಶ್ನೆಗಳಿಗೆ ತಕ್ಕ ಉತ್ತರಗಳು ಕೃಷಿ ಕಾನೂನುಗಳ ಸಮರ್ಥಕರ ಬಳಿಯಿಲ್ಲ.

ವಿವಾದಗಳು ಸಾಮಾನ್ಯವಾಗಿ ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಗೆ ಬರುತ್ತವೆ. ಆದರೆ, ಹೊಸ ಕಾನೂನಿನಡಿಯಲ್ಲಿ ಸಿವಿಲ್ ನ್ಯಾಯಾಲಯಗಳ ಈ ಅಧಿಕಾರವನ್ನು ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳಿಗೆ ವಹಿಸಲಾಗಿದೆ. ಈ ಬದಲಾವಣೆಯಿಂದ ಸಣ್ಣ ಮತ್ತು ಅತಿ ಸಣ್ಣ ಬಡ ರೈತರಿಗೆ ಭಾರೀ ಅನ್ಯಾಯವಾಗುತ್ತದೆ. ಇದು ಗುತ್ತಿಗೆ ಪಡೆದ ಕಾರ್ಪೊರೇಟ್‌ಗಳಿಗೆ ಮಾತ್ರ ಪ್ರಯೋಜನವಾಗಬಹುದು. ತನ್ನ ಒಂದೊ ಅಥವಾ ಎರಡೊ ಎಕರೆ ಜಮೀನನ್ನು ಒಂದು ದೊಡ್ಡ ಕಾರ್ಪೊರೇಟ್ ಕಂಪೆನಿಗೆ ಗುತ್ತಿಗೆ ಕೊಟ್ಟ ಬಡ ರೈತನೊಬ್ಬನು ತನ್ನ ಅಹವಾಲಿನ ಬಗ್ಗೆ ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ಕೋರ್ಟ್ ಇರುವ ಜಿಲ್ಲಾ ಕೇಂದ್ರದಲ್ಲಿ ಆ ಕಾರ್ಪೊರೇಟ್ ಕಂಪೆನಿಯ ವಿರುದ್ಧ ಸೆಣಸಲು ಸಾಧ್ಯವೇ? ಅದ್ದರಿಂದ, ಈ ಬದಲಾವಣೆಯ ಬಗ್ಗೆ ಟೀಕೆಗಳು ವ್ಯಾಪಕವಾಗಿವೆ.

ಕಾರ್ಪೊರೇಟ್‌ಗಳತ್ತ ಒಲವು

ಒಟ್ಟಾರೆಯಾಗಿ ಹೇಳುವುದಾದರೆ, ಈ ಕೃಷಿ ಕಾನೂನುಗಳು, ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪೆನಿಗಳು ಕೃಷಿ ಚಟುವಟಿಕೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸುತ್ತವೆ ಎಂದೇ ಹೇಳಬಹುದು. ಏಕೆಂದರೆ, ರೈತ ಸ್ನೇಹಿ ಸಂಸ್ಥೆಗಳಿಗೆ, ಅಂದರೆ, ರೈತ–ಸಹಕಾರ ಸಂಘಗಳು ಅಥವಾ ರೈತ ಉತ್ಪಾದಕ ಕಂಪನಿಗಳಂತಹ (ಎಫ್‌ಪಿಸಿ) ಸಂಸ್ಥೆಗಳಿಗೆ ಈ ಕಾನೂನುಗಳಲ್ಲಿ ಪ್ರಸ್ತಾಪವೇ ಇಲ್ಲ. ಅವುಗಳಿಗೆ ಸಲ್ಲಬೇಕಿದ್ದ ಸ್ಥಾನವನ್ನು ಕಾರ್ಪೊರೇಟ್ ಕಂಪೆನಿಗಳು ಆಕ್ರಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಗತ್ಯ ವಸ್ತುಗಳ ಕಾಯ್ದೆಯ ತಿದ್ದುಪಡಿಯಂತೂ ಬೆರಳೆಣಿಕೆಯ ಕಾರ್ಪೊರೇಟ್ ಆಟದಲ್ಲಿ ತೊಡಗಿರುವವರಿಗೆ ಸಾಗಾಟ, ಸಂಗ್ರಹಣೆ ಮತ್ತು ಉಗ್ರಾಣ ಸಂಬಂಧಿತ ಹೂಡಿಕೆಗಳಿಂದ ಭಾರೀ ಲಾಭ ಮಾಡಿಕೊಡಲಿದೆ.

ಮಂಡಿಗಳು ಸ್ಥಳೀಯ ಅರ್ಥವ್ಯವಸ್ಥೆಯಲ್ಲಿ ಮತ್ತು ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಪಂಜಾಬ್ ಮತ್ತು ಹರಿಯಾಣದಂತಹ ರಾಜ್ಯಗಳಲ್ಲಿ ರೈತರ ಪ್ರತಿಭಟನೆ ಆರಂಭವಾಯಿತು. ದಿನಗಳು ಕಳೆದಂತೆ, ಈ ಪ್ರತಿಭಟನೆಯು ಪಶ್ಚಿಮ ಉತ್ತರ ಪ್ರದೇಶ ಮತ್ತು ಅಲ್ಲಿಂದ ಇತರ ಅನೇಕ ರಾಜ್ಯಗಳಿಗೆ ಹರಡಿತು. ಕೆಲವೇ ತಿಂಗಳುಗಳಲ್ಲಿ, ಕೃಷಿ ಕಾನೂನುಗಳನ್ನು ರದ್ದುಗೊಳಿಸಬೇಕೆಂಬ ವಿಶಾಲ ಬೇಡಿಕೆಯೊಂದಿಗೆ ಸ್ಥಳೀಯ ಕೃಷಿ ಬೇಡಿಕೆಗಳ ನಿರಂತರ ಸೇರ್ಪಡೆಯೊಂದಿಗೆ ಈ ಪ್ರತಿಭಟನೆಯು ಇಡೀ ಭಾರತವನ್ನು ವ್ಯಾಪಿಸಿಕೊಳ್ಳುವ ವಿದ್ಯಮಾನವಾಗಿ ಪರಿಣಮಿಸಿತು. ಚಳುವಳಿಯು ಸ್ಥಳೀಯ ಸಮಸ್ಯೆಗಳೊಂದಿಗೆ ಸಮಗ್ರಗೊಂಡದ್ದು ಚಳುವಳಿಯ ಉದ್ದೇಶಕ್ಕೆ ಸಹಾಯವಾಯಿತು. ಅಸಾಮಾನ್ಯ ಸಂಖ್ಯೆಯಲ್ಲಿ ಮಹಿಳೆಯರು ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಪಶ್ಚಿಮ ಉತ್ತರ ಪ್ರದೇಶದಲ್ಲಿ, 2013ರ ಮುಜಾಫರ್ ನಗರ ಗಲಭೆಗಳ ನಂತರ ಪ್ರಜ್ಞಾಪೂರ್ವಕವಾಗಿ ಬೆಳೆಸಲಾದ ಕೋಮು ದ್ವೇಷದ ಹಿನ್ನೆಲೆಯಲ್ಲಿ ಜನರನ್ನು ಒಗ್ಗೂಡಿಸುವಲ್ಲಿ ರೈತ ಚಳುವಳಿಯು ಯಶಸ್ವಿಯಾಯಿತು. ನೂರಾರು ಪ್ರತಿಭಟನಾಕಾರರು ಸಾವಿಗೀಡಾದರು. ಆದರೂ, ಈ ಚಳುವಳಿಗೆ ದೇಶೀಯವಾಗಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲೂ ಅಪಾರ ಬೆಂಬಲ ದೊರೆಯಿತು.

ಅಸಹಿಷ್ಣುತೆಯ ಮನಸ್ಥಿತಿ


ರೈತ ಚಳುವಳಿಯ ಬಗ್ಗೆ ಸರ್ಕಾರ ತೋರಿದ ಪ್ರತಿಕ್ರಿಯೆಯಲ್ಲಿ ಕಂಡದ್ದು ಅದರ ದುರಹಂಕಾರ ಒಂದೇ ಅಲ್ಲ. ಅದು ಅಪ್ರಬುದ್ಧವೂ ಹೌದು. ರಿಹಾನ್ನಾ ಎಂಬ ಅಮೆರಿಕಾದ ಪಾಪ್ ತಾರೆ ಮತ್ತು ಪ್ರಸಿದ್ಧ ಗಾಯಕಿಯು ರೈತ ಪ್ರತಿಭಟನೆಗಳ ಬಗ್ಗೆ ಒಂದು ಮುಗ್ಧ ಕಾಮೆಂಟ್‌ಅನ್ನು ಟ್ವೀಟ್ ಮಾಡಿದಾಗ, ನಮ್ಮ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಇಡೀ ಯಂತ್ರವು ಮರ್ಮಾಘಾತಕ್ಕೆ ಒಳಗಾಯಿತೇನೋ ಎಂಬಂತೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿತು. ಬೇಜವಾಬ್ದಾರಿತನದ ಅವಳು ಮತ್ತು ಇತರ ಕೆಲವು ಪ್ರಸಿದ್ಧನಾಮರು ಗುಂಪುಗೂಡಿ ಭಾರತದ ಪ್ರತಿಷ್ಠೆ–ಪ್ರಗತಿಯನ್ನು ಅಪಖ್ಯಾತಿಗೊಳಿಸುವ ಪ್ರಚಾರದಲ್ಲಿ ತೊಡಗಿದ್ದಾರೆ ಎಂಬ ಸುದ್ದಿಯನ್ನು ಹರಡುವಂತೆ ಭಾರತೀಯ ರಾಯಭಾರ ಕಚೇರಿಗಳಿಗೆ ಹೇಳಲಾಯಿತು. ಈ ಪ್ರತಿಕ್ರಿಯೆಗಳು ಒಂದು ಅಸಹಿಷ್ಣು ಮನೋಭಾವ ಮತ್ತು ಆಳವಾದ ಅಭದ್ರತೆಗೆ ಒಳಗಾದ ಗೊಂದಲದ ಮನಸ್ಥಿತಿಯನ್ನಲ್ಲದೆ ಬೇರೇನನ್ನೂ ತೋರಿಸುವುದಿಲ್ಲ.

ಕೃಷಿ ಕಾನೂನುಗಳನ್ನು ರದ್ದುಗೊಳಿಸಿರುವುದರಿಂದ, ಕೊನೆಯ ಪಕ್ಷ ತಾತ್ಕಾಲಿಕವಾಗಿಯಾದರೂ, ಕೇಂದ್ರ ಸರ್ಕಾರ ಮತ್ತು ರೈತರ ನಡುವಿನ ಸಲೀಸಾಗಿ ತಪ್ಪಿಸಬಹುದಾಗಿದ್ದ ಸಂಘರ್ಷದ ಒಂದು ಕೆಟ್ಟ ಅಧ್ಯಾಯವನ್ನು ಕೊನೆಗೊಳಿಸಲಾಗಿದೆ. ಆದಾಗ್ಯೂ, ಪ್ರತಿಭಟನೆಯು ಹೊರಸೂಸಿದ ಆವೇಗವು ಖಂಡಿತವಾಗಿಯೂ ಮುಂದುವರಿಯುತ್ತದೆ. ಈ ಪ್ರತಿಭಟನೆಯು ಸ್ಥಿರ ಮಾರುಕಟ್ಟೆಗಳ ಅಗತ್ಯ ಮತ್ತು ಲಾಭದಾಯಕ ಬೆಲೆಗಳೂ ಸೇರಿದಂತೆ ಹಲವಾರು ಕೃಷಿ ಬೇಡಿಕೆಗಳನ್ನು ಒಂದು ಸಕಾರಾತ್ಮಕ ರಾಜಕೀಯ ವಿಷಯವಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ. ನಿಷ್ಠೆ, ಪ್ರಾಮಾಣಿಕತೆ ಮತ್ತು ಬದ್ಧತೆಗಳಿಂದ ಕೂಡಿದ ಹೋರಾಟಗಳು ಮಹತ್ವಪೂರ್ಣವಾಗುತ್ತವೆ ಮತ್ತು ಅಂತಹ ಹೋರಾಟಗಳು ಆಕ್ರಮಣಕಾರಿ ಸರ್ಕಾರಗಳನ್ನೂ ಸಹ ಮಂಡಿಯೂರಿ ನಿಲ್ಲುವಂತೆ ಮಾಡಬಲ್ಲವು ಎಂಬ ವಿಶ್ವಾಸವನ್ನು ಬೆಳೆಸುತ್ತವೆ. ಒಂದು ದೊಡ್ಡದಾದ ಮತ್ತು ನಿರಂತರವಾಗಿ ಕಾಡುತ್ತಿರುವ ಕೃಷಿ ಬಿಕ್ಕಟ್ಟನ್ನು ಪರಿಹರಿಸುವ ಬೇಡಿಕೆಗಳ ಸುತ್ತ ಗ್ರಾಮೀಣ ಜನತೆಯನ್ನು ಹೊಸದಾಗಿ ಅಣಿನೆರೆಸುವ ಸಾಧ್ಯತೆಗಳಿವೆ. ಹೊಸ ಸಂಘರ್ಷಗಳು ಹೊರಹೊಮ್ಮುವ ಮತ್ತು ಬೆಳೆಯುವ ಸಾಧ್ಯತೆಯಿದೆ. ಖಂಡಿತವಾಗಿಯೂ ಕುತೂಹಲ ಕೆರಳಿಸುವ ದಿನಮಾನಗಳಲ್ಲಿ ನಾವಿದ್ದೇವೆ.

‘ಕಲ್ಲಿದ್ದಲು ಬಿಡಿ, ಗ್ಯಾಸ್ ಇರಲಿ’: ಗ್ಲಾಸ್ಗೋದಲ್ಲಿ ‘ಹಸಿರು ಸಾಮ್ರಾಜ್ಯಶಾಹಿ’ಯ ಹುನ್ನಾರ?

ಗ್ಲಾಸ್ಗೊದ ಅಔಕ 26 ಹವಾಮಾನ ಸಮ್ಮೇಳನದಲ್ಲಿ ಕೆಲವು ಮುನ್ನಡೆಗಳು ಆದವು. ಎಲ್ಲ ದೇಶಗಳ ಒಟ್ಟು ಸಹಮತ ರೂಪಿಸುವ ಸವಾಲುಗಳ ಸಂದರ್ಭದಲ್ಲಿ ಇಷ್ಟಾದರೂ ಮುನ್ನಡೆ ಆಯಿತಲ್ಲ ಎಂದು ಮೇಲು ನೋಟಕ್ಕೆ ಎನಿಸಬಹುದು. ಆದರೆ ಇದು ನಿಜವಲ್ಲ. ಈಗ ಆಗಿರುವ ಮುನ್ನಡೆಗಳು ಶ್ರೀಮಂತ ದೇಶಗಳಿಗೆ ಅನುಕೂಲಕರವಾದವು, ಬಡ ದೇಶಗಳಿಗೆ ಮಾರಕವಾದವುಗಳು. ದೂರಗಾಮಿ ದೃಷ್ಟಿಯಲ್ಲಿ ನೋಡಿದರೆ ಹವಾಮಾನ ಬದಲಾವಣೆಯ ಅನಾಹುತ ತಡೆಯಲು ಸಹಾಯಕವಲ್ಲ. ಉದಾಹರಣೆಗೆ ಕಲ್ಲಿದ್ದಲು ಬಳಸುವುದನ್ನು ಕ್ರಮೇಣ ಕಡಿಮೆ ಮಾಡಬೇಕು ಎಂಬ ನಿರ್ಣಯವನ್ನೇ ಈ ದೃಷ್ಟಿಯಿಂದ ವಿಶ್ಲೇಷಿಸಬಹುದು.

ಜಗದ ಸುತ್ತ
ವಸಂತರಾಜ ಎನ್.ಕೆ.



ಹಿಂದಿನ ಸಂಚಿಕೆಗಳಲ್ಲಿ ಯು.ಕೆಯ ಗ್ಲಾಸ್ಗೊದ COP 26 ಹವಾಮಾನ ಸಮ್ಮೇಳನದಲ್ಲಿ ನಡೆದ ಚರ್ಚೆಗಳ ಕುರಿತು ವಿವರಿಸಲಾಗಿತ್ತು. ಆಗ ಸಮ್ಮೇಳನ ಇನ್ನೂ ಮುಗಿದಿರಲಿಲ್ಲ. ಸಮ್ಮೇಳನ ಒಂದು ದಿನದಷ್ಟು ವಿಸ್ತರಣೆ ಸಹ ಆಗಿತ್ತು. ಕೊನೆಗೂ ಸಮ್ಮೇಳನದಲ್ಲಿ ಏನಾಯಿತು? ನಿಜವಾಗಿಯೂ ಹೇಳಬೇಕೆಂದರೆ ಗಮನಾರ್ಹವಾದದ್ದು ಏನೂ ಆಗಲಿಲ್ಲ. ಈ ಕೆಳಗೆ ಕೊಟ್ಟ ಕೆಲವು ಸಣ್ಣ ಮುನ್ನಡೆಗಳು ಆದವು ಅಷ್ಟೇ:

1. ಗ್ಲಾಸ್ಗೋದಲ್ಲಿ ಎಲ್ಲ ದೇಶಗಳು ಕೊಟ್ಟ ಹೆಚ್ಚಿಸಿದ ಹೊಸ ರಾಷ್ಟ್ರೀಯ ನಿರ್ಧಾರಿತ (ಸೂಸುವಿಕೆ ಕಡಿತದ) ಕೊಡುಗೆ (ಎನ್.ಡಿ.ಸಿ)ಗಳನ್ನು ಪೂರ್ಣವಾಗಿ ಜಾರಿ ಮಾಡಿದರೂ 2.4 ಡಿಗ್ರಿ ಸೆ.(ಸೆಂಟಿಗ್ರೇಡ್) ನಷ್ಟು ಜಾಗತಿಕ ತಾಪಮಾನ ಏರಲಿದೆ. ಸೂಸುವಿಕೆಯಲ್ಲಿ ಶ್ರೀಮಂತ ದೇಶಗಳು ಸಾಕಷ್ಟು ತೀವ್ರಕಡಿತ ಮಾಡದ್ದು ಮತ್ತು ತಮ್ಮ ಮಂದ ಬೆಳವಣಿಗೆಯನ್ನು ಇನ್ನಷ್ಟು ಮಂದಗೊಳಿಸದೆ ಬಡ ದೇಶಗಳು ಹೆಚ್ಚಿನ ಸೂಸುವಿಕೆ ಕಡಿತ ಮಾಡುವ ಸ್ಥಿತಿಯಲ್ಲಿ ಇಲ್ಲದಿರುವುದೇ ಇದಕ್ಕೆ ಕಾರಣ.



2. ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆ ಗೆ ಮಿತಿಗೊಳಿಸಬೇಕಾದರೆ 2030 ರೊಳಗೆ ಈಗಿನ ಎರಡು ವರ್ಷಗಳ ಮತ್ತು 2.0 ಡಿಗ್ರಿ ಸೆ ಗೆ ಮಿತಿಗೊಳಿಸಬೇಕಾದರೆ 2030 ರೊಳಗೆ ಈಗಿನ ಒಂದು ವರ್ಷದ ಒಟ್ಟು ಸೂಸುವಿಕೆಯಷ್ಟು ಕಡಿತ ಮಾಡಬೇಕಾಗಿದೆ. 2022ರಲ್ಲಿ ಈಜಿಪ್ಟ್ ನಲ್ಲಿ ನಡೆಯಲಿರುವ ಮುಂದಿನ ಸಮ್ಮೇಳನದೊಳಗೆ 1.5 ಅಥವಾ 2.0 ಡಿಗ್ರಿ ಸೆ ಗೆ ಮಿತಿಗೊಳಿಸುವ ಇನ್ನಷ್ಟು ಹೆಚ್ಚು ಕಡಿತಗಳನ್ನು ದೇಶಗಳು ಕೊಡಬೇಕು ಎಂಬ ಕೋರಿಕೆಯಷ್ಟೇ ಮಾಡಲಾಯಿತು.

3. ಪ್ರತಿದೇಶದಲ್ಲಿ ಒಟ್ಟು ಶೂನ್ಯ ಸೂಸುವಿಕೆಯನ್ನು ಎಷ್ಟು ವರ್ಷಗಳಲ್ಲಿ ಸಾಧಿಸಬಹುದು ಎಂದು ಎಲ್ಲ ದೇಶಗಳು ತಿಳಿಸಿದವು. ಜಾಗತಿಕವಾಗಿ ಒಟ್ಟು ಶೂನ್ಯ ಸೂಸುವಿಕೆಯನ್ನು 2050 ರೊಳಗೆ ಸಾಧಿಸಬೇಕು ಎಂಬ ಗುರಿ ಮುಟ್ಟಬೇಕಾದರೆ ಶ್ರೀಮಂತ ದೇಶಗಳು 2030ರೊಳಗೆ ರಾಷ್ಟ್ರೀಯವಾಗಿ ಈ ಗುರಿ ಮುಟ್ಟಬೇಕು. ಆದರೆ ಅವು 2050ರ ಗುರಿಯನ್ನೇಕೊಟ್ಟಿವೆ. ಆದ್ದರಿಂದ ಈ ಜಾಗತಿಕಗುರಿ ಸಹ ಕಾರ್ಯಸಾಧ್ಯವಾಗುವಂತೆ ಕಾಣುತ್ತಿಲ್ಲ.

4. ವಿದ್ಯುಚ್ಛಕ್ತಿ ಉತ್ಪಾದನೆಗೆ ಕಲ್ಲಿದ್ದಲು ಬಳಸುವುದನ್ನು ಕ್ರಮೇಣ ಕಡಿಮೆ ಮಾಡಬೇಕು ಮತ್ತು ಅದಕ್ಷ ಇಂಧನ ಸಬ್ಸಿಡಿಗಳನ್ನು ಕಡಿತ ಮಾಡಬೇಕುಎಂದು ವಿಧಿಸಲಾಯಿತು

5. ಜಾಗತಿಕ ತಾಪಮಾನ ಏರಿಕೆಯ ದುಷ್ಪರಿಣಾಮ ಎದುರಿಸುತ್ತಿರುವ ಬಡ ದೇಶಗಳಿಗೆ, ಈ ಸಮಸ್ಯೆಗೆ ಮುಖ್ಯ ಕಾರಣವಾದ ಶ್ರೀಮಂತ ದೇಶಗಳು ತಂತ್ರಜ್ಞಾನ ಮತ್ತು ಧನಸಹಾಯ ಮಾಡಬೇಕು ಎಂಬುದರ ಬಗ್ಗೆ, 2025ರ ವರೆಗೆ ವಾರ್ಷಿಕ 100 ಶತಕೋಟಿ ಡಾಲರುಗಳ ಧನಸಹಾಯ ಮಾಡಬೇಕೆಂದು ಕೋರಿಕೆಯಷ್ಟೇ ಮಾಡಲಾಯಿತು.

ಎಲ್ಲ ದೇಶಗಳ ಒಟ್ಟು ಸಹಮತರೂಪಿಸುವ ಸವಾಲುಗಳ ಸಂದರ್ಭದಲ್ಲಿ ಇಷ್ಟಾದರೂ ಮುನ್ನಡೆ ಆಯಿತಲ್ಲ ಎಂದು ಮೇಲುನೋಟಕ್ಕೆ ಎನಿಸಬಹುದು. ಆದರೆ ಇದು ನಿಜವಲ್ಲ. ಈಗ ಆಗಿರುವ ಮುನ್ನಡೆಗಳು ಶ್ರೀಮಂತ ದೇಶಗಳಿಗೆ ಅನುಕೂಲಕರವಾದವು, ಬಡ ದೇಶಗಳಿಗೆ ಮಾರಕವಾದವುಗಳು. ದೂರಗಾಮಿ ದೃಷ್ಟಿಯಲ್ಲಿ ನೋಡಿದರೆ ಹವಾಮಾನ ಬದಲಾವಣೆಯ ಅನಾಹುತ ತಡೆಯಲು ಸಹಾಯಕವಲ್ಲ.

‘ಕಲ್ಲಿದ್ದಲು ಬಳಸುವುದನ್ನು ಕ್ರಮೇಣ ಕಡಿಮೆ ಮಾಡಬೇಕು’ ಜಾರಿ ಬಡದೇಶಗಳಿಗೆ ಸುಲಭವಲ್ಲ

ಉದಾಹರಣೆಗೆ ಕಲ್ಲಿದ್ದಲು ಬಳಸುವುದನ್ನು ಕ್ರಮೇಣ ಕಡಿಮೆ ಮಾಡಬೇಕು ಎಂಬ ನಿರ್ಣಯವನ್ನೇ ಈ ದೃಷ್ಟಿಯಿಂದ ವಿಶ್ಲೇಷಿಸಬಹುದು. ಈ ನಿರ್ಣಯದ ಹಿಂದೆ ಸೌರ, ಗಾಳಿ ಇತ್ಯಾದಿ ನವೀಕರಿಸಬಹುದಾದ ವಿದ್ಯುಚ್ಛಕ್ತಿ ಉತ್ಪಾದನಾ ವಿಧಾನಗಳ ವೆಚ್ಚ ಪ್ರತಿ ಯುನಿಟಿಗೆ ಕಲ್ಲಿದ್ದಲು, ಪೆಟ್ರೋಲ್, ಗ್ಯಾಸ್ ಮುಂತಾದವುಗಳಿಗಿಂತ ಕಡಿಮೆ. ಆದ್ದರಿಂದ ಇದರ ಜಾರಿ ಸುಲಭ ಸಾಧ್ಯ, ಅನುಕೂಲಕರವೆಂಬ ನಂಬಿಕೆಯಿದೆ. ಇದು ಬಂಡವಾಳ ಮತ್ತು ತಂತ್ರಜ್ಞಾನ ಎರಡೂ ಇರುವ ಶ್ರೀಮಂತ ದೇಶಗಳ ಮಟ್ಟಿಗೆ ನಿಜವಿರಬಹುದು. ಆದರೆ ಬಡದೇಶಗಳ ಮಟ್ಟಿಗೆ ನಿಜವಲ್ಲ. ಇದಕ್ಕೆ ಕಾರಣಗಳು ಹೀಗಿವೆ: ನವೀಕರಿಸಬಹುದಾದ ವಿದ್ಯುಚ್ಛಕ್ತಿ ಉತ್ಪಾದನಾ ವಿಧಾನಗಳ ಮೂಲಗಳಾದ ಸೌರ, ಗಾಳಿ ಇತ್ಯಾದಿಗಳು ಅನಿಶ್ಚಿತವಾಗಿರುವುದರಿಂದ, ಅಷ್ಟೇ ಒಟ್ಟು ವಿದ್ಯುಚ್ಛಕ್ತಿ ಉತ್ಪಾದಿಸಲು ವಿದ್ಯುತ್ ಗ್ರಿಡ್ ನಲ್ಲಿ 3–4 ಪಟ್ಟು ಹೆಚ್ಚು ಉತ್ಪಾದನಾ ಸಾಮರ್ಥ್ಯ ಸ್ಥಾಪಿಸಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಬಂಡವಾಳ ಬೇಕು. ಬಡ ದೇಶಗಳ ಬಳಿ ಇರುವ ಸೀಮಿತ ಬಂಡವಾಳದಿಂದಾಗಿ ಇದು ಅಸಾಧ್ಯವಾಗಬಹುದು. ಹೊಸ ನವೀಕರಿಸಬಹುದಾದ ಮೂಲಗಳ ಸ್ಥಾವರಗಳಿಗೆ ನಿರ್ದಿಷ್ಟವಾಗಿ ಧನ ಸಹಾಯದ ಖಾತರಿಯಿಲ್ಲದೆ, ಬಡದೇಶಗಳಿಗೆ ಅವುಗಳ ಬಳಿ ಈಗಾಗಲೇ ಇರುವ ಕಲ್ಲಿದ್ದಲು ಸ್ಥಾವರುಗಳನ್ನು ಮುಚ್ಚಿ ನವೀಕರಿಸಬಹುದಾದ ಮೂಲಗಳಿಂದ ವಿದ್ಯುಚ್ಛಕ್ತಿ ಉತ್ಪಾದಿಸುವಂತೆ ವಿಧಿಸಲಾಗುತ್ತಿದೆ. ಇದಕ್ಕೆ ಬದ್ಧವಾಗಿಲ್ಲದಿದ್ದರೆ ಶ್ರೀಮಂತ ದೇಶಗಳು ನಮ್ಮಿಂದ ಹೆಚ್ಚಿನ ಬಡ್ಡಿದರದಲ್ಲಿ ಸಾಲ ಕೊಂಡು ಇದನ್ನು ಮಾಡಿ ಇಲ್ಲವೆ ಆರ್ಥಿಕ ದಿಗ್ಬಂಧನ ಹಾಕುತ್ತೇವೆ ಎಂದು ಬೆದರಿಸಬಹುದು. ಈ ನಿರ್ಣಯ ‘ಹಸಿರು’ ಸಾಮ್ರಾಜ್ಯಶಾಹಿಯ ಹೊಸ ರೂಪವನ್ನು ಹೊರಿಸುವ ಹುನ್ನಾರವಿರಬಹುದೇ?

ನವೀಕರಿಸಬಹುದಾದ ಮೂಲಗಳಲ್ಲಿ ಅನಿಶ್ಚಿತತೆ ಮಾತ್ರವಲ್ಲ, ಭಾರೀ ಋತುಮಾನದ ವ್ಯತ್ಯಯಗಳಿರುತ್ತವೆ. ಸೌರ ಮಳೆ, ಚಳಿಗಾಲದಲ್ಲಿ ಕೆಲಸ ಮಾಡದೆ ಹೋಗಬಹುದು. ಗಾಳಿಯ ದಿಕ್ಕು ವೇಗಗಳಲ್ಲಿ ಸಹ ಋತುಮಾನದೊಂದಿಗೆ ಭಾರೀ ವ್ಯತ್ಯಯಗಳನ್ನು ಕಾಣಬಹುದು. ಇದರಿಂದಾಗಿ ದೀರ್ಘ ಕಾಲ ಉತ್ಪಾದಿತ ವಿದ್ಯುಚ್ಛಕ್ತಿಯನ್ನು ಸಂಗ್ರಹಿಸುವ ಹೊಸ ವಿಧಾನಗಳು ಅಗತ್ಯವಾಗುತ್ತವೆ. ಈ ತಂತ್ರಜ್ಞಾನಗಳು ಈಗಷ್ಟೇ ಶ್ರೀಮಂತ ದೇಶಗಳಲ್ಲಿ ಅಭಿವೃದ್ಧಿ ಪಡಿಸಲ್ಪಡುತ್ತಿವೆ. ಈಗ ಶ್ರೀಮಂತ ದೇಶಗಳಲ್ಲಿ ದಂಡಿಯಾಗಿರುವಕಲ್ಲಿದ್ದಲು, ಗ್ಯಾಸ್, ಅಣುಶಕ್ತಿ ಆಧಾರಿತ ಸ್ಥಾವರಗಳನ್ನು ಬಳಸಲಾಗುತ್ತಿವೆ. ಉದಾಹರಣೆಗೆ ಜರ್ಮನಿಯಲ್ಲಿ ಇತ್ತೀಚೆಗೆ ಗಾಳಿ ಯ ವೇಗದಲ್ಲಿತೀವ್ರ ವ್ಯತ್ಯಯಗಳಾದಾಗ ಕಲ್ಲಿದ್ದಲು ಸ್ಥಾವರಗಳನ್ನು ಬಳಸಲಾಯಿತು. ಹೀಗಾಗಿ ನವೀಕರಿಸಬಹುದಾದ ಮೂಲಗಳನ್ನು ಬರಿಯಅಥವಾ ಪ್ರಧಾನ ವಿದ್ಯುಚ್ಛಕ್ತಿಯಉತ್ಪಾದನಾ ವಿಧಾನವಾಗಿ ಬಳಸುವುದು ಬಡದೇಶಗಳಿಗೆ ಕಷ್ಟಸಾಧ್ಯಇದಕ್ಕೆ ಬೇಕಾದ ಬಂಡವಾಳವಾಗಲಿ, ತಂತ್ರಜ್ಞಾನವಾಗಲಿ ಅವುಗಳ ಬಳಿಯಿಲ್ಲ.

‘ಕಲ್ಲಿದ್ದಲು ಬಿಡಿ, ಗ್ಯಾಸ್ಇರಲಿ’: ಒಟ್ಟು ಸೂಸುವಿಕೆ ಕಡಿತದ ವಿಷಯ ಮರೆಮಾಚುವ ತಂತ್ರ

ಇಲ್ಲೇ ಶ್ರೀಮಂತ ದೇಶಗಳ ಗೋಮುಖ ವ್ಯಾಘ್ರತನ ಕಾಣಬಹುದು. ನವೀಕರಿಸಬಹುದಾದ ಮೂಲಗಳ ಹೆಚ್ಚಿನ ಸಾಮರ್ಥ್ಯದ ಸ್ಥಾವರ ಕಟ್ಟಲು ಬಂಡವಾಳ ಮತ್ತು ವ್ಯತ್ಯಯಗಳಾದಾಗ ಪೂರಕ ಸ್ಥಾವರಗಳಿವೆ. ಹೆಚ್ಚಿನ ಶ್ರೀಮಂತ ದೇಶಗಳು ಕಲ್ಲಿದ್ದಲ ಮೇಲೆ ಅವಲಂಬಿಸಿಲ್ಲ. ಈ ದೇಶಗಳಲ್ಲಿ ಗ್ಯಾಸ್ ವಿಪುಲವಾಗಿ ಲಭ್ಯವಿದೆ. ಗ್ಯಾಸ್ ಸ್ಥಾವರಗಳ ಸೂಸುವಿಕೆ ಕಲ್ಲಿದ್ದಲಿಗಿಂತ ಗಮನಾರ್ಹವಾಗಿ ಕಡಿಮೆಯಿದೆ ಎಂಬುದು ನಿಜ. ಆದರೆಇಲ್ಲೇ ವಿವಿಧ ದೇಶಗಳ ತಲಾ ವಿದ್ಯುತ್ ಬಳಕೆ ಪ್ರಮುಖವಾಗುತ್ತದೆ. ಯು.ಎಸ್ ನ ತಲಾ ವಿದ್ಯುತ್ ಬಳಕೆಯು ಭಾರತದ ಬಳಕೆಯ 9 ಪಟ್ಟು, ಉಗಾಂಡಾದ 90 ಪಟ್ಟು. ಯು.ಕೆಯ ಬಳಕೆ ಭಾರತದ ಬಳಕೆಯ 6 ಪಟ್ಟು, ಉಗಾಂಡಾ ಬಳಕೆಯ 60 ಪಟ್ಟು. ಯುರೋಕೂಟ ಮತ್ತು ಯುಕೆ ಯ ಒಟ್ಟು ಸೂಸುವಿಕೆಯು, ಅದರ ಎರಡು ಪಟ್ಟು ಜನಸಂಖ್ಯೆ ಇರುವ ಇಡೀ ಆಫ್ರಿಕಾ ಖಂಡದ ಸೂಸುವಿಕೆಯ ಎರಡು ಪಟ್ಟು. ಭಾರತದ ಸೂಸುವಿಕೆಗಿಂತ ಅದರ ಕಾಲು ಭಾಗ ಜನಸಂಖ್ಯೆ ಇರುವ ಯುಎಸ್ ನ ಸೂಸುವಿಕೆ ಗಮನಾರ್ಹವಾಗಿ ಹೆಚ್ಚಿದೆ. ಹೀಗೆ ಶ್ರೀಮಂತ ದೇಶಗಳ ತಲಾ ಮತ್ತು ಒಟ್ಟು ಸೂಸುವಿಕೆಯು ಬಡ ದೇಶಗಳಿಗಿಂತ ಹೆಚ್ಚು ಇರುವಾಗ ಒಟ್ಟು ಮತ್ತು ತಲಾ ಸೂಸುವಿಕೆಯ ನಿಯಂತ್ರಣ ಮಾಡಬೇಕೋ ಅಥವಾ ವಿದ್ಯುಚ್ಛಕ್ತಿಯ ಮೂಲದ ಮೇಲೆ ನಿರ್ಬಂಧ ಹೇರಬೇಕೋ? ಜಾಣತನದಿಂದ ಹವಾಮಾನ ತುರ್ತು ಪರಿಸ್ಥಿತಿಯ ದುರ್ಬಳಕೆ ಮಾಡಿ ವಿದ್ಯುಚ್ಛಕ್ತಿಯ ಮೂಲದ ಮೇಲೆ ನಿರ್ಬಂಧ ಹೇರಿರುವುದು ಹಸಿರು ಸಾಮ್ರಾಜ್ಯಶಾಹಿಯ ಇನ್ನೊಂದು ಕ್ರಮವಲ್ಲದೆ ಬೇರೆನಲ್ಲ.



ಹವಾಮಾನ ಬದಲಾವಣೆಗೆ ಕಾರಣವಾದ ಶ್ರೀಮಂತ ದೇಶಗಳ ಚಾರಿತ್ರಿಕ ಒಟ್ಟು ಸೂಸುವಿಕೆಯನ್ನು ಗಮನದಲ್ಲಿಟ್ಟುಕೊಂಡು ಅವುಗಳು ಇಂದಿನ ಸೂಸುವಿಕೆಯ ಕಡಿತದಲ್ಲಿ ದೊಡ್ಡ ಪಾಲು ತೆಗೆದುಕೊಳ್ಳಬೇಕೆಂಬ ನ್ಯಾಯಯುತ ಬೇಡಿಕೆಯನ್ನು ಸಹ ಇಲ್ಲಿ ಎತ್ತುತ್ತಿಲ್ಲ. ಸೂಸುವಿಕೆಯ ಕಡಿತದ ದೇಶವಾರು ಬಜೆಟ್ ಮುಖ್ಯಗುರಿಯಾಗಬೇಕು, ವಿದ್ಯುಚ್ಛಕ್ತಿಯ ಮೂಲ ಯಾವುದಿರಬೇಕುಎಂಬುದಲ್ಲ ಎಂಬ ಮೂಲಭೂತ ಪ್ರಶ್ನೆಯಿದು. ಬಡ ದೇಶಗಳು ಅವಲಂಬಿತವಾಗಿರುವ ಕಲ್ಲಿದ್ದಲನ್ನು ಕ್ರಮೇಣ ಬಿಟ್ಟು ಬಿಟಬೇಕುಎಂದು ಹೇಳುತ್ತಾ, ಶ್ರೀಮಂತ ದೇಶಗಳು ಹೊಂದಿರುವಗ್ಯಾಸ್ ಪೆಟ್ರೋಲ್ಇತ್ಯಾದಿ ಗಳ ಮೇಲೆ ಯಾವುದೇಇಂತಹ ನಿಬರ್ಂದ,ʼಗʼಳʼನʼನ್ನ ಹಾಕದಿರುವುದುಯಾವ ನ್ಯಾಯ? ತಮ್ಮಒಟ್ಟು ಸೂಸುವಿಕೆಯ ಮೇಲೆ ಯಾವುದೇ ಗಮನ ಹರಿಯದಂತೆ ಮಾಡುವ ಶ್ರೀಮಂತ ದೇಶಗಳ ಜಾಣ ನಡೆಯಿದು.

ಇದು ‘ಹಸಿರು ಸಾಮ್ರಾಜ್ಯಶಾಹಿ’ ಅಲ್ಲದೆ ಇನ್ನೇನು?

ಶ್ರೀಮಂತ ದೇಶಗಳ ಹುನ್ನಾರ ಇಷ್ಟಕ್ಕೆ ನಿಲ್ಲುವುದಿಲ್ಲ. ನಾರ್ವೆ ಆಫ್ರಿಕಾ ಮತ್ತು ಇತರ ಬಡ ದೇಶಗಳಲ್ಲಿ ತೈಲ ಮತ್ತು ಪ್ರಾಕೃತಿಕ ಗ್ಯಾಸ್ ಪ್ರಾಜೆಕ್ಟುಗಳಿಗೆ ವಿಶ್ವ ಬ್ಯಾಂಕ್ ಹಣಕಾಸು ಹೂಡುವುದನ್ನು ನಿಲ್ಲಿಸಬೇಕೆಂದು ಪ್ರಬಲವಾಗಿ ಲಾಬಿ ಮಾಡುತ್ತಿದೆ. ಅದೇ ಸಮಯದಲ್ಲಿ ನಾರ್ವೆ ಮತ್ತು ಇತರ ಉತ್ತರ ಯುರೋಪಿನ ಮತ್ತು ಬಾಲ್ಟಿಕ್ ತೀರದ ಏಳು ದೇಶಗಳು ತಮ್ಮತೈಲ ಮತ್ತು ಗ್ಯಾಸ್ ಉತ್ಪಾದನೆಯನ್ನು ರಭಸವಾಗಿ ವಿಸ್ತರಿಸುತ್ತಿವೆ. ನಾರ್ವೆ ಸೇರಿದಂತೆ 20 ದೇಶಗಳು ಗ್ಲಾಸ್ಗೊ ಸಮ್ಮೇಳನದಲ್ಲಿ ಇಂತಹುದೇ ಪ್ರಸ್ತಾವಗಳನ್ನು ಮಂಡಿಸಿದವು. ಹವಾಮಾನ ಬದಲಾವಣೆಗೆ ಕಾರಣವಾದ ತಮ್ಮ ಚಾರಿತ್ರಿಕ ಒಟ್ಟು ಸೂಸುವಿಕೆಯನ್ನು ಗಮನದಲ್ಲಿಟ್ಟುಕೊಂಡು ಶ್ರೀಮಂತ ದೇಶಗಳು ಅದರ ಪರಿಣಾಮ ಅನುಭವಿಸುವ ಬಡ ದೇಶಗಳಿಗೆ ಹಣಕಾಸು, ತಂತ್ರಜ್ಞಾನ ಕೊಡುವ ಮೂಲಕ ಪರಿಹಾರ ಒದಗಿಸಬೇಕೆಂಬ ವಿಷಯವನ್ನು ಎತ್ತದಂತೆ ಮಾಡಿವೆ, ಅದನ್ನು ನಿರ್ಲಕ್ಷ ಮಾಡಿವೆ. ಮಾತ್ರವಲ್ಲ ಗ್ಲಾಸ್ಗೊ ಮತ್ತಿತರ ಹವಾಮಾನ ಬದಲಾವಣೆ ಮಾತುಕತೆಗಳನ್ನು ಶಕ್ತಿಯ ಮೂಲಗಳ ಉತ್ಪಾದನೆ, ಪೂರೈಕೆ ನಿಯಂತ್ರಣದಲ್ಲಿ ತಾವು ಸಾಧಿಸಿರುವ ಏಕಸ್ವಾಮ್ಯವನ್ನು ಮುಂದುವರೆಸುವ ಗಟ್ಟಿಗೊಳಿಸುವ ವೇದಿಕೆಯಾಗಿ ಮಾಡುವ ದಾರ್ಷ್ಟ್ಯವನ್ನು ತೋರಿಸುತ್ತಿವೆ. ಅದಕ್ಕಾಗಿ ಬಡದೇಶಗಳು ತಮ್ಮ ಅಭಿವೃದ್ಧಿಗೆ ಅಗತ್ಯವಾದ ಶಕ್ತಿಯ ಮೂಲಗಳನ್ನು ಬೆಳೆಸಲು ಬೇಕಾದ ಹಣಕಾಸಿಗೆ ಕತ್ತರಿ ಹಾಕಲು ಹವಣಿಸುತ್ತಿರುವುದನ್ನು ‘ಹಸಿರು ಸಾಮ್ರಾಜ್ಯಶಾಹಿ’ ಅಲ್ಲದೆ ಇನ್ನು ಯಾವ ಹೆಸರಿಂದ ಕರೆಯಬೇಕು?

ಹವಾಮಾನ ಬದಲಾವಣೆಗೆ ಕಾರಣವಾಗುವ ಅನಿಲಗಳ ಸೂಸುವಿಕೆಯಲ್ಲಿ ಭಾರೀಕಡಿತ ಸಾಧಿಸದೆ ಮನುಕುಲಕ್ಕೆ ಭವಿಷ್ಯವಿಲ್ಲವೆಂಬುದು ನಿಜ, ಆದರೆ ಆಫ್ರಿಕಾ ಮತ್ತಿತರ ಬಡದೇಶಗಳು ಯು.ಎಸ್‌ತಲಾ ಬಳಕೆಯ 1/90 ರಷ್ಟಲ್ಲಿ ಅಲ್ಲಿಯ ಮಕ್ಕಳಿಗೆ ಭವಿಷ್ಯ ಮಾತ್ರವಲ್ಲ, ವರ್ತಮಾನವೂ ಇಲ್ಲ. ಬಡ ದೇಶಗಳ ಕಡಿತ ಅಸಾಧ್ಯವೆಂಬ ಪರಿಸ್ಥಿತಿಯಲ್ಲಿ ಶ್ರೀಮಂತ ದೇಶಗಳು ಸಹ ಭಾರೀಕಡಿತ ಮಾಡದಿದ್ದರೂ ಮನುಕುಲಕ್ಕೆ ಭವಿಷ್ಯವಿಲ್ಲವೆಂಬುದು ಸಹ ಅಷ್ಟೇ ನಿಜ, ಇನ್ನೊಂದು ಕಡೆ ಪ್ರಧಾನಿ ಮೋದಿ ಮತ್ತು ಅವರ ಬೆಂಬಲಿಗರು ಭಾರತ ಅಭಿವೃದ್ಧ ದೇಶವಾಗುವ ಸೂಪರ್ ಪವರ್

ಆಗುವ ಹಾದಿಯಲ್ಲಿದೆ ಎಂದು ಕನಸು ಕಾಣುತ್ತಿದ್ದಾರೆ. ಆದರೆತಲಾ ಶಕ್ತಿ ಉತ್ಪಾದನೆ, ಪೂರೈಕೆ, ಬಳಕೆಯಲ್ಲಿ ಭಾರತ ಆಫ್ರಿಕಾದ ಮಟ್ಟದಲ್ಲಿದೆ ಎಂಬುದು ಅವರಿಗೆ ತಿಳಿದಂತಿಲ್ಲ.

JANASHAKTHI KANNADA VARA PATRIKE NOVEMBER 29-DECEMBER 05, 2021 Price: Rs. 10/- Date of Publication: 26 NOVEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ದೇಶದ ಜನತೆಗೆ ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುವ ಪಕ್ಷದಿಂದ ಅಭಿವೃದ್ಧಿ ಬಯಸುವುದು ಸಾಧ್ಯವಿಲ್ಲ: ಯು. ಬಸವರಾಜ

ಸಿಪಿಐ(ಎಂ) ರಾಯಚೂರು ಜಿಲ್ಲಾ 13ನೇ ಸಮ್ಮೇಳನ



ನವೆಂಬರ್ 23, 2021 ರಂದು ಜಾಲಹಳ್ಳಿ ಪಟ್ಟಣದಲ್ಲಿ ಆಯೋಜಿಸಿದ್ದ ರಾಯಚೂರು ಜಿಲ್ಲಾ ಮಟ್ಟದ 13ನೇ ಸಮ್ಮೇಳನದ ಬಹಿರಂಗ ಸಭೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಉದ್ಘಾಟಿಸಿದರು. ನಂತರ ಮಾತನಾಡಿ ಕಳೆದ 7 ವರ್ಷಗಳಿಂದ ದೇಶದ ಜನತೆಗೆ ಸುಳ್ಳು ಹೇಳುವ ಮೂಲಕ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಿಂದ ಅಭಿವೃದ್ಧಿ ಬಯಸುವುದು ಸಾಧ್ಯವಿಲ್ಲ ಎಂದು ಆರೋಪಿಸಿದ್ದರು.

ದೇಶದ ಜನತೆ ಪ್ರತೀ ವರ್ಷ 35 ಲಕ್ಷ ಕೋಟಿ ರೂಪಾಯಿಯಂತೆ ಕಳೆದ 7 ವರ್ಷಗಳಿಂದ ಸುಮಾರು 250 ಲಕ್ಷ ಕೋಟಿ ರೂಪಾಯಿ ಹಣ ತೆರಿಗೆ ಪಾವತಿಸಿದ್ದಾರೆ. ಜನತೆಗೆ ಅನುಕೂಲವಾಗುವಂತಹ ಯಾವ ಕೆಲಸ ಮಾಡಿದ್ದಾರೆ ಎಂದು ಅವರು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು. 2014 ರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ವರ್ಷಕ್ಕೆ ಎರಡು ಕೋಟಿ ಉದ್ಯೋಗ, ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ರೂಪಾಯಿ, ಬಡವರಿಗೆ ವಸತಿ, ಮಹಿಳೆರಿಗೆ ರಕ್ಷಣೆ ಸೇರಿದಂತೆ ಯಾವುದೇ ಬೇಡಿಕೆಗಳನ್ನು ಈಡೇರಿಸಿಲ್ಲವೆಂದು ಆರೋಪಿಸಿದರು. ಪ್ರಪಂಚದಲ್ಲಿಯೇ ಅಪೌಷ್ಠಿಕತೆಯಿಂದ ಬಳಲುತ್ತಿರುವ 107 ದೇಶಗಳಲ್ಲಿ ಭಾರತಕ್ಕೆ 101 ಸ್ಥಾನ ಇದೆ. ದೇಶದಲ್ಲಿ ಪ್ರತೀ ನಿಮಿಷಕ್ಕೆ 12 ಜನ ಹಸಿವುನಿಂದ ಸಾವನ್ನಾಪ್ಪುತ್ತಿದ್ದಾರೆ. ದೇಶವನ್ನು ಆಳುತ್ತಿರುವು ಬಿಜೆಪಿ ಪಕ್ಷಕ್ಕೆ ನಾಚಿಕೆ ಆಗಬೇಕು. ದೇಶದ ಜನರಲ್ಲಿ ಖರೀದಿ ಮಾಡುವ ಶಕ್ತಿ ಕಳೆದಕೊಂಡಿದ್ದಾರೆ. ಈಗಾಗಿ ಸುಮಾರು 18 ಲಕ್ಷ ಕೈಗಾರಿಕೆಗಳು ಮುಚ್ಚಿವೆ. ಅದರಲ್ಲಿ ದುಡಿಯುತ್ತಿರುವ ಜನ ಬೀದಿಗೆ ಬಂದಿದ್ದಾರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಜನರ ಸಮಸ್ಯೆಗಳನ್ನು ಪರಿಹರಿಸುವ ಯಾವುದೇ ಕಾಳಜಿ ಇಲ್ಲವಾಗಿದೆ ಎಂದರು. ಪಟ್ಟಣದ ನಿಜ ಶರಣ ಅಂಬಿಗೇರ ಚೌಡಯ್ಯ ಭವನದಿಂದ ರಂಗನಾಥ ಸ್ವಾಮಿ ಮೈದಾನದ ವರೆಗೆ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಸಿಪಿಐಎಂ ಪಕ್ಷದ ರಾಜ್ಯ ಕೇಂದ್ರ ಸದಸ್ಯರಾದ ನಿತ್ಯಾನಂದ ಸ್ವಾಮಿ, ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಜಿ. ವಿರೇಶ, ಎಚ್.ಪದ್ಮಾ, ನರಸಣ್ಣ ನಾಯಕ, ಶೇಕ್ಷಾ ಖಾದ್ರಿ, ಶರಣಬಸವ, ಕರಿಯಪ್ಪ ಅಚ್ಚೊಳ್ಳಿ, ಗಿರಿಯಪ್ಪ ಪೂಜಾರಿ, ಶಬ್ಬೀರ್ ಅಹ್ಮದ್, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಸಿಪಿಐ(ಎಂ) ಪಕ್ಷದ ರಾಯಚೂರು ಜಿಲ್ಲಾ ಕಾರ್ಯದರ್ಶಿಯಾಗಿ ಕೆ.ಜಿ. ವೀರೇಶ್ ಆಯ್ಕೆ

ಜಾಲಹಳ್ಳಿ ಪಟ್ಟಣದ ನಿಜ ಶರಣ ಅಂಬಿಗರ ಚೌಡಯ್ಯ ಭವನದಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 13ನೇ ರಾಯಚೂರು ಜಿಲ್ಲಾ ಸಮ್ಮೇಳನ ನಡೆಯಿತು. ಸಮಿತಿಯ ಸದಸ್ಯರಾಗಿ ಕೆ.ಜಿ. ವಿರೇಶ್, ಡಿ.ಎಸ್. ಶರಣಬಸವ, ಹೆಚ್. ಪದ್ಮಾ, ಶಬ್ಬೀರ್ ಜಾಲಹಳ್ಳಿ, ನರಸಣ್ಣ ನಾಯಕ, ಶೇಕ್ಷಾಖಾದ್ರಿ, ಯಂಕಪ್ಪ ಕೆಂಗಲ್, ಸಂಗಮೇಶ ಮೂಲಿಮನಿ, ಕರಿಯಪ್ಪ ಅಚ್ಚೊಳಿ, ವರಲಕ್ಷ್ಮಿ, ಜೆ. ತಾಯಮ್ಮ, ಪಿ. ಗಿರಿಯಪ್ಪ, ಶ್ರೀಧರ, ಶರ್ಪೋದಿನ್ನಿ, ರಮೇಶ್ ವೀರಪೂರ ರಾಯಚೂರು ಜಿಲ್ಲಾ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ರಾಯಚೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಕೆ.ಜಿ. ವೀರೇಶ್ ಆಯ್ಕೆಯಾದರು.

ಧರ್ಮದ ಹೆಸರಲ್ಲಿ ಬಿಜೆಪಿ ಮತ್ತು ಸಂಘಪರಿವಾರ ದೇಶ ವಿಭಜಿಸುವ....... ಪುಟ 8 ರಿಂದ

ಬಗ್ಗೆ ನಿರ್ಣಯವೊಂದನ್ನು ಅಂಗೀಕರಿಸಿದ್ದು, ಜಿಲ್ಲೆಯಲ್ಲಿರುವ, ಪಾಳೆಯಗಾರಿ, ಊಳಿಗಮಾನ್ಯ ಪ್ರತಿಗಾಮಿ ಮೌಲ್ಯಗಳು ಮತ್ತು ಬಲಪಂಥೀಯ ರಾಜಕೀಯ ಚಿಂತನೆಗಳ, ಪ್ರತಿಫಲ ಎಂದು ಸೈದ್ಧಾಂತಿಕವಾಗಿ ವಿಶ್ಲೇಷಿಸಿರುವ ನಿರ್ಣಯವು ಎಲ್ಲಾ ರೀತಿಯ ಅನಿಷ್ಠ ಪದ್ಧತಿಗಳು, ಜಾತಿ–ಭೇದ, ಲಿಂಗಭೇದ ಮತ್ತು ಅಸ್ಪೃಶ್ಯತಾ ಆಚರಣೆಗಳ ವಿರುದ್ಧ ರಾಜಿರಹಿತ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದೆ. ಪ್ರಜಾಸತ್ತಾತ್ಮಕ, ಪ್ರಗತಿಪರ ವೈಜ್ಞಾನಿಕ ಮನೋಭಾವ ಪ್ರಬಲವಾಗಿ ನೆಲೆಯೂರಲು ಶ್ರಮಿಸಬೇಕೆಂದು ಕರೆ ನೀಡಿದೆ.

ಈ ಸಮ್ಮೇಳನವು ಜಿಲ್ಲೆಯ ದಲಿತ ಮತ್ತು ಆದಿವಾಸಿಗಳ ಹಕ್ಕುಗಳ ಸಂರಕ್ಷಣೆಗಾಗಿ, ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ, ಕುದುರೆಮುಖ ರಕ್ಷಿತಾರಣ್ಯ ಅಧಿಕಾರಿಗಳಿಂದ ನಡೆಯುತ್ತಿರುವ ಮೂಲಭೂತ ಹಕ್ಕುಗಳ ದಮನಕಾರಿ ನಿಲುವನ್ನು ಖಂಡಿಸಿ ನಿರ್ಣಯವನ್ನು ಅಂಗೀಕರಿಸಿದೆ.

ಜಿಲ್ಲೆಯ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಅಂಗೀಕರಿಸಿರುವ ನಿರ್ಣಯದಲ್ಲಿ ಖಾಸಾಗಿ ವೈದ್ಯಕೀಯ ಲಾಭಿಗೆ ಸರಕಾರ ಮಣಿದಿದ್ದು ಬಡವರಿಗೆ ಕನಿಷ್ಠ ಆರೋಗ್ಯಕ್ಕೆ ಅನುಕೂಲವಾದ ಸನ್ನಿವೇಶ ಇಲ್ಲದಾಗಿದೆ. ಜಿಲ್ಲೆಯ ಎಲ್ಲಾ ಸರಕಾರಿ ಆಸ್ಪತ್ರೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಾಗಿ ಪರಿವರ್ತಿಸಿ ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆ ಬಡವರಿಗೆ ದೊರಕಬೇಕೆಂದು ಒತ್ತಾಯಿಸಿದೆ. ಜಿಲ್ಲೆಯಲ್ಲಿ ಸರಕಾರದ ವೈದ್ಯಕೀಯ ಕಾಲೇಜು ಪ್ರಾರಂಭಿಸಬೇಕೆಂದು ಒತ್ತಾಯಿಸಿದೆ.

ಶಿಕ್ಷಣ ರಂಗದ ಬಗ್ಗೆ ಅಂಗೀಕರಿಸಿರುವ ನಿರ್ಣಯದಲ್ಲಿ ಮೂಲಭೂತ ಅವಶ್ಯಕತೆಗಳ ಕೊರತೆಯಿಂದ ಸರಕಾರಿ ಶಿಕ್ಷಣ ಸಂಸ್ಥೆಗಳು ಸೊರಗಿದ್ದು ಶಿಕ್ಷಕರ ಕೊರತೆ, ಗ್ರಂಥಾಲಯದ ಕೊರತೆ, ಕಟ್ಟಡ ಕೊರತೆಯು ಸಾಮಾನ್ಯ ಸಮಸ್ಯೆಯಾಗಿದೆ. ಜಿಲ್ಲೆಯಲ್ಲಿ ಸರಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಜಿಲ್ಲೆಯಲ್ಲಿ ನಿವೇಶನ ರಹಿತರ ಸಂಖ್ಯೆ ಅಗಾಧ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಮನೆ ನಿವೇಶನ ವಿತರಣೆಯನ್ನು ತಕ್ಷಣ ಕೈಗೆತ್ತಿಕೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ಸರಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಬಡಕುಟುಂಬಗಳಿಗೆ ಹಕ್ಕುಪತ್ರ ವಿತರಣೆ, ಅಕ್ರಮ ಸಕ್ರಮ ಅರ್ಜಿಗಳ ತ್ವರಿತ ವಿಲೇವಾರಿಗಾಗಿ ಒತ್ತಾಯಿಸಿದೆ.


ಕೆ. ಯಾದವ ಶೆಟ್ಟಿ

ಡಿಸೆಂಬರ್ 2 ಮತ್ತು 3 ರಂದು ದೇಶದಾದ್ಯಂತ ನಡೆಯುವ ಕಟ್ಟಡ ಕಾರ್ಮಿಕರ ಮುಷ್ಕರವನ್ನು ಯಶಸ್ವಿಗೊಳಿಸಲು ನಿರ್ಣಯಿಸಿದೆ.

ಸಿಪಿಐ(ಎಂ) ದ.ಕ. ಜಿಲ್ಲಾ ನೂತನ ಕಾರ್ಯದರ್ಶಿಯಾಗಿ ಕೆ. ಯಾದವ ಶೆಟ್ಟಿ ಆಯ್ಕೆ

ಮುಂಬರುವ 3 ವರ್ಷಗಳ ಅವಧಿಗೆ ನೂತನ ದ.ಕ. ಜಿಲ್ಲಾ ಕಾರ್ಯದರ್ಶಿಯಾಗಿ ಕೆ. ಯಾದವ ಶೆಟ್ಟಿಯವರನ್ನು ಸಮ್ಮೇಳನವು ಆಯ್ಕೆ ಮಾಡಿದೆ. ಒಟ್ಟು 19 ಮಂದಿಯನ್ನು ಒಳಗೊಂಡಿರುವ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಜೆ. ಬಾಲಕೃಷ್ಣ ಶೆಟ್ಟಿ, ಮುನೀರ್ ಕಾಟಿಪಳ್ಳ, ಸುನೀಲ್ ಕುಮಾರ್ ಬಜಾಲ್, ಡಾ। ಕೃಷ್ಣಪ್ಪ ಕೊಂಚಾಡಿ, ಸುಕುಮಾರ್, ಸದಾಶಿವದಾಸ್, ಪದ್ಮಾವತಿ ಶೆಟ್ಟಿಯವರು ಆಯ್ಕೆಯಾಗಿದ್ದಾರೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**